MYSORE LEGISLATIVE ASSEMBLY.

Saturday, 26th March 1966.

The House met in the Assembly Chamber, Vidhana Soudha, Bangalore, at Thirty Minutes past Eight of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

PAPERS LAID ON THE TABLE

Sri D. DEVARAJ URS (Minister for Transport and Tourism).—Sir, on behalf of the Chief Minister, I beg to lay on the Table, a copy of Notification No. GAD 61 SSR 64, dated 9th November, 1965 (The Mysore Public Service Commission (Conduct of Service Examination) Rules, 1965, as required under sub-section (3) of section 18 of the Mysore Public Service Commission (Conduct of Business and Additional Functions) Act, 1959.

Also Sir, on behalf of the Minister for Development, Panchayat Raj and Municipal Administration, I beg to lay on the Table a copy of the Notification No. PLM 38 MLR 65 dated 21st February 1966 (The Mysore Municipalities (Levy and Collection of Fees in respect of Jatra, Urs) Rules, 1966, as required under sub-section (6) of section 323 of the Mysore Municipalities Act, 1964.

38TH REPORT OF THE BUSINESS ADVISORY COMMITTEE

Mr. SPEAKER.—I present the 38th Report of the Business Advisory Committee.

BUDGET ESTIMATES FOR 1966-67—DEMANDS FOR GRANTS

DEMAND NOS. 4, 26, 39 AND 23

† ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ (ತಿಪಟೂರು).—ಸ್ವಾಮಿ, ಈಗ ಸರ್ಕಾರಿ ಬಸ್‌ಗಳಿಂದ ಸುಮಾರು 50 ಸುಮಾರು ರೂಪಾಯಿ ಲಾಭ ಬಂದಿದೆ ಎಂದು ಮಾನ್ಯ ಮಂತ್ರಿಗಳು ಒಂದು ವರದಿಯನ್ನು ಪತ್ರಿಕೆಯಲ್ಲಿ ಕೊಟ್ಟಿದ್ದಾರೆ. ಆದರೆ ನಾನಾದರೂ ಹೇಳುತ್ತೇನೆ, ಇದು ಲಾಭವಲ್ಲ. ಇದು ಆಗಿದ್ದಂತಹ 16 ಲಕ್ಷ ನಷ್ಟದಲ್ಲಿ 50 ಸಾವಿರ ಕಡಿಮೆಯಾಗಿದೆಯೇ ಹೊರತು ಬೇರೇನೂ ಅಲ್ಲ. ಯಾವ ಕಾರಣದಿಂದಲೂ ಕೂಡ ಲಾಭ ಬಂದಿಲ್ಲ. ಇಂದು ಬೆಂಗಳೂರಿನ ಜನಜೀವನ ಕುಸಿತವಾಗುವುದಕ್ಕೆ ಒಂದು ಕಾರಣ ಈ ಸರ್ಕಾರಿ ಬಸ್ಸುಗಳೇ ಎಂದು ನಾನು ಹೇಳುತ್ತೇನೆ. ಇಂದು ಒಬ್ಬ ಮನುಷ್ಯ ಅವನ ಆಫೀಸಿಗೋ ಅಥವಾ ಇನ್ನಾವ ಕಡೆಗಾದರೂ ಹೋಗಬೇಕಾದರೆ ಕನಿಷ್ಟ ಪಕ್ಷ ಅವನು ಒಂದು

†Indicates that the speeches or remarks have not been revised by the member concerned

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ಒಂದೂವರೆ ಗಂಟೆಯಾದರೂ ಕಾಯಬೇಕಾಗುತ್ತದೆ. ಒಂದೇ ಸಾರಿ 4-5 ಬಸ್ಸುಗಳು ಬರುತ್ತವೆ. ಒಂದೆರಡು ಬಸ್‌ಗಳು ಕೆಲವು ಜನರು ಕಾಯುತ್ತಿರುವವರನ್ನು ತಗೆದುಕೊಂಡು ಹೋಗುತ್ತವೆ. ಮಿಕ್ಕ ಬಸ್‌ಗಳೆಲ್ಲಾ ಖಾಲಿ ಹೋಗುತ್ತವೆ. ಉದಾಹರಣೆಗೆ ಹೇಳುವುದಾದರೆ, ನಂಬರು 58,59, 11 ಮತ್ತು 61 ಬಸ್‌ಗಳಲ್ಲಿ ತಾವು ಇದನ್ನೆಲ್ಲಾ ನೋಡಬೇಕು. ಇನ್ನು ಕೆಲವು ಕಡೆ ಸ್ಟೇಜಸ್ ಎಂದು ಮಾಡಿದ್ದಾರೆ. ಕೆಲವು ಕಡೆ ಮುಕ್ಕಾಲು ಫರ್ಲಾಂಗುಗಳಿಗೆ ಒಂದು ಬಸ್ ನಿಲ್ದಾಣ ಇದೆ. ಆದರೆ ಇನ್ನು ಕೆಲವು ಕಡೆ ಇದಕ್ಕೆ ಸರಿಯಾದ ಇತಿಮಿತಿಗಳೇ ಇಲ್ಲ. ಇದರಿಂದ ಏನಾಗಿದೆ ಎಂದರೆ, ಅಧಿಕಾರಿಗಳಿರುವ ಕಡೆ, ಇನ್‌ಫ್ಲುಯೆನ್ಸ್ ಇದ್ದವರ ಕಡೆ, ವರ್ಕಿಂಗ್ ಕಮಿಟಿ ಮೆಂಬರ್ಸ್ ಆಫ್ ಕಾಂಗ್ರೆಸ್ ಎಗ್ಸಿಬಿಶನ್ ಇತ್ಯಾದಿ ಜನರಿರುವ ಕಡೆ ಇದನ್ನೆಲ್ಲಾ ಮಾಡುತ್ತಾರೆಯೇ ವಿನಹ, ಸಾಮಾನ್ಯ ಜನರಿಗೆ, ಅನುಕೂಲವಾಗುವ ರೀತಿಯಲ್ಲಿ ಇದನ್ನು ಮಾಡುತ್ತಾ ಇಲ್ಲ. ಇದನ್ನು ಸರಿಯಾಗಿ ನೆರವೇರಿಸಿ, ಎಲ್ಲೆಲ್ಲಿ ಸಾಮಾನ್ಯ ಜನರು ಇದ್ದಾರೋ ಅಲ್ಲೆಲ್ಲಾ ಅವರಿಗೆ ಅನುಕೂಲವಾಗುವಂತೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಕೊಡಗಿನಲ್ಲಿ ನಮ್ಮ ಸರ್ಕಾರಿ ಬಸ್ಸುಗಳು ಹೋಗಿ ರಾತ್ರಿ ನಿಲ್ಲುತ್ತವೆ. ಅಲ್ಲಿ ಹೋದ ತಕ್ಷಣ ಬಸ್ಸಿನ ಟೈಯರನ್ನು ತೆಗೆದು ಲಾರಿಯವರಿಗೆ ಬಾಡಿಗೆ ರೂಪದಲ್ಲಿ ಕೊಡುತ್ತಿರುತ್ತಾರೆ. ಲಾರಿಯವರು ಇದನ್ನು ತೆಗೆದುಕೊಂಡು ಹೋಗಿ ಬೆಳಗಿನ ಜಾವ 4-5 ಗಂಟೆಯೊಳಗೆ ವಾಪಸ್ಸು ತಂದು ಫಿಕ್ಸ್ ಮಾಡಿಬಿಡುತ್ತಾರೆ. ಬೆಳಗ್ಗೆ ಅದನ್ನು ಇವರು ಇವರ ಬಸ್ಸಿಗೆ ಹಾಕಿಕೊಂಡು ಬರುತ್ತಾರೆ. ಇದನ್ನೆಲ್ಲಾ ಸರಿಪಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಈಗ ಕಂಡಕ್ಟರನ್ನು ದೂಷಿಸುವುದು ಬಹಳ ಅನ್ಯಾಯ. ಇವತ್ತು ಅವನು ದಿವಸಕ್ಕೆ 50 ರೂಪಾಯಿ ಜಾಸ್ತಿ ಸಂಪಾದಿಸದಿದ್ದರೆ ಅವನ ಕೆಲಸವನ್ನು ಉಳಿಸಿಕೊಳ್ಳಲು ಅಸಾಧ್ಯ. ಬೆಳಗಿನಿಂದ ಸಂಜೆಯಾಗುವುದೊರೊಳಗೆ ಅವನನ್ನು ಡಿಸ್‌ಮಿಸ್ ಮಾಡುವ ಸಂದರ್ಭಗಳು ಬರುತ್ತವೆ. ಕಾರಣ, ಅವನು ಮೂರು ರೂಪಾಯಿ ಜೇಬಿನೊಳಗೆ ಹಾಕಿಬಿಟ್ಟ, ಇಲ್ಲವೇ ಬೇರೆ ಜಾಸ್ತಿ ಜನರನ್ನು ತೆಗೆದುಕೊಂಡು ಬಿಟ್ಟ, ಹೀಗೆ ಹೇಳಿ ನಾನಾಕಾರಣಗಳಿಗೆ ಅವನನ್ನು ಶಿಕ್ಷಿಸುತ್ತಾರೆ. ಇದನ್ನೆಲ್ಲಾ ಮಾನ್ಯ ಮಂತ್ರಿಯವರು ಇನ್ನು ಮುಂದಾದರೂ ಕೂಡ ನೋಡಿಕೊಂಡು ಸರಿಪಡಿಸಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಬಹುಶಃ ಇವತ್ತಿನವರೆಗೆ ಇವರು ಯಾವುದನ್ನೂ ಚೆಕ್ ಮಾಡಿಲ್ಲ ಎಂದು ಕಾಣುತ್ತದೆ. ಕೆಲವರು ಹೇಳುತ್ತಾರೆ, ನೀವು ಸ್ವಲ್ಪ ಸರ್ಕಾರವನ್ನು ಅಲ್ಲಾಡಿಸಬೇಕು ಎಂದು. ಆದರೆ ನಾನು ಅದಕ್ಕೆ ಹೇಳಿದೆ, ಸರ್ಕಾರವೇ ಇಂದು ಅಲ್ಲಾಡುತ್ತಾ ಇದೆ, ನಾವೇನು ಅಲ್ಲಾಡಿಸಬೇಕಾಗಿಲ್ಲ ಎಂದು.

ಅಮೇಲೆ, ಕೊ-ಅಪರೇಶನ್ ಮತ್ತು ಪಂಚಾಯಿತ್ತಿ ತಾಲ್ಲೂಕ್‌ಬೋರ್ಡ್ ಇತ್ಯಾದಿಗಳ ಚುನಾವಣೆಯನ್ನು ಮಾಡುವುದಕ್ಕೋಸ್ಕರ ಶ್ರೀ ಕೊಂಡಜ್ಜಿ ಬಸಪ್ಪನವರ ಒಂದು ಕಮಿಟಿಯನ್ನು ರಚನೆ ಮಾಡಿದಿರಿ. ಇದಕ್ಕಾಗಿ ಸುಮಾರು ಲಕ್ಷಗಟ್ಟಲೆ ಖರ್ಚು ಕೂಡ ಮಾಡಿದ್ದೀರಿ. ಈ ರಿಪೋರ್ಟಿನಲ್ಲಿ ಚುನಾವಣೆಗಳನ್ನು ಅದಷ್ಟು ಜಾಗ್ರತೆ ಮಾಡಬೇಕೆಂದು ಹೇಳಿದರೂ ಕೂಡ ಮುಂದಿನ ಮಹಾ ಚುನಾವಣೆಯನ್ನು ಮನಸ್ಸಿಟ್ಟುಕೊಂಡು, ಎಮರ್ಜೆನ್ಸಿ ಬಂತು ಎಂದು ಹೇಳಿಬಿಟ್ಟು ಈ ಚುನಾವಣೆಗಳನ್ನೆಲ್ಲಾ ಮುಂದಕ್ಕೆ ಹಾಕಿದಿರಿ. ಈ ವಿಷಯದಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿಲ್ಲ ಎಂದು ನಾನಾದರೂ ಹೇಳುತ್ತೇನೆ. ಅದಲ್ಲದೆ ಈ ಪಂಚಾಯಿತಿ ರಾಜ್ಯಗಳಿಗೆ ಪೋಲೀಸ್ ಇಲಾಖೆಯ ಮಂತ್ರಿಯನ್ನು ತಂದು ಹಾಕಿದ್ದೀರಿ. ಅವರು ತೆಗೆದುಕೊಂಡಿರುವ ಪೋರ್ಟ್‌ಪೋಲಿಯೋ ಅರ್ಥ ಮಾಡಿಕೊಳ್ಳಬೇಕಾದರೆ ಒಂದು ವರ್ಷ ಬೇಕಾಗುತ್ತದೆ. ಹೀಗಾದರೆ ಎಷ್ಟರಮಟ್ಟಿಗೆ ಈ ಸರ್ಕಾರ ದೇಶಕ್ಕೆ ಅನುಕೂಲವನ್ನು ಕಲ್ಪಿಸಬಹುದು ಎಂದು ಯೋಚನೆ ಮಾಡಬೇಕು.

ಹಿಂದೆ ನಮ್ಮಲ್ಲಿ ಒಂದು ಪದ್ಧತಿ ಇತ್ತು. ಈ ಸಭೆಯಲ್ಲಿ ಯಾವುದಾದರೂ ಬೇಡಿಕೆಯನ್ನು ಮಂಡಿಸಬೇಕಾದರೆ ಸಂಕ್ಷಿಪ್ತವಾದ ವಿವರಣೆಯನ್ನು ಕೊಡುತ್ತಿದ್ದರು. ಹೋದ ಸಾರಿ ಇಷ್ಟು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರಲ್ಲಿ ಏನೇನು ಕೆಲಸಗಳಾಗಿದೆ, ಏನೇನು ಕೆಲಸಗಳಾಗಬೇಕು, ಮುಂದಿನ ವರ್ಷಕ್ಕೆ ಎಷ್ಟು ಹಣ ಬೇಕಾಗುತ್ತದೆ ಎಂದು ಹೇಳುತ್ತಿದ್ದರು. ಈಗ ಸಂಬಂಧಪಟ್ಟ ಸಚಿವರು ಹಣ ಕೊಡಬೇಕು ಎಂದು ಕೇಳುತ್ತಾರೆ. ಚರ್ಚೆಗೆ ಉತ್ತರ ಹೇಳಿದರೆ ಹೇಳಬಹುದು, ಬಿಟ್ಟರೆ ಬಿಡಬಹುದು. ಬೇಡಿಕೆಗಳಿಗೆ ಅಂಗೀಕಾರವನ್ನು ಕೊಡುವ ಪದ್ಧತಿ ಬಂದಿದೆ. ಹೀಗಾಗಬಾರದು ಎಂದು ನಾನು ಹೇಳುತ್ತಿದ್ದೇನೆ.

ಸ್ವಾಮಿ ಹೋಲ್‌ಸೇಲ್ ಕೋ ಆಪರೇಟಿವ್ ಸೊಸೈಟಿ, ಬೆಂಗಳೂರು, ಈ ಬಗ್ಗೆ ಕೆಲವು ಮಾತುಗಳು ಹೇಳುತ್ತೇನೆ. ಅದು ಬಸವನಗುಡಿಯಲಿ, ಇನ್ನೂ ಎಲ್ಲೆಲ್ಲೋ ಇದೆ. ಈ ಸೊಸೈಟಿಗೆ ಬಂದ ತೊಗರಿಬೇಳೆ, ಕಡಲೆ ಬೇಳೆ, ಕಡಲೆ, ಇವುಗಳನ್ನೆಲ್ಲ ಯಾರಿಗೆ ಮಾರಿದರು. ಇದರಲ್ಲಿ ಯಾವ ಜನಗಳಿದ್ದರು, ಎಷ್ಟು ಬಂಗಲೆಗಳಾದುವು. ಇದರಲ್ಲಿರುವ ರಾಜಕೀಯ ಹಿನ್ನೆಲೆ ಏನು ಏತಕ್ಕೋಸ್ಕರ ಶಮ್ಮ ಆಶ್ರಯದಲ್ಲಿ ಇವರನ್ನು ಸಾಕಬೇಕೆಂಬ ಮನಸ್ಸಿದೆ? ಸಹಕಾರ ತತ್ವದ ಪ್ರಕಾರ ಸಾಮಾನ್ಯ ಜನರ ಜೀವನ ಉತ್ತಮ ಆಗಬೇಕು ಎಂದು ಭಾಷಣ ಮಾಡುತ್ತಿದ್ದಾರೆ. ಆದರೆ ಅದನ್ನು ಎಲ್ಲಿಯಾದರೂ ನಡೆಸಿದ್ದಾರೆಯೇ ಅಥವಾ ಈಗ ನಡೆಯುತ್ತಿರುವ ಸ್ಥಿತಿ ಚೆನ್ನಾಗಿದೆ ಎಂದು ಹೇಳುವುದಾದರೆ ಇದನ್ನು ಬಿಟ್ಟುಬಿಡಿ ಎಂದು ಹೇಳಬೇಕಾಗುತ್ತದೆ. ರಾಷ್ಟ್ರೀಕರಣ ಮಾಡಬೇಕು ಮತ್ತು ಸಹಕಾರ ತತ್ವವನ್ನು ದೇಶದಲ್ಲಿ ತರಬೇಕು ಎಂದು ಹೊರಟು ಇನ್ನು ಜನ್ಮ ಜನ್ಮಾಂತರಕ್ಕೂ ಇದು ಬೇಡ ಎನ್ನುವಷ್ಟು ಕೆಳಮಟ್ಟಕ್ಕೆ ತಂದಿರಾ? ಇವತ್ತು ಸರ್ಕಾರದಿಂದ ಕೊಡತಕ್ಕ ಆಹಾರ ಧಾನ್ಯಗಳು ಈ ಸೊಸೈಟಿಗಳಿಂದ ಮೂಲೆ ಮೂಲೆಯಲ್ಲಿರುವ ಪ್ರತಿಯೊಬ್ಬ ಮನುಷ್ಯನಿಗೂ ಅರ್ಧ ಕೆ.ಜಿ. ಕಾಲು ಕೆ.ಜಿ. ದೊರಕುತ್ತಿದೆಯೇ ಎನ್ನುವುದನ್ನು ಯೋಚನೆ ಮಾಡಬೇಕು. ಮೊನ್ನೆ ಆಹಾರ ಮಂತ್ರಿಗಳ ಮಾತನಾಡುವಾಗ ಸಹಕಾರ ಸಂಘಗಳ ಮೂಲಕ ಸಾಕಷ್ಟು ಆಹಾರವನ್ನು ಹಂಚಿಕೆ ಮಾಡುತ್ತಿದ್ದೇವೆ ಎಂದು ಹೇಳಿದರು. ಇವತ್ತಿನ ಪತ್ರಿಕೆಯಲ್ಲಿ ಓದುವಾಗ ಹೊಸದುರ್ಗ ತಾಲ್ಲೂಕಿನಲ್ಲಿ ಒಂದು ಕುಟುಂಬದ 8 ಜನರು ಸಾಮೂಹಿಕ ಆತ್ಮಹತ್ಯೆ ಮಾಡಿಕೊಂಡರು ಎಂದು ನೋಡಿದೆ. ಇದಕ್ಕೆ ಕಾರಣ ಬಡತನ, ಹೊಟ್ಟೆಗೆ ಇಲ್ಲದಿರುವುದು. ಪೋಲೀಸ್ ರಿಪೋರ್ಟ್ ಬೇರೆ ತರಹ ಇರಬಹುದು, ಬೇರೆ ತರಹ ನೀವು ಬರೆಸಬಹುದು. ಸಾಮಾನ್ಯವಾಗಿ 8-10 ಜನ ಒಂದು ಕುಟುಂಬದಲ್ಲಿ ಆತ್ಮಹತ್ಯೆ ಮಾಡಿಕೊಳ್ಳಬೇಕಾದರೆ ಏನು ನೋವು, ಎಷ್ಟು ಸಂಕಟ ಇತ್ತು ಎನ್ನುವುದನ್ನು ಯೋಚನೆ ಮಾಡುವುದಕ್ಕೆ ಸಾಧ್ಯವೇ? ನೀವೆಲ್ಲ ಮಂತ್ರಿಗಳಾಗಿ ಇಲ್ಲಿಗೆ ಬಂದಿರುವವರು ಬಡಜನರಿಂದ ಆರಿಸಿ ಬಂದಿರುವವರು. ಈ ದೇಶದ ಜನರನ್ನು ಹಸಿವಿನಿಂದ ಸಾಯಿಸಬೇಕೆಂದು ಇದ್ದೀರಾ? ಜನತೆಗೆ ಮೋಸ ಮಾಡಿ ಸುಳ್ಳು ಹೇಳಿ ವೋಟುಗಳನ್ನು ಗಳಿಸಿ ಬಂದಿರುವ ನಿಮಗೆ ಜನತೆಗೆ ಸಂಕಟವನ್ನುಂಟು ಮಾಡುವ ಬುದ್ಧಿಯನ್ನು ಭಗವಂತನು ಕೊಡದೆ ಇರಲಿ ಅವರ ಬಗ್ಗೆ ನಿಮಗೆ ಸದ್ಬುದ್ಧಿಯುಂಟಾಗಿ ದೇಶದ ಹಿತದೃಷ್ಟಿಯಿಂದ ಕೆಲಸ ಮಾಡಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಮಾನ್ಯ ಸಭಾಧ್ಯಕ್ಷರೇ, ನಮ್ಮ ಮುಂದೆ ಮಂಡಿಸಿರತಕ್ಕಂಥ ಸಹಕಾರ, ಕಾರ್ಮಿಕ ಹಾಗೂ ಸಾರಿಗೆ ಬೇಡಿಕೆಗಳನ್ನು ನಾನು ಅನುಮೋದಿಸುತ್ತೇನೆ. ಮತ್ತು ಸಹಕಾರ ಸಂಘಗಳ ವಿಚಾರದಲ್ಲಿ ನಾಲ್ಕು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಸಹಕಾರ ಸಂಘ ರಾಜ್ಯದಲ್ಲಿ ಅತಿಮುಖ್ಯವಾದುದು. ಪ್ರತಿಯೊಂದು ಪಂಚಾಯಿತಿಗೂ ಕೂಡ ಒಂದೊಂದು ಸಹಕಾರ ಸಂಘಗಳನ್ನು ತೆರೆಯಲಾಗಿದ್ದು ಅದರಿಂದ ಆಯಾಭಾಗದ ಜನರಿಗೆ ಮತ್ತು ರೈತರಿಗೆ ಬಹಳ ಅನುಕೂಲವಾಗಿದೆ. ಆದರೆ ಅದರಲ್ಲಿರುವ ಸ್ವಲ್ಪ ತೊಡಕನ್ನು ತೆಗೆದುಹಾಕಬೇಕೆಂದು ನಾನು ಸಲಹೆ ಮಾಡುತ್ತೇನೆ. ಸಹಕಾರ ಸಂಘಗಳಲ್ಲಿ ವ್ಯವಸಾಯಗಾರನಿಗೆ ವ್ಯವಸಾಯ ಮಾಡಲು ಸಾಲವನ್ನು ಕೊಡತಕ್ಕ ಪದ್ಧತಿ ಇದೆ, ಪುನಃ ಅದನ್ನು ಮರುಪಾವತಿ ಮಾಡುವ ವ್ಯವಸ್ಥೆಯೂ ಇದ್ದು ಹಾಗೆ ಮರುಪಾವತಿ ಮಾಡುವವರಿಗೆ ಮತ್ತೆ ಸಾಲವನ್ನು ಕೊಡತಕ್ಕ ವ್ಯವಸ್ಥೆಯೂ ಇದೆ. ಒಂದು ಸರ್ವೀಸ್ ಕೋ ಅಪರೇಟಿವ್ ಸೊಸೈಟಿಯಲ್ಲಿ ಕೆಲವಾರು ಜನರು ಮಾತ್ರ ಕಾಲ ಕಾಲಕ್ಕೆ ಸರಿಯಾಗಿ ಹಣವನ್ನು ಕೊಡದೆ ಇದ್ದರೆ ಪೂರ್ತಿಯಾಗಿ ಆ ಸೊಸೈಟಿಗೇ ಹಣ ಕೊಡುವುದನ್ನು ನಿಲ್ಲಿಸುತ್ತಾರೆ. ಇದು ಹೋಗಬೇಕು. ಯಾರಾದರೂ ಮರುಪಾವತಿ ಮಾಡದೆ ಬಾಕಿ ಇಟ್ಟುಕೊಂಡರೆ ಅಂಥವರಿಗೆ ಮಾತ್ರ ಸಾಲವನ್ನು ಕೊಡದೆ, ತೆಗೆದುಕೊಂಡಿರುವ ಸಾಲವನ್ನು ತೀರಿಸುವವರಿಗೆ ಪುನಃ ಸೊಸೈಟಿಯಿಂದ ಹಣ ದೊರಕುವಂತೆ ಮಾಡಬೇಕು.

ವ್ಯವಸಾಯಕ್ಕೆ ಅನುಕೂಲವಾಗಲಿ ಎಂದು ಇವತ್ತು ಸೊಸೈಟಿಗಳನ್ನು ಮಾಡಿರುವುದು ನಿಜ. ಆದರೆ ಹೀಗೆ ಹಣವನ್ನು ತೆಗೆದುಕೊಂಡು ಹೋಗಿ ವ್ಯವಸಾಯಕ್ಕೋಸ್ಕರ ಖರ್ಚುಮಾಡದೆ ಅನೇಕ ಜನ ಅವರ ಸ್ವಂತ ಉಪಯೋಗಕ್ಕೆ ಖರ್ಚುಮಾಡಿಕೊಳ್ಳತಕ್ಕ ಪದ್ಧತಿ ಬಂದಿದೆ. ಆ ದೆಸೆಯಿಂದ ವ್ಯವಸಾಯಕ್ಕೆ ಬೇಕಾಗಿರತಕ್ಕ ಬೀಜ ಮತ್ತು ರಸಾಯನಿಕ ಗೊಬ್ಬರವನ್ನು ರೈತರಿಗೆ ಸಾಲದ ರೂಪದಲ್ಲಿ ಹಣಕ್ಕೆ ಬದಲಾಗಿ ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಅಲ್ಲದೆ ನಿನ್ನೆಯ ದಿನ ಶ್ರೀಮಾನ್ ಬೈರೇಗೌಡರು ಸೂಚಿಸಿದ ಹಾಗೆ ಈ ಸೊಸೈಟಿಗಳಲ್ಲಿ ಲೆಕ್ಕಪತ್ರಗಳನ್ನು ಇಡತಕ್ಕದ್ದು ಅತಿಮುಖ್ಯ. ಆದ್ದರಿಂದ ಎರಡು ಸೊಸೈಟಿಗಳಿಗೆ ಒಬ್ಬರಂತೆ ಆದರೂ 'ಹೇಡ್ ಸೆಕ್ರೆಟರಿ' ಯನ್ನು ಸರ್ಕಾರ ನೇಮಕ ಮಾಡಬೇಕು. ಹೀಗೆ ಮಾಡುವುದರಿಂದ ಅನೇಕ ಕಡೆ ಅನೇಕ ತರಹ ತೊಂದರೆಗಳು ಬರುವುದು ಕಡಮೆಯಾಗಬಹುದು ಎಂದು ನನಗನ್ನಿಸುತ್ತದೆ. ಸರ್ಕಾರ ದಯವಿಟ್ಟು ಇದರ ಬಗ್ಗೆ ಗಮನ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತೇನೆ.

(ಶ್ರೀ ಟಿ. ಡಿ. ದೇವೇಂದ್ರಪ್ಪ)

ಸ್ವಾಮಿ, ಗೃಹ ನಿರ್ಮಾಣ ಸಹಕಾರ ಸಂಘಗಳು ರಾಜ್ಯದಲ್ಲಿವೆ. ಒಂದು ಹೌಸಿಂಗ್ ಕಾರ್ಪೊರೇಷನ್ ಇದೆ, ಒಂದು ಹೌಸಿಂಗ್ ಬೋರ್ಡ್ ಇದೆ. ಹೌಸಿಂಗ್ ಬೋರ್ಡ್ ಮೂಲಕ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಸಾಲವನ್ನು ಕೊಟ್ಟು ಮನೆಗಳನ್ನು ಕಟ್ಟಿಸತಕ್ಕ ವ್ಯವಸ್ಥೆ ಇದೆ. ಹೌಸಿಂಗ್ ಕಾರ್ಪೊರೇಷನ್ ಮೂಲಕ ಗ್ರಾಮಾಂತರ ಪ್ರದೇಶಕ್ಕೂ ಸಾಲ ಕೊಡತಕ್ಕ ವ್ಯವಸ್ಥೆ ಇದೆ. ಇದರಲ್ಲಿ ಪಟ್ಟಣಗಲ್ಲಿ ಕೂಡ ಮನೆಗಳನ್ನು ಕಟ್ಟಿಸಿಕೊಡುವ ವ್ಯವಸ್ಥೆಯನ್ನು ಇಟ್ಟುಕೊಂಡಿದ್ದಾರೆ. ರಾಜ್ಯ ಸರ್ಕಾರ ಈ ಸಂಸ್ಥೆಗಳಿಗೆ ಹಣವನ್ನು ಕೊಟ್ಟಾಗ ಹೌಸಿಂಗ್ ಕಾರ್ಪೊರೇಷನ್ನಿನವರು ಗ್ರಾಮಾಂತರ ಪ್ರದೇಶದಲ್ಲಿ ಮನೆಗಳನ್ನು ಕಟ್ಟಿಸುತ್ತಿಲ್ಲ, ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮಾತ್ರ ಮನೆಗಳನ್ನು ಕಟ್ಟಿಸುತ್ತಿದ್ದಾರೆ. ನಾನು ಹಿಂದೆಯೂ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೆ ಇವೆರಡನ್ನೂ ಸೇರಿಸಿ ಒಂದೇ ಬೋರ್ಡ್ ಏಕೆ ಮಾಡಬಾರದು ಎಂದು. ಈಗ ಹೌಸಿಂಗ್ ಬೋರ್ಡ್ ಮತ್ತು ಹೌಸಿಂಗ್ ಕಾರ್ಪೊರೇಷನ್ ಇವೆರಡೂ ಇರುವುದರಿಂದ ಎರಡು ದೋಣಿಗಳಲ್ಲಿ ಕಾಲು ಇಟ್ಟುಕೊಂಡ ಹಾಗೆ ಆಗಿದೆ. ಹೌಸಿಂಗ್ ಬೋರ್ಡ್ ಎಂದು ಏನಿದೆ ಅದೊಂದನ್ನು ಮಾತ್ರ ಇಟ್ಟುಕೊಂಡು ಈಗ ಹೌಸಿಂಗ್‌ಬೋರ್ಡ್ ಮನೆಗಳನ್ನು ಕಟ್ಟಿ ಅಲಾಟ್ ಮಾಡುತ್ತಿರುವ ಹಾಗೆ ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟು ಹಣವನ್ನು ಖರ್ಚು ಮಾಡಬೇಕೋ ಅದನ್ನು ಖರ್ಚು ಮಾಡಿ ಮನೆಗಳನ್ನು ಕಟ್ಟಿ ಕಾರ್ಮಿಕರಿಗೆ ಮನೆಗಳನ್ನು ಕಟ್ಟಿಸಿಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಭದ್ರಾವತಿ ಕಾರ್ಖಾನೇ ದಿನೇ ದಿನೇ ಬೆಳೆಯುತ್ತಿದೆ. ಸುಮಾರು 12-13 ಸಾವಿರ ಕಾರ್ಮಿಕರು ಕಬ್ಬಿಣದ ಕಾರ್ಖಾನೆ ಮತ್ತು ಕಾಗದದ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಇದುವರೆಗೂ ಅವರಿಗೆ 3000 ಮನೆಗಳನ್ನು ಸರ್ಕಾರ ಕಟ್ಟಿಸಿಕೊಟ್ಟಿರುವುದು ಸಾಲದು. ಆ ಭಾಗದಲ್ಲಿ ಇನ್ನೂ ಹೆಚ್ಚು ಹಣವನ್ನು ಒದಗಿಸಿ ಕಾರ್ಮಿಕರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕು ಎನ್ನುವ ಆಶಯವಿದೆ ಎಂದು ತಿಳಿಸಿ ಸ್ವಲ್ಪ ಮನೆಗಳನ್ನು ಕಟ್ಟಿಸಿದ್ದಾರೆ. ಇದಕ್ಕೆ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ ಮತ್ತು ಕಾರ್ಮಿಕರಿಗೆ ಇನ್ನು ಹೆಚ್ಚು ಮನೆಗಳನ್ನು ಕಟ್ಟಿಸಿಕೊಡುವ ವ್ಯವಸ್ಥೆ ಆಗಬೇಕೆಂದು ಹೇಳುತ್ತೇನೆ.

ಬೆಂಗಳೂರಿನಲ್ಲಿ ಎಚ್. ಎಂ. ಟಿ.; ಎಚ್. ಎ. ಎಲ್. ಮುಂತಾದ ಕಾರ್ಖಾನೆಗಳ ಕಾರ್ಮಿಕ ವರ್ಗಕ್ಕೆ ಬಸ್ಸುಗಳ ಸೌಕರ್ಯವನ್ನು ಕಲ್ಪಿಸಿಕೊಟ್ಟಿರುತ್ತೀರಿ. ಭದ್ರಾವತಿ ಕಾರ್ಖಾನೆಯಲ್ಲಿ 12-13 ಸಾವಿರ ಕಾರ್ಮಿಕರಿದ್ದಾರೆ, ಅಲ್ಲಿಗೆ ಕಾರ್ಮಿಕರು ಎರಡು ಮೂರು ಮೈಲಿ ದೂರದಿಂದ ಬರಬೇಕಾಗಿದೆ. ಅವರು ಸಕಾಲಕ್ಕೆ ಬರಲು ತೊಂದರೆಯಾಗಿದೆ. ಬೆಂಗಳೂರಿನಲ್ಲಿ ವ್ಯವಸ್ಥೆ ಮಾಡಿರುವಂತೆ ಭದ್ರಾವತಿ ಕಾರ್ಮಿಕರಿಗೂ ಬಸಿನ ಸೌಕರ್ಯವನ್ನು ಮಾಡಿಕೊಡಬೇಕು ಎಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಅಧ್ಯಕ್ಷರೆ ನಮ್ಮ ಮುಂದಿರತಕ್ಕ ಐದಾರು ಬೇಡಿಕೆಗಳ ಮೇಲೆ ನಾನು ಮಾತನಾಡುವುದಕ್ಕೆ ಸಾಧ್ಯವಿಲ್ಲ. ಮೈಸೂರು ಮೋಟಾರ್ ವೆಹಿಕಲ್ಸ್ ಟ್ಯಾಕ್ಸೇಷನ್ ಮೇಲೆ ಮಾತನಾಡುತ್ತಾ ಈ ಒಂದು ಇಲಾಖೆಯಿಂದ ರಾಜ್ಯಕ್ಕೇನು ಒಳ್ಳೆಯದಾಗಬೇಕಾಗಿತ್ತೋ ಅಷ್ಟು ಒಳ್ಳೆಯದಾಗಿಲ್ಲವೆಂದು ನಾನು ಸರ್ಕಾರದವರ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನ ಮಾಡುತ್ತೇನೆ. ಸ್ಟೇಟ್‌ಟ್ರಾನ್ಸ್‌ಪೋರ್ಟ್ ಅಥಾರಿಟಿ ಮತ್ತು ರೀಜೆಯನಲ್ ಟ್ರಾನ್ಸ್‌ಪೋರ್ಟ್ ಅಥಾರಿಟಿ ಆಫೀಸಿನಲ್ಲಿ ವೆಹಿಕಲ್ ಇನ್‌ಸ್ಪೆಕ್ಟರ್ ಕೆಲಸ ಸಿಕ್ಕಿದರೆ ಸಾಕು ಎಂದು ನನ್ನ ಆಶೆ. ಏಕೆಂದರೆ, ಒಬ್ಬ ವೆಹಿಕಲ್ ಇನ್‌ಸ್ಪೆಕ್ಟರಿಗೆ ಒಂದು ತಿಂಗಳಿಗೆ ಎರಡು ಸಾವಿರ ರೂಪಾಯಿಗಳಿಗೆ ಕಡಮೆ ಇಲ್ಲದೆ ಆಧಾಯವಿದೆ. ಕಾಗದ ಪತ್ರಗಳು ಒಂದು ಕೈಯಿಂದ ಇನ್ನೊಂದು ಕೈಗೆ ಹೋಗುವಾಗ ಅದರಲ್ಲು ಒಂದು ಟೇಬಲ್‌ನಿಂದ ಇನ್ನೊಂದು ಟೇಬಲ್ಲಿಗೆ ಮೂವ್‌ಆದಾಗ ಎಷ್ಟೋ ಕೆಲಸಗಳು ನಡೆದು ಬಿಡುತ್ತವೆ. ಆದ್ದರಿಂದ ಈ ಇಲಾಖೆ ರಾಜ್ಯದಲ್ಲಿ ಇರಬೇಕೆ ಎಂದು ನಾನು ಕೇಳುತ್ತೇನೆ.

ಈ ಸುಖೀರಾಜ್ಯದಲ್ಲಿ ಮೋಟಾರ್ ವೆಹಿಕಲ್ ಇಲಾಖೆ ಇದ್ದರೆ ಅದರ ಕೆಳಗಿರತಕ್ಕ ಅದಕ್ಕೆ ಸಂಬಂಧಪಟ್ಟ ಎಂ. ಎಸ್. ಆರ್. ಟಿ. ಸಿ. ಮತ್ತು ಪೋಲೀಸ್ ಇಲಾಖೆಗಳು ಎಷ್ಟರಮಟ್ಟಿಗೆ ಜನಗಳನ್ನು ಸುಲಿಗೆ ಮಾಡುತ್ತಿದೆಯೆಂಬುದನ್ನು ಯೋಚನೆಮಾಡಿದರೆ ಈ ಐದುವರ್ಷಗಳ ಕಾಲ ಮುಂದೆ ಬಂದು ಶ್ರೀ ಅರಸು ಅವರು ಎಷ್ಟು ಈ ಇಲಾಖೆಯನ್ನು ಟ್ಯಾಪ್ ಮಾಡಬಹುದೋ ಅಷ್ಟನ್ನು ಮಾಡುತ್ತಿದ್ದಾರೆ. ಹಿಂದಿನ ಗೃಹ ಸಚಿವರು ಸಹ ಈ ಬಗ್ಗೆ ಹೆಚ್ಚುವಿಚಾರ ಮಾಡುತ್ತಿದ್ದರು ಆದರೂ ಕೂಡ ಆರ್. ಟಿ. ಒ. ಮತ್ತು ಎಸ್. ಡಿ. ಒ. ಆಫೀಸಿನಲ್ಲಿ ಬಹಳ ಅನ್ಯಾಯಗಳಾಗುತ್ತಿವೆ.

ಈಗಲಾದರೂ 6 ತಿಂಗಳುಗಳ ಕೆಳಗೆ ಆಗಿರತಕ್ಕ ದುರ್ವ್ಯವಹಾರಗಳನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಬೇಕು. ತುಮಕೂರಿನಲ್ಲಿರತಕ್ಕ ಆರ್. ಟಿ. ಓ. ಆಫೀಸಿನಲ್ಲಿ ಹೋಗಿ ನೋಡಿದರೆ ಅಲ್ಲಿ ಹೆಗ್ಗಣಗಳು ತುಂಬಿವೆ ಒಬ್ಬೊಬ್ಬನೂ 5-8-10 ವರ್ಷಗಳಾದರೂ ಅದೇ ಒಂದೇ ಆಫೀಸಿನಲ್ಲಿ ಇದ್ದಾರೆ. ಅವರು ದೊಡ್ಡ ದೊಡ್ಡ ಪಟ್ಟಣಗಳ ಸರ್ಕಲ್‌ನಲ್ಲಿಯೂ ಜಯಮಹಲ್ ಮತ್ತು ರಾಜಾಜಿ ನಗರದ ಬಡಾವಣೆಗಳಲ್ಲಿಯೂ ಕಟ್ಟಿರತಕ್ಕ ಭವನಗಳನ್ನು ನೋಡಿದರೆ ಸಾಕು. ಅದ್ದರಿಂದ ಅನೇಕರಿಗೆ ಈ ಮೋಟಾರ್ ವೆಹಿಕಲ್ಸ್ ಇಲಾಖೆಯಲ್ಲಿರುವುದೇ ಒಳ್ಳೆಯದು ಎಂದು ಅಭಿಪ್ರಾಯ ಬಂದಿದೆ. ಇದಕ್ಕಾಗಿ ಸರ್ಕಾರದವರು ಒಂದು ಯೋಜನೆಯನ್ನು ಮಾಡಿ ಆ ಬಗ್ಗೆ ಒಂದು ನಿರ್ದೇಶನ ವನ್ನು ಕೊಡುತ್ತಲೇ ಇದ್ದಾರೆ. ಸರ್ಕಾರದವರು ಏನೊಂದು ನಿರ್ದೇಶನವನ್ನು ಕೊಡುತ್ತಾರೋ ಆ ಕೆಲಸವನ್ನು ಮಾಡುವುದೇ ಇಲ್ಲ. ಇನ್ನೊಬ್ಬ ಮಂತ್ರಿಗಳು ಏನು ಹೇಳುತ್ತಾರೆಂದು ಸಂಬಂಧ ಪಟ್ಟ ಮಂತ್ರಿಗಳು ಅವರ ಒಂದು ಆದೇಶವನ್ನು ಮೂಲೆಗೊತ್ತಿ ವಿರೋಧವಾಗಿ ಮಾಡುತ್ತಾರೆಂದು ಹೇಳುತ್ತಾರೆ ಹೀಗಾಗಿ ಅಧಿಕಾರಿಗಳು ಕೈಚಾಚುವುದು ಜಾಸ್ತಿಯಾಗಿದೆ. ಮುಖ್ಯವಾಗಿ ಬೆಂಗ ಳೂರು ರೀಜೆಯನಲ್ ಟ್ರಾನ್ಸ್‌ಪೋರ್ಟ್ ಅಥಾರಿಟಿಯಲ್ಲಿ ಅಂತಹವರೇ ತುಂಬಾ ಜನರಿದ್ದಾರೆ. ಅವರನ್ನು ಮಾತನಾಡಿಸುವುದಕ್ಕೇ ಆಗುವುದಿಲ್ಲ. They are just like snakes and Scorpians ಹಾವು ಚೇಳುಗಳು ಇದ್ದಹಾಗೆ ಅಲ್ಲಿದ್ದಾರೆ. ಆದ್ದರಿಂದ ಈ ಸರ್ಕಾರಕ್ಕೆ ತುಂಬಾ ಅಗೌರವವಾಗುತ್ತದೆ. ಬೆಂಗಳೂರು ರೀಜಿಯನಲ್ ಟ್ರಾನ್ಸ್‌ಪೋರ್ಟ್ ಆಫೀಸು ಒಂದು ನರಕ ದಂತಿದೆ. ಅಲ್ಲಿ ಇನ್ನು ಏನೇನು ನಡೆಯುತ್ತಿದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ಗಂಭೀರವಾಗಿ ತಿಳಿದು ಪ್ರತ್ಯಕ್ಷವಾಗಿ ವಿಚಾರ ಮಾಡಿದರೆ ಎಲ್ಲವೂ ಪೂರ್ಣವಾಗಿ ಅರ್ಥವಾಗುತ್ತದೆ. ಆದ್ದರಿಂದ ನಾನು ಹೇಳುವುದಿಷ್ಟೇ ಅಲ್ಲಿರತಕ್ಕ ಅಧಿಕಾರಿಗಳನ್ನು ಒಬ್ಬೊಬ್ಬರನ್ನಾಗಿ ತೆಗೆದುಹಾಕುವುದು ಒಳ್ಳೆಯದು ಏಕೆಂದರೆ, ಅವರು ಅನೇಕ ವರ್ಷಗಳಿಂದ ಅಲ್ಲಿಯೇ ಇದ್ದಾರೆ.

ಇವತ್ತು ಮೋಟಾರ್ ವೆಹಿಕಲ್ಸ್ ಟ್ಯಾಕ್ಸೇಷನ್ ಕೊಡುವ ಬಗ್ಗೆ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಇವತ್ತು ಎಷ್ಟು ಬಸ್ಸುಗಳು, ಟ್ಯಾಕ್ಸಿಗಳು ಮತ್ತು ಖಾಸಗೀ ಟ್ಯಾಕ್ಸಿಗಳು ಓಡಾಡು ತ್ತಿವೆಯೆಂಬುದನ್ನು ನೋಡಬೇಕು. 14 ಖಾಸಗೀ ಟ್ಯಾಕ್ಸಿಗಳು ಸಿರಾದಿಂದ ತುಮಕೂರು, ತುಮಕೂರಿನಿಂದ ಚಿತ್ರದುರ್ಗ ಮತ್ತು ತುಮಕೂರಿನಿಂದ ಬೆಂಗಳೂರಿಗೆ ಓಡಾಡುತ್ತಿವೆ. ಇವತ್ತು ಅವರು ಕೊಡುವ ತೆರಿಗೆ ಕೇವಲ 30-35 ರೂಪಾಯಿಗಳು. ಪೋಲೀಸರಿಗೆ ದೂರುಕೊಟ್ಟಿದೆ ಸರಿ ಯಾಗಿ ತೆರಿಗೆ ವಸೂಲಿ ಮಾಡುತ್ತಿಲ್ಲವೆಂದು. ಆದರೆ ಅವರು ಕೈಚಾಚುವುದನ್ನು ಬಿಟ್ಟಿಲ್ಲ. ಅವರಿಗೆ ಬೇಕಾದವರಿಗೆ ಗೈಡ್‌ಮಾಡಿ ಕೆಲಸ ಮಾಡುತ್ತಾರೆ. ಇನ್ನು ಶ್ರೀ ಅರಸು ಅವರು ಬೆಂಗಳೂರು ಡಿವಿಜನಲ್ ಅಡ್ವೈಸರಿ ಕೌನ್ಸಿಲ್ ವಿಚಾರವಾಗಿ ಹೇಳುತ್ತಾ ಅದು ಬಹಳ ಚೆನ್ನಾಗಿ ಕೆಲಸ ಮಾಡು ತ್ತಿದೆಯೆಂದು ಹೇಳಿದ್ದಾರೆ. ಆದರೆ ಇವತ್ತು ಬಸ್ಸುಗಳನ್ನು ಬಸ್‌ಸ್ಟ್ಯಾಂಡಿನಲ್ಲಿ ನಿಲ್ಲಿಸುವುದನ್ನು ನೋಡಿದರೆ ಮತ್ತು ರೋಡ್ ಟ್ರಾನ್ಸ್‌ಪೋರ್ಟ್ ಆಫೀಸಿನಲ್ಲಿರುವವರು ಜೇಬುಗಳನ್ನು ಯಾವ ರೀತಿ ತುಂಬಿಕೊಂಡು ಹೋಗುತ್ತಾ ಇದ್ದಾರೆಂಬುದನ್ನು ನೋಡಿದರೆ ತುಂಬಾ ಆಶ್ಚರ್ಯವಾಗುತ್ತದೆ. ದಿಕ್ಕಿಲ್ಲ ಕೇಳುವವರೇ ಇಲ್ಲ. ಈ ರಾಜ್ಯದಲ್ಲಿ ಪೋಲೀಸಿನವರು ಬೇರೆ ಇದ್ದಾರೆ. ಅನಾಥೋದ್ಧೈವರಕ್ಷಕಾ ಎಂದು ಹೇಳುವ ಹಾಗೆ ಆಗುತ್ತದೆ. ಇರತಕ್ಕ ಕಾನೂನಿಗೆ ಮನ್ನಣೆ ಇಲ್ಲ ಮರ್ಯಾದೆ ಇಲ್ಲ. ಜನಗ ಳಿಗೆ ಈಗಿನ ಕಾನೂನುಗಳಿಂದ ರಕ್ಷಣೆ ಇಲ್ಲದಿದ್ದರೆ ಈ ಸರ್ಕಾರ ಏಕೆ ಬೇಕು ? ಒಂದೊಂದರಲ್ಲಿ 50 ಜನರನ್ನು ತುಂಬಿರತಕ್ಕಂಥ ನಾಲ್ಕು ವ್ಯಾನುಗಳು ಸಿರಾ ಬಸ್‌ಸ್ಟ್ಯಾಂಡಿನಲ್ಲಿ ನಿಂತಿರುತ್ತವೆ. ಒಂದು ವರ್ಷದಿಂದಲೂ ಯಾವ ತೆರಿಗೆಯನ್ನೂ ಕೊಟ್ಟಿಲ್ಲ. ಈ ವಿಚಾರವಾಗಿ ಪೋಲೀಸ್ ಇನ್‌ಸ್ಪೆಕ್ಟರ್, ಸಬ್ ಇನ್‌ಸ್ಪೆಕ್ಟರ್, ಎಸ್.ಪಿ. ಇವರಿಗೆಲ್ಲಾ ಕಾಗದ ಬರೆದೆ. ಇದುವರೆಗೂ ಆ ಬಗ್ಗೆ ಏನೂ ಉತ್ತರ ಹೇಳಲಿಲ್ಲ. ಅಲ್ಲಿ ಒಂದು ಮೋಟಾರ್ ವೆಹಿಕಲ್ಸ್ ಇಲಾಖೆ ಇದೆ ಅದಕ್ಕೆ ಲಕ್ಷಾಂತರ ರೂಪಾಯಿ ಖರ್ಚಾಗುತ್ತಿದೆ. ಅಲ್ಲೊಬ್ಬ ಆರ್.ಟಿ.ಓ. ಇದ್ದಾರೆ. ವೆಹಿಕಲ್ ಇನ್‌ಸ್ಪೆಕ್ಟರುಗಳ ಒಂದು ಸ್ಕ್ವಾಡ್ ಬೇರೆ ಇದೆ. ಇದು ಬಹಳ ನಾಚಿಕೆಗೇಡು. ಬರೀ ಇವರಿಗೆ ಸಂಬಳಕೊಟ್ಟು ಜನಗಳ ಮೇಲೆ ಬೀಳುವ ಹಾಗೆ ಮಾಡುತ್ತಿದ್ದಾರೆ. ನೀರಿನೊಳಗೆ ಜಿಗಣೆ ಸಾಕಿದ ಹಾಗೆ ಇಂತಹವರನ್ನು ಸಾಕುವುದಕ್ಕೋಸ್ಕರ ಇಂತಹ ಒಂದೊಂದು ಇಲಾಖೆಯನ್ನು ಕ್ರಿಯೇಟ್ ಮಾಡಬೇಡಿ. ಅವರಿಗೆ ಅಧಿಕಾರ ನಡೆಸುವುದಕ್ಕೆ ಮಾತ್ರ ಇಂತಹ ಒಂದು ಇಲಾಖೆ ಇರಬೇಕು. ವೆಹಿಕಲ್ ಡಿಪಾರ್ಟ್‌ಮೆಂಟ್ ಮತ್ತು ಪೋಲೀಸ್ ಡಿಪಾರ್ಟ್‌ಮೆಂಟ್ ಅಣ್ಣತಮ್ಮಂದಿರು ಇದ್ದಹಾಗೆ ಇದೆ. ಬಂದ ದುಡ್ಡನ್ನು ಎಷ್ಟೇ ದ್ವೇಷಾಸೂಯೆ ಇದ್ದರೂ ಸರಿಯಾಗಿ ಭಾಗಮಾಡಿಕೊಂಡು ಹಂಚಿಕೊಳ್ಳುತ್ತಾರೆ. ಅದ್ದರಿಂದ ಸರ್ಕಾರದವರು ಈ ಪೋಲೀಸ್ ಇಲಾಖೆಯವರ ಮೇಲೂ ಮತ್ತು ವೆಹಿಕಲ್ಸ್ ಇಲಾಖೆಯವರ ಮೇಲೂ ಸರಿಯಾದ ಹತೋಟಿ ಯನ್ನಿಡಬೇಕು.

ಇನ್ನು ಬಸ್ ರಾಷ್ಟ್ರೀಕರಣ ವಿಷಯ. ಸರ್ಕಾರದವರು ಇದಕ್ಕಾಗಿ 10 ಕೋಟಿ ರೂಪಾಯಿ ಗಳ ಬಂಡವಾಳವನ್ನು ಕೊಟ್ಟು ಕೂಡ ಇವರಿಗೆ ಬೇಕಾದವರಿಗೆ ನ್ಯಾಷನಲೈಸ್ ರೂಟಿನಲ್ಲಿ ಬಸ್ ನಡೆ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಸಲು ಅವಕಾಶ ಕೊಡುತ್ತಾರೆ. ಬೆಂಗಳೂರು-ಚಿತ್ರದುರ್ಗದವರೆಗೆ ರೂಟನ್ನು ರಾಷ್ಟ್ರೀಕರಣ ಮಾಡಬೇಕೆಂದಿದ್ದಾರೆ. ಖಾಸಗಿ ಬಸ್ಸುಗಳಿಗೆ ಪರ್ಮಿಟ್ ಬೇರೆ ಕೊಟ್ಟಿದ್ದಾರೆ. ಇದಕ್ಕೆ ಕಾರಣವೇನು? ಬೆಂಗಳೂರು-ಮೈಸೂರು ರೂಟ್‌ಗಳಿಗೆ ಅನೇಕ ವರ್ಷಗಳಿಂದ ಇದ್ದಂಥ ಪರ್ಮಿಟ್ಟುಗಳನ್ನು ಕಿತ್ತು ಕೊಂಡಿದ್ದಾರೆ. ಮೈಸೂರು-ಕಲ್ಲೇಕೋಟೆ ಬಸ್ಸಿಗೆ ಪರ್ಮಿಟ್ಟು ಕೊಟ್ಟಿರುವ ಉದ್ದೇಶವಾದರೂ ಏನು ? ಅಲ್ಲಿಗೆ ಮೊದಲು ಕೊಟ್ಟಿದ್ದವರ ಲೈಸೆನ್ಸ್ಸನ್ನು ಅಥವಾ ಪರ್ಮಿಟ್ಟನ್ನು ನಿಲ್ಲಿಸಿದುದರ ಔಚಿತ್ಯ ವಾದರೂ ಏನು ? ಪಾನನಿರೋಧವನ್ನು ಎಷ್ಟರಮಟ್ಟಿಗೆ ಇವರು ಈ ರಾಜ್ಯದಲ್ಲಿ ಸಂಪೂರ್ಣವಾಗಿ ಜಾರಿಗೆ ಕೊಡುವುದಕ್ಕಾಗಲಿಲ್ಲವೋ ಅದೇ ರೀತಿಯಲ್ಲಿ ಈ ಮೈಸೂರು ರಾಜ್ಯದಲ್ಲಿ ಬಸ್ಸುಗಳ ರಾಷ್ಟ್ರೀ ಕರಣ ಮಾಡುವುದಕ್ಕಾಗದೆ ಶ್ರೀಮಂತರ ಕಿಸೆಯಲ್ಲಿ ವಸೀಲಿಬಾಜಿಗೆ ತುತ್ತಾಗಿದ್ದಾರೆ. ಆದ್ದರಿಂದ ಈ ದೇಶದಲ್ಲಿ ಖಡಾಖಂಡಿತವಾಗಿ ನ್ಯಾಯವನ್ನು ದೊರಕಿಸಿಕೊಡುವುದರಲ್ಲಿ ನ್ಯಾಯ ತಕ್ಕಡಿ ಸರಿ ಯಾಗಿಲ್ಲದೆ ಹೋದರೆ ಅನ್ಯಾಯ ಪರಂಪರೆಗಳು ಹೆಚ್ಚಾಗಿ ನಡೆಯುತ್ತವೆಂದು ನಾನು ಸರ್ಕಾರದವ ರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಇಂಟರ್‌ಸ್ಟೇಟ್ ಪರ್ಮಿಟ್ಟುಗಳನ್ನು ಕೊಡುವುದರಲ್ಲಿ ಈಗಿನ ಮಂತ್ರಿಗಳು ಹಾಗೂ ಹಿಂದಿನ ಗೃಹ ಸಚಿವರು ಯಾವ ತರಹ ವ್ಯತ್ಯಾಸವನ್ನೂ ಮಾಡಲಿಲ್ಲ. ಈಗಿನ ಮಂತ್ರಿಗಳು ಯಾರಿಗೂ ಅನ್ಯಾಯ ಮಾಡುವುದಿಲ್ಲ, ಎಲ್ಲರಿಗೂ ಕೊಡೋಣ ಎಂಬ ಭಾವನೆಯನ್ನು ಇಟ್ಟುಕೊಂಡು ಇರುವುದ ರಿಂದ ಸರ್ಕಾರದ ಬೊಕ್ಕಸಕ್ಕೆ ಬರುವ ಹಣ ಜಾಸ್ತಿಯಾಗಬಹುದು. ಅವರು ಇದೇ ರೀತಿಯಲ್ಲಿ ಉದಾರವಾಗಿ ಇಂಟರ್‌ಸ್ಟೇಟ್ ಪರ್ಮಿಟ್ಟುಗಳನ್ನು ಕೊಡುವುದಾದರೆ ಪಕ್ಕದ ರಾಜ್ಯಗಳಲ್ಲಿ ನಮಗೆ ಇರತಕ್ಕ ಸಂಬಂಧ, ಸ್ನೇಹ ಚೆನ್ನಾಗಿರುತ್ತದೆ. ಅಂತಹ ಒಂದು ದೃಢವಾದ ಬುನಾದಿಯ ಮೇಲೆ ನಮ್ಮಿಬ್ಬರ ಸ್ನೇಹ ಸರಿಯಾಗಿ ಉಂಟಾಗಿ ಏನಾದರೂ ಸಣ್ಣ ಪುಟ್ಟ ವ್ಯಾಜ್ಯಗಳಿದ್ದರೆ ಜಾಗ್ರತೆಯಾಗಿ ಬಗೆ ಹರಿಯುವುದಕ್ಕೆ ಕಾರಣವಾಗುತ್ತದೆ. ಸರ್ಕಾರದವರು ಈ ವಿಚಾರವಾಗಿ ಇನ್ನೂ ಹೆಚ್ಚಿಗೆ ಗಮನ ಕೊಡಬೇಕು.

ಇನ್ನು ಹೌಸಿಂಗ್ ಬೋರ್ಡ್ ವಿಷಯದಮೇಲೆ ಈಗ ಮಾತನಾಡುವುದಕ್ಕಾಗುವುದಿಲ್ಲ. ಮುಂದೆ ಅಧ್ಯಕ್ಷರು ಇನ್ನೊಂದು ಸಾರಿ ಅವಕಾಶ ಮಾಡಿಕೊಟ್ಟಾಗ ಆ ವಿಚಾರವಾಗಿ ಮಾತನಾಡುತ್ತೇನೆ.

ಇನ್ನು ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿ ವಿಷಯ. ಅಲ್ಲಿನ ಪ್ರೆಸಿಡೆಂಟ್ 10 ಸಾವಿರ, ಇನ್ನೊಬ್ಬ ಡೈರೆಕ್ಟರ್ 15 ಸಾವಿರ ಬಂಡವಾಳ ಹಾಕಿದ್ದಾರೆ. ಒಂದು ಯಾವುದೋ ಅನಾಮಧೇಯ, ರೆಕಗ್‌ನೈಜ್ಡ್ ಕಂಪನಿಯಲ್ಲ, ಅಂಥಾದಕ್ಕೆ ಸರ್ಕಾರ ರೆಕಗ್‌ನಿಷನ್ ಕೊಟ್ಟಿದ್ದಾರೆ. ಅದು ಮಲ್ಲಿಕಾರ್ಜುನ ಎಲೆಕ್ಟ್ರಿಕ್ ಮೋಟಾರ್ ಕಂಪೆನಿ. ಈ ಕಂಪೆನಿಯವರು 2¼ ಲಕ್ಷ ರೂಪಾಯಿಗಳನ್ನು ಆ ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿಗೆ ಅಡ್ವಾನ್ಸ್ ಮಾಡಿದ್ದಾರೆ. ನನ್ನ ಸ್ನೇಹಿತರಾದಂಥ ಸಹಕಾರ ಸಚಿವರಿಗೂ ಈ ವರ್ತಮಾನ ಬಂದಿದೆ. ಸಹಕಾರ ಸಂಘಕ್ಕೆ ಕೊಟ್ಟ ಹಣವನ್ನು ಅಲ್ಲಿನ ಆಡಳಿತ ವರ್ಗದವರು ತಮಗೆ ಬೇಕಾದ ಹಾಗೆ ಅವರಿಗೆ ಬೇಕಾದವರಿಗೆ ಚುನಾವಣೆಗೋಸ್ಕರ ಖರ್ಚು ಮಾಡುತ್ತಿದ್ದಾರೆ. ಅಲ್ಲಿನ ಪ್ರೆಸಿಡೆಂಟರೇ 15 ಮೋಟಾರುಗಳನ್ನು ಇಟ್ಟುಕೊಂಡಿದ್ದಾರೆ. ಅವರು ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯ ಹಣವನ್ನು ತೆಗೆದುಕೊಂಡು ಸೆಸ್ ಕೊಡುತ್ತಿದ್ದಾರೆ. ಈ ವಿಚಾರಗಳನ್ನು ಸರ್ಕಾರದವರು ಕೂಲಂಕಷವಾಗಿ ಪರಿಶೀಲಿಸಿ ಜನರಿಗೆ ನ್ಯಾಯವನ್ನು ದೊರಕಿಸುವ ವ್ಯವಸ್ಥೆ ಮಾಡಬೇಕು.

ಎಷ್ಟು ಕಷ್ಟವಾದರೂ ಕೂಡ ನನಗೆ ಈ ಸಂದರ್ಭದಲ್ಲಿ 7 ನಿಮಿಷಗಳ ಕಾಲ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

9-00 A.M.

† ಶ್ರೀ ಎ. ಕೃಷ್ಣಶೆಟ್ಟಿ (ಮಂಗಳೂರು II).—ಅಧ್ಯಕ್ಷ ಮಹಾಶಯರೇ, ನಿನ್ನೆ ದಿವಸ ಶ್ರೀ ರಾಜ ಗೋಪಾಲ್ ಅವರು ಕಾರ್ಮಿಕರ ಬಗ್ಗೆ ಮಾತನಾಡಿದರು. ಇದು ಒಂದು ಸಂಧಿಕಾಲ. ಅದಕ್ಕಿಂತ ಅವರು ಪಾಪ ಬೇರೆ ಏನು ಮಾತನಾಡಲಿಕ್ಕೆ ಆಗುತ್ತದೆ ? ಮಜೂರರ ಖಾತೆಯ ವಿಷಯವನ್ನು ಮಾತ ನಾಡುವುದಾದರೆ ಅದರಲ್ಲಿ ಮೊಟ್ಟಮೊದಲು ಒಂದು ವಿಷಯವನ್ನು ಹೇಳಬೇಕಾಗುತ್ತದೆ. ಕಾರ್ಮಿ ಕರು ಮಜ್ದೂರರು ಮತ್ತು ಮಾಲೀಕರು ಇವರ ಮಧ್ಯೆ ಸರ್ಕಾರದ ಧೋರಣೆ ಏನು ಎಂಬುದನ್ನು ನಾವು ಸ್ವಲ್ಪ ವಿಚಾರ ಮಾಡಬೇಕಾಗಿದೆ. ಮಾಲೀಕರ ಪರವಾಗಿ, ಉದ್ಯಮದಾರರ ಪರವಾಗಿ ವೀಕ್ ಪಾರ್ಟಿ ಎಂದರೆ ಮಜೂರರಿದ್ದಾರೆ. ಅವರನ್ನು ರಕ್ಷಿಸಿ ಅವರ ಒಂದು ಬೇಡಿಕೆಯನ್ನು ಪಡೆಯುವ

ಮಟ್ಟಿಗೆ ಯಾವ ರೀತಿಯ ಸೌಕರ್ಯವೂ ಇಲ್ಲ ಎಂದು ನನ್ನ ಬಲವಾದ ಅಭಿಪ್ರಾಯ ಇದೆ. ಇದು ಮುಖ್ಯವಾಗಿ ನೋಡಬೇಕಾದ ವಿಷಯ. ಈ ಒಂದು ವರ್ಷದಲ್ಲಿ ತುಂಬಾ ಹೋರಾಟಗಳು ನಮ್ಮ ಪ್ರಾಂತದಲ್ಲಿ ಬಂದಿವೆ ಎಂದು ಸರ್ಕಾರದವರು ಹೇಳುತ್ತಾರೆ. ಈ ಹೋರಾಟಗಳು ಬರಲಿಕ್ಕೆ ಮುಖ್ಯವಾಗಿ ವಿರೋಧ ಪಕ್ಷದವರೇ ಕಾರಣ, ಚುನಾವಣೆಗಳು ಹತ್ತಿರ ಬಂದಿದೆ, ಚುನಾವಣೆಗಳು ಹತ್ತಿರ ಇರುವಾಗ ಹೋರಾಟಗಳನ್ನು ಮಾಡಿ ಜನರಿಗೆ ಹೆಚ್ಚು ಅತೃಪ್ತಿಯನ್ನುಂಟು ಮಾಡುವುದಕ್ಕೋಸ್ಕರ ಈ ಸಂದರ್ಭದಲ್ಲಿ ಹೋರಾಟಗಳನ್ನು ನಡೆಸುತ್ತಿದ್ದಾರೆ ಎಂದು ಸರ್ಕಾರದವರು ಹೇಳುತ್ತಾರೆ. ಆದರೆ ನಾನು ಹಾಗೆ ಹೇಳುವುದಿಲ್ಲ. ಹೋರಾಟಗಳು ಬರಲಿಕ್ಕೆ ಸರ್ಕಾರದವರೇ ಮುಖ್ಯ ಕಾರಣ, ಎಂದು ನಾನು ಹೇಳುತ್ತೇನೆ. ಸರ್ಕಾರದವರು ಮಾಲೀಕರ ಒಂದು ಪ್ರಭಾವಕ್ಕೆ ಒಳಗಾಗಿ ಚುನಾವಣೆಯಲ್ಲಿ ಅವರ ಸಹಾಯವನ್ನೂ ಪಡೆಯುವುದಕ್ಕೆ ಅವರಿಗೆ ಬೇಕಾದ ಬ್ಯಾಂಕಿನ ಸಾಲವನ್ನು ಪಡೆಯುವುದಕ್ಕಾಗಲೀ, ಕೈಗಾರಿಕಾ ಸಾಲವನ್ನು ಪಡೆಯುವುದಕ್ಕಾಗಲೀ ಅವರಿಗೆ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟು ಈ ಕಡೆ ಮಜ್ದೂರರನ್ನು ಹತ್ತಿಕ್ಕಿ ಕೆಲಸಗಳನ್ನು ಮಾಡುತ್ತಿದ್ದಾರೆ. ಈ ದೃಷ್ಟಿಯಿಂದ ಹೋರಾಟಗಳು ಬರಲಿಕ್ಕೆ ಸರ್ಕಾರದವರೇ ಮಾಲೀಕರಿಗೆ ಸಹಾಯಕರಾಗಿದ್ದಾರೆ ಎಂದು ನಾನು ಸ್ಪಷ್ಟವಾಗಿ ಹೇಳ ಬಯಸುತ್ತೇನೆ. ನಿನ್ನೆಯ ದಿವಸ ಶ್ರೀ ರಾಜಗೋಪಾಲ್‌ಅವರು ಕೆಲವು ವಿಷಯಗಳನ್ನು ಹೇಳಿದರು. ಕೈಗಾರಿಕೆಗಳಲ್ಲಿ ಕೆಲವೊಂದು ಯೂನಿಯನ್‌ಗಳು ಇದ್ದರೆ ಅವುಗಳ ಮುಖಾಂತರ ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲ. ಸರ್ಕಾರದ ಧೋರಣೆಯ ಪ್ರಕಾರ ಕೆಲವು ಕಡೆಗಳಲ್ಲಿ ಯೂನಿಯನ್ನಿಗೆ ಸರ್ಕಾರದವರು ಬೆಂಬಲವನ್ನು ಕೊಡುತ್ತಾರೆ. ಕೆಲವು ಕಡೆ ಯೂನಿಯನ್‌ಗಳು ಇಲ್ಲದಿದ್ದರೆ ಐ. ಎನ್. ಟಿ. ಯು. ಸಿ. (INTUC) ಅಂತಹ ಯೂನಿಯನ್ನಿನ ಕಾರ್ಯಕರ್ತರ ಮೂಲಕ ವ್ಯವಹಾರಗಳನ್ನು ನಡೆಸುತ್ತಾರೆ. ಈಗ ಬಿನ್ನಿಮಿಲ್ಲನ್ನು ತೆಗೆದುಕೊಂಡರೆ ಅಲ್ಲಿದ್ದಂತಹ ಹಳೆಯ ಯೂನಿಯನ್ ಅಳಿದು ಹೋಗಿದೆ. ಅದು ಅಳಿದು ಹೋಗಿ ಒಂದು ವರ್ಷ ಆಯಿತು. Labour has disowned the Union. ಈಗ ಅವರು ಬೇರೆ ಯೂನಿಯನ್ ಅನ್ನ ಸ್ಥಾಪನೆ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕೆಂದು ಕೇಳಿದ್ದಾರೆ. ಯೂನಿಯನ್ನಿನ ಕಾರ್ಯಕರ್ತರರು ಯಾರು ಯಾರು ಇದ್ದಾರೆಯೋ ಅವರೊಡನೆ ವ್ಯವಹಾರವನ್ನು ನಡೆಸುತ್ತಿದ್ದಾರೆ. ಹೊಸ ಯೂನಿಯನ್ ಬರಬೇಕು. ಆ ಪ್ರಕಾರ ಕೆಲಸ ನಡೆಯಬೇಕು. ಈಗ ಫ್ಯಾಕ್ಟರಿ ಮಿನಿಮಮ್ ವೇಜಸ್ ಆಕ್ಟ್ ಇದೆ. ಫ್ಯಾಕ್ಟರಿಯ ಆಕ್ಟ್ ಇದೆ. ಅಲ್ಲದೆ ಬೇರೆ ಬೇರೆ ಆಕ್ಟುಗಳೂ ಕೂಡ ಇವೆ. ಆದರೆ ಆ ಆಕ್ಟುಗಳನ್ನು ಜಾರಿ ಮಾಡುವ ರೀತಿಯಲ್ಲಿ ಕೂಡ ಒಂದು ಧೋರಣೆ ಇಲ್ಲ. ಯಾವಾಗಲೂ ಮಜೂರರಿಗೆ ಕಡಿಮೆ ಆದಂತಹ ಪ್ರಯೋಜನ ಸಿಕ್ಕುವಂತಹ ತೀರ್ಮಾನಗಳು ಬರಬಾರದು ಅದರಲ್ಲಿ ಯಾರಿಗೆ ಶಕ್ತಿ ಇರುತ್ತದೆಯೋ ಅವರಿಗೆ ಅದರ ಪ್ರಯೋಜನ ಬರುತ್ತದೆ. ಶಕ್ತಿ ಇಲ್ಲದೆ ಇರುವವರಿಗೆ ಅದರ ಪ್ರಯೋಜನ ಬರುವುದಿಲ್ಲ. ಆದ್ದರಿಂದ ಇದನ್ನೆಲ್ಲಾ ಒಟ್ಟಾಗಿ ನೊಡಿದರೆ ಏನು ಕಾಣುತ್ತದೆ. ಎಂದರೆ ಸರ್ಕಾರಕ್ಕೆ ಮಜೂರರ ಬಗ್ಗೆ ಸೋಷಯಲಿಸ್ಟಿಕ್ ಧೋರಣೆ ಇಲ್ಲ. ಎಂಬುದು ತೋರಿಸುತ್ತದೆ ಒಂದು ಕಡೆಯಲ್ಲಿ ಅತೃಪ್ತ ಕಾರ್ಮಿಕರ ಚಳುವಳಿ, ಒಂದು ಕಡೆ ಸಾಗರದಂತಹ ಜನತೆಯ ಶೋಷಣೆ, ಒಂದು ಕಡೆ ಜನತೆ ಬರಗಾಲಕ್ಕೆ ಒಳಗಾಗಿದ್ದಾರೆ. ಒಂದು ಕಡೆ ದೊಡ್ಡ ಭೂತದಂತಹ ಮಾಲೀಕ ಉದ್ಯಮಿಗಳು ಇದರ ಮಧ್ಯೆ ಕಾರ್ಮಿಕರು ಸಿಕ್ಕಿ ಬಿದ್ದಿದ್ದಾರೆ. ಇದರ ಬಗ್ಗೆ ಏನು ಮಾಡಬೇಕೆಂಬುದು ಕಾಣುವುದಿಲ್ಲ. ಆದ್ದರಿಂದ ಮಜೂರರ ಪರಿಸ್ಥಿತಿ ಏನಿದೆ ಎಂಬುದಕ್ಕೆ ಒಂದು ಸ್ಯಾಂಪಲ್ ಸರ್ವೆ ನಡೆಸುವುದು ಅಗತ್ಯ. ಅವರ ಜೀವನ ಪರಿಸ್ಥಿತಿ ಹೇಗಿದೆ, ಅವರ ಜೀವನದ ಸ್ಥಿತಿಯನ್ನು ಸುಧಾರಿಸುವುದು ಅಗತ್ಯ ಉಂಟೋ ಅಥವಾ ಇಲ್ಲವೋ ಎಂಬುದಕ್ಕೆ ಒಂದು ಸ್ಯಾಂಪಲ್ ಸರ್ವೆ ನಡೆಸುವುದು ಅಗತ್ಯವಿದೆ. ಕೈಗಾರಿಕೆಗಳಲ್ಲಿ ಲಾಭ ಎಷ್ಟು ಬರುತ್ತದೆ ಎಂಬುದು ನಮಗೆ ಬೇಕಾಗಿಲ್ಲ. ಶೇಕಡ 30 ರಿಂದ 60 ರ ವರೆಗೂ ಲಾಭ ಬರಬಹುದು. ಬೆಂಗಳೂರು ನಗರ ಒಂದೇ ಅಲ್ಲ ಇಡೀ ದೇಶದಲ್ಲೇ ಕಾರ್ಮಿಕರ ಜೀವನದ ವೆಚ್ಚ ಹೆಚ್ಚಾಗಿದೆ. ಬೆಂಗಳೂರು ನಗರದಲ್ಲಿ ಕಾಸ್ಟ್ ಆಫ್ ಲಿವಿಂಗ್ ಇಂಡೆಕ್ಸ್ 1960ನೇ ಇಸವಿಯಲ್ಲಿ 380 ಇತ್ತು. ಈಗ 698 ಆಗಿದೆ. ಎಲ್ಲಾ ಸಾಮಾನುಗಳ ಬೆಲೆಯೂ ಏರಿದೆ, ಎರಡನೆಯ ಪಂಚವಾರ್ಷಿಕ ಯೋಜನೆಯ ಪ್ರಕಾರ ಮಿನಿಮಮ್ ವೇಜಸ್ ಎಷ್ಟು ಇತ್ತು, ಈಗ ಮಿನಿಮಮ್ ವೇಜಸ್ ಎಷ್ಟು ಇದೆ ಎಂಬುದನ್ನು ಪರಿಶೀಲನೆ ಮಾಡಿ ನೋಡಿದರೆ ಈಗ ಇರತಕ್ಕ ಮಿನಿಮಮ್ ವೇಜಸ್ ಸರಿಯಿಲ್ಲ. ರೈತ ಕಾರ್ಮಿಕನ ಕನಿಷ್ಠ ವೇತನ 1951ರಲ್ಲಿ ಹೆಚ್ಚು ಇದ್ದರೆ, ಈಗ ಬಹಳ ಕಡಿಮೆಯಾಗಿದೆ. ಈಗ ನಿರುದ್ಯೋಗಿಗಳ ಸಂಖ್ಯೆ ಜಾಸ್ತಿಯಾಗಿದೆ. ಈಗ ನಮ್ಮ ಪ್ರಾಂತದಲ್ಲಿ 13 ಲಕ್ಷ ಜನ ನಿರುದ್ಯೋಗಿಗಳಿದ್ದಾರೆ. ನಿರುದ್ಯೋಗ ಕ್ಷಾಮ ಮತ್ತು ಉಪವಾಸ ಇವೊತ್ತಿನ ದಿವಸ ದೇಶದಲ್ಲಿ ತಾಂಡವವಾಡುತ್ತಿವೆ. ಇದರ ಬಗ್ಗೆ ಸರ್ಕಾರದವರು ತಮ್ಮ ಗಮನವನ್ನು ಹರಿಸಬೇಕು. ರಾಜ್ಯದ ಜನತೆಯ ಜೀವನದ ಪ್ರಶ್ನೆ ಇದರಲ್ಲಿ ಸೇರಿದೆ. ಆದಕಾರಣ ಒಂದು ಗಂಭೀರವಾದ ದೃಷ್ಟಿಯನ್ನು ಇದರ ಕಡೆಗೆ ಹರಿಸುವುದು ಅಗತ್ಯವುಂಟು.

(ಶ್ರೀ ಎ. ಕೃಷ್ಣಶೆಟ್ಟಿ)

ಇದರ ಬಗ್ಗೆ ಒಂದು ಹೊಸ ದೃಷ್ಟಿ ಕೋಣವನ್ನು ಹರಿಸುವುದು ಅಗತ್ಯವುಂಟು ಎಂದು ನಾನು ಹೇಳ ಬಯಸುತ್ತೇನೆ. ಮಿನಿಮಮ್ ವೇಜಸ್ ಆಕ್ಟ್ ಅನ್ನು ರಾಜಾಸ್ಥಾನದಲ್ಲಿ ತಿದ್ದುಪಡಿ ಮಾಡಿದ್ದಾರೆ. ಬೊಂಬಾಯಿ ಮತ್ತು ಮದ್ರಾಸ್ ಪ್ರಾಂತಗಳಲ್ಲಿ ಕಾರ್ಮಿಕರ ಮಿನಿಮಮ್ ವೇಜಸ್ ಅನ್ನು ತಿದ್ದುಪಡಿ ಮಾಡಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಮಾತ್ರ ಮಿನಿಮಮ್ ವೇಜಸ್ ಆಕ್ಟನ್ನು ತಿದ್ದುಪಡಿ ಮಾಡಿಲ್ಲ. ಕೃಷಿ ಕಾರ್ಮಿಕರ ಮಜೂರಿಯನ್ನು ಎರಡು ಸಲ ಕೇರಳ ಮತ್ತು ಆಂಧ್ರದಲ್ಲಿ ತಿದ್ದಪಡಿ ಮಾಡಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಕೃಷಿ ಕಾರ್ಮಿಕರ ಮಜೂರಿಯನ್ನು 1951 ರಿಂದ ಈಚೆಗೆ ತಿದ್ದುಪಡಿ ಮಾಡಿಲ್ಲ. ಹೀಗಿರಬೇಕಾದರೆ ಆಹಾರದ ಉತ್ಪತ್ತಿ ಹೇಗೆ ಹೆಚ್ಚಾಗುತ್ತದೆ? ಕೃಷಿ ಕಾರ್ಮಿಕರ ಜೀವನ ಸುಗಮವಾಗಿ ಆದರೆ, ಆಹಾರದ ಉತ್ಪತ್ತಿ ಹೆಚ್ಚು ಬರುತ್ತದೆ. ಈ ದೃಷ್ಟಿಯಿಂದ ನಮ್ಮ ರಾಜ್ಯದಲ್ಲಿ ನಮ್ಮ ಸರ್ಕಾರದವರು ಕೃಷಿ ಕಾರ್ಮಿಕರ ಜೀವನವನ್ನು ಸುಧಾರಿಸುವುದಕ್ಕೆ ಪ್ರಯತ್ನ ಮಾಡಿಲ್ಲ.

ಇನ್ನು ಬೀಡಿ ಮಜೂರರು ನಮ್ಮ ರಾಜ್ಯದಲ್ಲಿ ಬಹಳ ಸಂಖ್ಯೆಯಲ್ಲಿ ಇದ್ದಾರೆ. ಬೀಡಿ ಕೈಗಾರಿಕೆಯಷ್ಟು ದೊಡ್ಡ ಕೈಗಾರಿಕೆ ನಮ್ಮ ರಾಜ್ಯದಲ್ಲಿ ಬೇರೆ ಯಾವ ಕೈಗಾರಿಕೆಯೂ ಇಲ್ಲ. ಆದರೆ ಅವರಿಗೆ ಯಾವ ಒಂದು ಸವಲತ್ತನ್ನೂ ಒದಗಿಸಿಕೊಟ್ಟಿಲ್ಲ. ಈ ಬೀಡಿ ಮಜೂರರಿಗೆ ಪ್ರಾವಿಡೆಂಟ್ ಫಂಡ್ ಮತ್ತು ಇ.ಎಸ್.ಐ, ಸೌಲಭ್ಯಗಳನ್ನು ಒದಗಿಸಿಕೊಟ್ಟಿಲ್ಲ. ಈ ಬೀಡಿ ಕೈಗಾರಿಕೆಯ ಕಂಟ್ರಾಕ್ಟ್ ಪದ್ಧತಿಯಲ್ಲಿ ಬೀಡಿ ಮಜೂರರು ಒಂದು ದೊಡ್ಡ ಶೋಷಣೆಗೆ ಒಳಗಾಗಿದ್ದಾರೆ. ಇವರಿಗೆ ಕನಿಷ್ಠ ಕೂಲಿಯನ್ನು ನಿಗದಿ ಮಾಡುವುದರಲ್ಲಿ ಬಹಳ ದೊಡ್ಡ ಅನ್ಯಾಯವಾಗಿದೆ. ಬೀಡಿ ಕೈಗಾರಿಕೆಗಳಲ್ಲಿ ಕೆಲಸ ಮಾಡುವಂತಹ ಮಜೂರರಲ್ಲಿ 100ಕ್ಕೆ 20 ಜನ ಕ್ಷಯರೋಗಕ್ಕೆ ತುತ್ತಾಗಿದ್ದಾರೆ ಎಂದು ನಾನು ಸ್ಪಷ್ಟವಾಗಿ ಹೇಳ ಬಯಸುತ್ತೇನೆ. ಇದರ ಬಗ್ಗೆ ಅವರಿಗೆ ಯಾವ ಅನುಕೂಲತೆಯನ್ನು ಒದಗಿಸಿ ಕೊಟ್ಟಿಲ್ಲ.

ಕೇರಳದಲ್ಲಿ ಕುಂಜತ್ತೂರು, ಪಾವೂರು ಈ ಗ್ರಾಮಗಳಲ್ಲಿ ಬೀಡಿ ಕೆಲಸಗಾರರಿಗೆ ಕೊಡುವ ಮಜೂರಿಗೂ, ಮೈಸೂರು ಭಾಗದಲ್ಲಿರುವ ಗ್ರಾಮಗಳಲ್ಲಿ ಸಿಕ್ಕುವ ಮಜೂರಿಗೂ 15 ಪೈಸೆಯಷ್ಟು ಅಂತರವಿದೆ. ಕೇರಳದಲ್ಲಿ ಹೆಚ್ಚು, ಇಲ್ಲಿ ಕಡಮೆ ಮಜೂರಿ ಸಿಕ್ಕುತ್ತದೆ. ದರ್ಬಾರ್, ಗಣೇಶ, ಪಿ.ವಿ.ಎಸ್., ಸಾಧು ಈ ಬೀಡಿಗಳ ಮಾಲೀಕರು ಕೊಡುವ ಮಜೂರಿಯಲ್ಲಿ ಅಂತರವಿದೆ. ಇದನ್ನು ನೋಡುವುದು ಅಗತ್ಯವುಂಟು. ಕಂಟ್ರಾಕ್ಟ್ ಪದ್ಧತಿಯಲ್ಲಿ ಈ ರೀತಿ ನಡೆಯುವುದನ್ನು ನೋಡ ಬಹುದು. ಇದೇ ಹೊತ್ತಿಗೆ ಕೇಂದ್ರದಲ್ಲಿ ಇತ್ತೀಚೆಗೆ ಪಾಸಾದ ಕಾನೂನನ್ನು ಕೂಡ ಜಾರಿಗೆ ತರುವ ಮಟ್ಟಿಗೆ ಸ್ಪಷ್ಟತೆ ಇಲ್ಲ. ಸಣ್ಣ ಮಕ್ಕಳನ್ನೂ ಕೂಡ ಬೀಡಿ ಕೈಗಾರಿಕೆಯಲ್ಲಿ ಕೆಲವರು ದುಡಿಸುತ್ತಾರೆ. ಶಾಲೆಗೆ ಹೋಗುವ ಮಕ್ಕಳನ್ನು ಕೂಡ ದುಡಿಸುತ್ತಾರೆ. ಅವರವರ ಮನೆಗಳಲ್ಲಿ ದುಡಿಯುವುದಿಲ್ಲ, ಬೇರೆ ಕಡೆ ಕೆಲಸ ಮಾಡಿಸುತ್ತಾರೆ, 6 ರಿಂದ 11 ವರ್ಷದವರೆಗಿನ ಹೆಣ್ಣು ಮಕ್ಕಳನ್ನು ಮತ್ತು ಗಂಡು ಮಕ್ಕಳನ್ನು ಈ ಕೆಲಸದಲ್ಲಿ ದುಡಿಸುತ್ತಾರೆ. ಉಳ್ಳಾಳ ಒಂದೇ ಗ್ರಾಮದಲ್ಲಿ 98 ಮಕ್ಕಳು ಕೆಲಸ ಮಾಡುತ್ತಿದ್ದಾರೆ. ಇದನ್ನು ನಾನು ಅಂಕ ಸಂಖ್ಯೆಗಳಿಂದ ಹೇಳುತ್ತಿದ್ದೇನೆ. ನೂಲು ಹಾಕುವುದು ಮತ್ತು ಇತರ ಕೆಲಸಗಳಿಗೆ ಹುಡುಗರನ್ನು ಹಾಕುತ್ತಾರೆ. ಇದರ ಕಡೆ ಸ್ವಲ್ಪ ದೃಷ್ಟಿ ಹರಿಸಿ ಅವರ ಪರಿಸ್ಥಿತಿಯನ್ನು ಸುಧಾರಿಸುವುದು ಮುಖ್ಯ.

ಮಿನಿಮಂ ವೇಜಸ್ ತಿದ್ದುಪಡಿ ಮಾಡುವುದು ಅಗತ್ಯವುಂಟು. ಇದನ್ನು ತಿದ್ದುಪಡಿ ಮಾಡಲಿಕ್ಕೆ ಮತ್ತು ಬೇರೆ ರೀತಿಯ ಸವಲತ್ತುಗಳನ್ನು ಒದಗಿಸಲಿಕ್ಕೆ ಆಲೋಚನೆ ಮಾಡಬೇಕು. ಬೀಡಿ ಕೆಲಸಗಾರರಿಗೆ ಮಜೂರಿ ಕೊಡುವುದರಲ್ಲಿ ಸರ್ಕಾರ ಏನು ಮಾಡಿದೆ ಎಂದು ಈ ಸಂದರ್ಭದಲ್ಲಿ ಕೇಳಲಿಕ್ಕೆ ಬಯಸುತ್ತೇನೆ. ಸರ್ಕಾರಕ್ಕೂ ಮುಂದೆ ಕೆಲವು ಕಡೆ ಮಾಲೀಕರೇ ಹೋಗಿದ್ದಾರೆ. ಆದರೂ ಕೂಡ ಸರ್ಕಾರ ಏನೂ ಮಾಡಿಲ್ಲ, ಕನಿಷ್ಠ ವೇತನವನ್ನು ಅದೇ ರೀತಿಯಲ್ಲಿ ಇಟ್ಟಿದೆ.

ಪ್ಲಾಂಟೇಷನ್ ಲೇಬರ್ ಮಟ್ಟಿಗೆ ನನಗೆ ಕಾಣುವುದು ಕಂಗಾಣಿ ಪದ್ಧತಿಗಿಂತಲೂ ಹಾಳು ಕ್ರಮ ಮತ್ತೊಂದಿಲ್ಲ. ನೂರರಲ್ಲಿ 40 ಜನ ಬದಲಿ ಕೆಲಸಗಾರರಿದ್ದಾರೆ. ಅವರಿಗೆ ಯಾವ ಸವಲತ್ತುಗಳೂ ಇಲ್ಲ. ಬದಲಿ ಕೆಲಸಗಾರರು ಎಂದರೆ ಅವರನ್ನು ಖಾಯಂ ಕೆಲಸಗಾರರಾಗಿ ಅಂಗೀಕಾರ ಮಾಡದೆ ವರ್ಷಗಟ್ಟಲೆ ಇಟ್ಟುಕೊಂಡಿರುತ್ತಾರೆ. ಖಾಯಂ ಕೆಲಸಗಾರನಾಗಿ ಅಂಗೀಕಾರ ಮಾಡಿದ ಕೂಡಲೇ ಅವರಿಗೆ ಕೆಲವು ಸವಲತ್ತುಗಳನ್ನು ಕೊಡಬೇಕಾಗುತ್ತದೆ. ಪ್ರಾವಿಡೆಂಟ್ ಫಂಡ್ ಸೌಕರ್ಯ, ರಜ ಸೌಕರ್ಯ, ವೈದ್ಯಕೀಯ ಸೌಕರ್ಯ ಇನ್ನು ಇತರ ಸವಲತ್ತುಗಳನ್ನು ಕೊಡಬೇಕಾಗುತ್ತದೆ. ಈ ಸಲವತ್ತುಗಳನ್ನು ಕೊಡುವುದರ ಬದಲು ಅವರನ್ನು ಬದಲಿಯಲ್ಲಿಯೇ ಇಟ್ಟುಕೊಂಡು ಕೆಲಸ ಮಾಡುತ್ತಾರೆ. ಆದುದರಿಂದ ನಾನು ಹೇಳುವುದು ನೇಕೆಂದರೆ, ಕೃಷಿ ಮಜೂರರು, ತೋಟದ ಮಜೂರರು,

ಬೀಡಿ ಮಜೂರರು ಇವರ ಸಂಖ್ಯೆಯೇ ನೂರಕ್ಕೆ 90 ಭಾಗ ಆಗುತ್ತದೆ. ಇವರಮಟ್ಟಿಗೆ ಇಲ್ಲಿರುವಂಥ ದಾರುಣ ಪರಿಸ್ಥಿತಿ ಬೇರೆಯಾವ ಪ್ರಾಂತದಲ್ಲಿಯೂ ಇಲ್ಲ. ಮದ್ರಾಸಿನಲ್ಲಿ ಹಾಗೆ ಮಾಡಿದ್ದಾರೆ, ಆಂಧ್ರ ದಲ್ಲಿ ಹಾಗೆ ಮಾಡಿದ್ದಾರೆಂದು ಹೇಳುತ್ತಾರೆ. ಆದರೆ ಆಂಧ್ರದ ಪ್ರಕಾರ ಅಥವಾ ಮದ್ರಾಸ್ ಪ್ರಕಾರ ಇಲ್ಲಿ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಅಷ್ಟನ್ನಾದರೂ ಮಾಡುವ ಅಗತ್ಯವುಂಟು ಎಂದು ನಾನು ಸರ್ಕಾರವನ್ನು ಬಲವಾಗಿ ಒತ್ತಾಯ ಮಾಡುತ್ತೇನೆ.

ನಮ್ಮ ಜಿಲ್ಲೆಯಲ್ಲಿ ಹೆಂಚಿನ ಮಜೂರರ ವಿಷಯದಲ್ಲಿ, ಗೋಡಂಬಿ ಕಾರ್ಖಾನೆ ಮಜೂರರ ವಿಷಯದಲ್ಲಿ ಒಂದೆರಡು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಹೆಂಚಿನ ಕಾರ್ಖಾನೆಗಳಲ್ಲಿ ದೀರ್ಘಕಾಲ ಹೋರಾಟ ನಡೆಯಿತು. ಈ ಹೋರಾಟಗಳು ಏಕೆ ನಡೆದುವು ? ಮಾಲೀಕರೊಳಗೆ ಮತ್ತು ಮಜೂರರೊಳಗೆ ಒಪ್ಪಂದಗಳಾಗಿದ್ದು ಅವುಗಳನ್ನು ಮಾಲೀಕರು ಮುರಿದ ಬಗ್ಗೆ ಕೆಲವು ಹೋರಾಟಗಳು ನಡೆದಿದೆ, ಕೆಲವೆಡೆಗಳಲ್ಲಿ ಕೋರ್ಟುಗಳಲ್ಲಿ ಆದ ತೀರ್ಮಾನದ ಪ್ರಕಾರ ಅವರ ಕೂಲಿ ಯನ್ನು ಪಡೆಯುವುದಕ್ಕೆ ನಡೆದ ಹೋರಾಟಗಳು. ಇವೆರಡರಲ್ಲಿ ಸರ್ಕಾರದ ಪಾತ್ರವೇನು ಎಂದರೆ, ಉದಾಸೀನ ಪಾತ್ರ. ಮಾಲೀಕನಿಗೆ ಇದರಿಂದ ಏನಾದರೂ ಬೇಸರ ಬರುತ್ತದೆ, ಹಾಗೆ ಬರುವುದಿದ್ದರೆ ನಾವು ಸ್ವಲ್ಪ ಈ ಪ್ರಶ್ನೆಯನ್ನು ತೆಗೆದು ಮಾತನಾಡುವುದಿಲ್ಲ ಎಂದು ಹೇಳುವ ಉದಾಸೀನ ಭಾವ. ಇವರಿಗೆ ಇದು ಸರಿಯೇ ? ಒಂದು ಕಡೆ ಒಂದು ಹೆಂಚಿನ ಕಾರ್ಖಾನೆಯಲ್ಲಿ ದುರ್ನಾತದ ಮೀನಿನ ಎಣ್ಣೆಯನ್ನು ಉಪಯೋಗಿಸುತ್ತಾರೆ. ಕೇರಳ ಟೈಲ್ ವರ್ಕ್ಸ್‌ನಲ್ಲಿ ಹೀಗೆ ಮಾಡಿದ್ದಾರೆ. ಸರ್ಕಾರ ಏನು ಮಾಡುತ್ತಿದೆ ಎಂದರೆ ಅಲ್ಲಿ 144ನೆ ಸೆಕ್ಷನ್ ಹಾಕುತ್ತಾರೆ. ಕೆಲವು ಜನರನ್ನು ಪೋಲೀಸಿನವರು ಅರೆಸ್ಟ್ ಮಾಡುತ್ತಾರೆ, ಕೇಸುಗಳನ್ನು ಹಾಕುತ್ತಾರೆ. ನಿಜವಾಗಿ ಒಂದು ಒಪ್ಪಂದ ವಾಗಿರುವಾಗ ಅದನ್ನು ಪರಿಪಾಲಿಸಲಿಕ್ಕೆ ಅವರು ತಯಾರಿಲ್ಲದೆ ಇರುವಾಗ ಸರ್ಕಾರ ಯಾರೊಟ್ಟಿಗೆ ನಿಂತುಕೊಂಡು ಅಲ್ಲಿ ಕೆಲಸ ಮಾಡಬೇಕೆಂದು ಕೇಳುತ್ತೇನೆ. ಅದೇ ಹೊತ್ತಿಗೆ ಹೆಂಚಿನ ಕಾರ್ಖಾನೆ ಮಾಲೀಕರಿಗೂ, ಕಾರ್ಮಿಕರಿಗೂ ಆದ ಒಪ್ಪಂದದ ಪ್ರಕಾರ ಏರಿದ ಜೀವನ ವೆಚ್ಚದ ಪ್ರಕಾರ ಮಜೂರಿ ಯನ್ನು ಕೊಡಲಿಕ್ಕೆ ಮಾಲೀಕರು ತಯಾರಿಲ್ಲ. ಅವರಿಗೆ ಕೆಲವು ಕಿರುಕುಳಗಳನ್ನು ಕೊಡುವುದಲ್ಲದೆ ಕೆಲವು ಪ್ರಶ್ನೆಗಳನ್ನು ಎತ್ತಿದ್ದಾರೆ. ಆ ಒಪ್ಪಂದದ ಪ್ರಕಾರ ಮಜೂರರಿಗೆ ಮಜೂರಿ ಕೊಡುವಂತೆ ನೋಡುವುದು ಸರ್ಕಾರದ ಕರ್ತವ್ಯವಾಗಿದೆ. ಇದನ್ನು ಅವರು ನೋಡಬೇಕು.

ಗೋಡಂಬಿ ಕಾರ್ಖಾನೆಯಲ್ಲಿ ಹೋರಾಟ ಕೆಲವು ತಿಂಗಳಿನಿಂದ ನಡೆಯುತ್ತಿದೆ. ಸರ್ಕಾರ ಏನು ಮಾಡಿತು ? ಕೋರ್ಟಿನಲ್ಲಿ ಆದ ತೀರ್ಮಾನದ ಪ್ರಕಾರ ಹೆಚ್ಚಿನ ಮಜೂರಿಯನ್ನು ಕೊಡಲಿಕ್ಕೆ ಪ್ರಯತ್ನ ಮಾಡಿ ಮಾಲೀಕರಿಂದ ಕೊಡಿಸಬೇಕಾಗಿತ್ತು. ಕಡೆಗೆ ತೀರ್ಮಾನವಾದದ್ದು ಅಲ್ಲಿನ ಎಂ.ಎಲ್.ಎ. ಶ್ರೀ ಎಂ. ಶ್ರೀನಿವಾಸ ನಾಯಕರು ಪ್ರವೇಶ ಮಾಡಿದ್ದರಿಂದ.

ಶ್ರೀ ಡಿ. ದೇವರಾಜ ಅರಸ್ (ಕಾರ್ಮಿಕ, ಸಾರಿಗೆ ಮತ್ತು ವಸತಿ ಶಾಖೆಯ ಮಂತ್ರಿಗಳು).—ಅವರು ಸರ್ಕಾರ ಅಲ್ಲವೇ ?

ಶ್ರೀ ಎ. ಕೃಷ್ಣ ಶೆಟ್ಟಿ.—ಅವರೂ ಸರ್ಕಾರವೇ, ನಾನೂ ಸರ್ಕಾರವೇ. ಅವರು ಸರ್ಕಾರದ ಜನರಾದರೂ ಅವರು ಸರ್ಕಾರವಲ್ಲ. ಅವರು ಸರ್ಕಾರ ಆಗುತ್ತಿದ್ದರೆ ಅವರನ್ನೇ ಏಕೆ ಮುಂಚೆಯೇ ಹಾಗೆ ನೇಮಕ ಮಾಡಲಿಲ್ಲ ಎಂದು ಕೇಳುತ್ತೇನೆ.

ಇಲ್ಲಿ ಮುಖ್ಯವಾದದು ಏನೆಂದರೆ, ಸಾಮಾಜಿಕ ಕಾರ್ಯಕ್ರಮವನ್ನು ಇಟ್ಟುಕೊಂಡು ಮಜೂರರ ಜೀವನವನ್ನು ಸುಗಮಗೊಳಿಸಿ, ವಿಷಮ ಪರಿಸ್ಥಿತಿಯಲ್ಲಿ ದೇಶದಲ್ಲಿ ಹೆಚ್ಚು ಉತ್ಪಾದನೆ ಆಗಬೇಕೆಂದು ಹೇಳುವಾಗ ಮಾಲೀಕರು ಏನು ಮಾಡಿದರೂ ಸರಿ ಎಂದು ಅವರನ್ನು ಹಾಗೆಯೇ ಬಿಟ್ಟು ಮಜೂರರ ಮುಂದಾಳುಗಳ ಮೇಲೆ ಡಿ.ಐ.ಆರ್. ತರುವ ಮೂಲಕ ಮತ್ತು ಮಾಲೀಕರ ಮೇಲೆ ಡಿ.ಐ.ಆರ್. ತರದೆ ಅವರನ್ನು ಸ್ಕಾಟ್ ಫ್ರೀ ಮಾಡಿ, ಲಂಗು ಲಗಾಮು ಇಲ್ಲದೆ ಮಜೂರರನ್ನು ಶೋಷಣೆ ಮಾಡುವ ರೀತಿಯನ್ನು ನಿಲ್ಲಿಸಿ ಹೊಸ ರೀತಿಯಲ್ಲಿ ಮಜೂರರಿಗೆ ಬೇಕಾದ ಅನುಕೂಲತೆಗಳನ್ನು ಕಲ್ಪಿಸಿ, ಕನಿಷ್ಠ ಕೂಲಿಯನ್ನು ಜಾಸ್ತಿ ಮಾಡಿ, ಬೇರೆ ಕೈಗಾರಿಕೆ ಗಳಂತೆ ಇವರಿಗೂ ಕನಿಷ್ಠ ವೇತನ ಬರುವ ಹಾಗೆ ಜಾರಿ ಮಾಡಿ, ಲೇಬರ್ ಇಲಾಖೆಯಲ್ಲಿ ಲೇಬರ್ ಕಮಿಷನರ್ ಒಬ್ಬರ ಕೈಯಲ್ಲಿಯೇ ಅಧಿಕಾರ ವನ್ನು ಕೇಂದ್ರೀಕರಿಸದೆ, ಅವರೇ ವಿಷ್ಣು, ಅವರೇ ಬ್ರಹ್ಮ ಅವರೇ ಮಹೇಶ್ವರ ಎನ್ನುವ ರೀತಿಯಲ್ಲಿ ಅಧಿಕಾರವನ್ನು ಕೇಂದ್ರೀಕರಿಸದೆ ಅದನ್ನು ವಿಕೇಂದ್ರಗೊಳಿಸಿ ಅವರ ಕೈಕೆಳಗೆ ಇರುವ ಅಧಿಕಾರಿಗಳು ಅಧಿಕಾರವನ್ನು ಚಲಾವಣೆ ಮಾಡುವಾಗ ಜಬರ್‌ದಸ್ತ್ ಮಾಡದೆ, ಕಾರ್ಖಾನೆ ಇನ್‌ಸ್ಪೆಕ್ಟರ್ ಮತ್ತು ಅಧಿಕಾರಿಗಳ ಬಗರ್‌ಪಂಚಿ ನಡೆಯದಂತೆ ನೋಡಿಕೊಂಡು ಒಳ್ಳೆಯ ರೀತಿಯ ಧೋರಣೆಯನ್ನು ಅನುಸರಿಸುತ್ತ, ಈ ಮಜೂರರಿಗೆ ನ್ಯಾಯವನ್ನು ದೊರಕಿಸಿಕೊಡುವ ಪ್ರಯತ್ನವನ್ನು ಮಾಡಬೇಕು, ಮಜೂರರು ಸುಖವಾಗಿದ್ದು ಅವರು ಸರಿಯಾಗಿ ಕೆಲಸ ಮಾಡಿದರೆ ದೇಶದ ಸಂಪತ್ತು ಹೆಚ್ಚಾಗುತ್ತದೆ. ಆ ದೃಷ್ಟಿಯಿಂದ ಕೆಲಸ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

(ಶ್ರೀ ಎ. ಕೃಷ್ಣ ಶೆಟ್ಟಿ)

ಶ್ರೀ ಬಿ. ಎಲ್. ಗೌಡ (ಚಳ್ಳಕೆರೆ).—ಸ್ವಾಮಿ, ರೈತ ನಮ್ಮ ದೇಶದ ಬೆನ್ನು ಮೂಳೆ, ದೇಶದಲ್ಲಿ ಆಹಾರ ಉತ್ಪನ್ನ ಮಾಡುವುದಕ್ಕೆ ಅವರಿಗೆ ಎಷ್ಟು ಸಹಾಯ ಮಾಡಿದರೂ ಕೂಡ ಅದು ಕಡಿಮೆ ಎಂಬುದು ನಮ್ಮೆಲ್ಲರ ತಿಳಿವಳಿಕೆಗೂ ಬಂದಿದೆ. ಅದಕ್ಕೆ ವಿಶೇಷವಾಗಿ ಪ್ರಯತ್ನ ಮಾಡುತ್ತಾ ಇದ್ದೇವೆ. ಇಂತಹ ಒಂದು ಸಂದರ್ಭದಲ್ಲಿ ಸಹಕಾರ ಸಂಘಗಳ ಪಾತ್ರ ಬಹಳ ವಿಶೇಷವಾಗಿದೆ ಎಂಬುದನ್ನು ನಾವು ಅರಿತುಕೊಂಡಿದ್ದೇವೆ. ಸಹಕಾರ ಸಂಘಗಳ ಪ್ರಗತಿ ನಮ್ಮ ದೇಶದಲ್ಲಿ ಉತ್ತಮವಾಗಿದೆ ಎಂದು ಬಹಳ ಸಂತೋಷದಿಂದ ಈ ಸಭೆಯ ಮುಂದೆ ಹೇಳಬಯಸುತ್ತೇನೆ. ಈಗ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ 3,693 ಸಹಕಾರ ಸಂಘಗಳು ನಮ್ಮ ದೇಶದಲ್ಲಿ ಆದವು. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ 9,107ಕ್ಕೆ ಏರಿತು. ಮೆಂಬರ್‌ಷಿಪ್ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ 3.45 ಇದ್ದದ್ದು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ 12 ಲಕ್ಷಕ್ಕೆ ಏರಿದೆ, ಮೂರನೆಯ ಪಂಚವಾರ್ಷಿಕ ಯೋಜನೆ ಮುಗಿಯುವ ಹೊತ್ತಿಗೆ ಅದು 15 ಲಕ್ಷಕ್ಕೆ ಬಂದಿದೆ. ಇದೇ ರೀತಿ ಷೇರ್ ಬಂಡವಾಳ 1.45 ಇದ್ದದ್ದು 4.72ಕ್ಕೆ ಏರಿ ಈಗ 7.19ಕ್ಕೆ ಬಂದಿದೆ. ಸಹಕಾರ ಸಂಘಗಳ ಮೂಲಕ ರೈತರಿಗೆ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ 69.47 ಲಕ್ಷ ರೂಪಾಯಿ ಸಾಲ ಕೊಟ್ಟಿದ್ದೇವೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ 4.14 ಕೋಟಿ ರೂಪಾಯಿ ಸಾಲ ಕೊಟ್ಟಿದ್ದೇವೆ. ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ 18.66 ಕೋಟಿ ರೂಪಾಯಿಗಳ ಸಾಲವನ್ನು ಕೊಟ್ಟಿದ್ದೇವೆ. ಈ ಅಂಕಿಅಂಶಗಳನ್ನೆಲ್ಲಾ ನಾವು ನೋಡಿದರೆ ಇದರಿಂದ ಹೆಚ್ಚು ಹೆಚ್ಚು ಸಹಾಯ ರೈತರಿಗೆ ಆಗುತ್ತಾ ಇದೆ, ರೈತ ಹೆಚ್ಚು ಆಹಾರವನ್ನು ಬೆಳೆಯುವುದಕ್ಕೆ ಅವಕಾಶವಾಗಿದೆ ಎಂದು ಹೇಳಿ ಈ ಸಭೆಯಲ್ಲಿ ಸಾಲ ಹೇಳಬಯಸುತ್ತೇನೆ. 18.66 ಕೋಟಿ ರೂಪಾಯಿ ಸಾಲ ಕೊಟ್ಟಿದ್ದರೂ ಸಹ ಅದರಲ್ಲಿ 17 ಕೋಟಿ ರೂಪಾಯಿಗಳನ್ನು ವಸೂಲು ಮಾಡಿದ್ದೇವೆ. ಹಳ್ಳಿಯವರಿಂದ ಇಷ್ಟು ಹಣವನ್ನು ವಸೂಲು ಮಾಡಿರುವುದು ಬಹಳ ಸಂತೋಷದ ಸಂಗತಿ ಎಂದು ನಾನು ಹೇಳಲು ಬಯಸುತ್ತೇನೆ. ಇದರಲ್ಲಿ ಕೆಲವು ಲೋಪದೋಷಗಳು ಇವೆ. ಬಹಳ ಮುಖ್ಯವಾದ ಈ ಸಹಕಾರ ತತ್ವ ಜಾರಿಯಾಗಬೇಕಾದರೆ ವಿಲೇಜ್ ಕೋ-ಅಪರೇಟೀವ್ ಸರ್ವೀಸ್ ಸೊಸೈಟಿಗಳನ್ನು ಬಲಪಡಿಸಬೇಕು. ನಾವು ಮಾಡುತ್ತಾ ಇರುವ ರೀತಿಯಲ್ಲಿ ಅಪೆಕ್ಸ್ ಬ್ಯಾಂಕ್ ಮತ್ತು ಜಿಲ್ಲಾ ಬ್ಯಾಂಕುಗಳಿಗೆ ಹೆಚ್ಚು ಪ್ರೋತ್ಸಾಹ ಕೊಡುತ್ತಾ ಇದ್ದೇವೆ. ಪ್ರಾಥಮಿಕ ಸಂಘಗಳಿಗೆ ಪ್ರೋತ್ಸಾಹ ಕೊಡುತ್ತಾ ಇಲ್ಲ. ಸಹಕಾರ ತತ್ವ ನಿಜವಾಗಿಯೂ ಯಶಸ್ವಿಯಾಗಬೇಕಾದರೆ ಏನು ಉದ್ದೇಶ ಇಟ್ಟುಕೊಂಡಿದ್ದೇವೆಯೋ ಅದು ಸಾಧನೆಯಾಗಬೇಕೆಂದರೆ ಹಳ್ಳಿಯಲ್ಲಿರತಕ್ಕ ಸಹಕಾರ ಸಂಘಗಳು ಯಶಸ್ವಿಯಾಗಿ ಕೆಲಸ ಮಾಡಬೇಕು. ಅದಕ್ಕೆ ಬೇಕಾದ ಸೌಲತ್ತುಗಳನ್ನು ನಾವು ಕೊಡಬೇಕು. ಪ್ರತಿಯೊಂದು ಪಂಚಾಯ್ತಿಗೂ ಒಂದು ಸಹಕಾರ ಸಂಘ ಇರಬೇಕೆಂದು ತತ್ವ ಇರುವುದರಿಂದ ಒಂದೊಂದು ಪಂಚಾಯ್ತಿಯಲ್ಲಿ ಒಂದೂವರೆ ಸಾವಿರದಿಂದ 5 ಸಾವಿರದವರೆಗೂ ಜನಸಂಖ್ಯೆ ಇರುವುದರಿಂದ ಆ ಒಂದು ವ್ಯಾಪ್ತಿಯಲ್ಲಿ ಕೆಲಸ ಮಾಡತಕ್ಕ ಸೊಸೈಟಿಗೆ ಸ್ವಂತವಾದ ಫುಲ್‌ಟೈಂ ಸೆಕ್ರೆಟರಿ ಇಟ್ಟುಕೊಳ್ಳುವುದಕ್ಕೆ ಅವಕಾಶವಿಲ್ಲ. ಇದರಿಂದ ಆ ಸೊಸೈಟಿಗಳು ಎಲ್ಲವೂ ಕೂಡ ಕೆಲಸ ಮಾಡುವುದಕ್ಕೆ ಬಹಳ ತೊಂದರೆಯಾಗಿದೆ. ಆದ್ದರಿಂದ ಎರಡು ಮೂರು ಸೊಸೈಟಿಗಳನ್ನು ಸೇರಿಸಿ ಒಂದು ವೈಯಬಲ್ ಯೂನಿಟ್ ಇಟ್ಟುಕೊಂಡು ಅದಕ್ಕೆ ಒಬ್ಬ ಹೇಡ್ ಸೆಕ್ರೆಟರಿಯನ್ನು ಇಟ್ಟುಕೊಂಡರೆ ಒಳ್ಳೆಯದು ಎಂದು ನಾನು ಸಲಹೆ ಮಾಡುತ್ತೇನೆ. ಗ್ರಾಮಾಂತರ ಸಹಕಾರ ಸಂಘಗಳ ಕೆಲಸ ಈಗ ಗೌರವ ಕೆಲಸಗಾರರಿಂದ ನಡೆದಿದೆ. ಅವರು ಪೇಡ್ ಸೆಕ್ರೆಟರಿ ಅಲ್ಲ. ಫುಲ್‌ಟೈಂ ಕೆಲಸಗಾರರು ಅಲ್ಲ. ಆದ್ದರಿಂದ ನಿಮ್ಮ ಮೇಲ್ಪಟ್ಟ ಅಧಿಕಾರಿಗಳು ಅಲ್ಲಿ ತನಿಖೆಗೆ ಹೋದಾಗ ಅವರು ಅನೇಕ ವೇಳೆ ಸಿಕ್ಕುವುದಿಲ್ಲ. ಹೀಗಾಗಿ ಬಹಳ ದೊಡ್ಡ ಆತಂಕವಾಗಿದೆ. ಆದ್ದರಿಂದ ಈ ಬಗ್ಗೆ ಕೂಡಲೇ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಸಹಕಾರ ಸಂಘಗಳು ಯಶಸ್ವಿಯಾಗಿ ನಡೆಯಬೇಕಾದರೆ ಅದಕ್ಕೆ ಬಹಳ ಮುಖ್ಯವಾದದ್ದು ಮಾರ್ಕೆಟಿಂಗ್ ಮತ್ತು ಕ್ರೆಡಿಟ್ ಒಂದು ಗೂಡಿಸುವುದು. ಸಾಲ ವಸೂಲಾಗುವುದರಲ್ಲಿ ಅನೇಕ ತೊಂದರೆಗಳು ಇವೆ. ಅದನ್ನು ಪರಿಹಾರ ಮಾಡಿಕೊಳ್ಳಬೇಕಾದರೆ ರೈತನಿಗೆ ಕೊಟ್ಟ ಹಣದಿಂದ ಅವನು ಫಸಲನ್ನು ಬೆಳೆಯುತ್ತಾನೆ. ಅದನ್ನು ಮಾರಾಟ ಸಹಕಾರ ಸಂಘಗಳ ಮೂಲಕ ಮಾರಾಟ ಮಾಡುವ ವ್ಯವಸ್ಥೆ ಮಾಡಬೇಕು, ಹಾಗೆ ಮಾಡದೇ ಇದ್ದರೆ ಬಹುಶಃ ವರ್ಷದಲ್ಲಿ ಎಷ್ಟೇ ವಸೂಲಾತಿಗೆ ಪ್ರಯತ್ನಪಡಲಿ, ಅದು ವಿಫಲವಾಗುತ್ತದೆ. ಉದ್ದೇಶ ಸಾಧನೆಯಾಗುವುದಿಲ್ಲ. ಇದನ್ನು ಬಹಳ ಒತ್ತಾಯ ಪೂರ್ವಕವಾಗಿ ಹೇಳಬಯಸುತ್ತೇನೆ. ಆದ್ದರಿಂದ ಏನೇ ಕಷ್ಟವಾಗಲಿ ರೈತ ಬೆಳೆದ ಎಲ್ಲ ಫಸಲನ್ನೂ ಸಹ ಮಾರಾಟ ಸಹಕಾರ ಸಂಘಗಳ ಮೂಲಕ ಮಾರಾಟ ಮಾಡಿಸಿ ತನ್ಮೂಲಕ ನಮ್ಮ ಹಣವನ್ನು ವಾಪಸು ಪಡೆಯುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ

ಮಾಡುತ್ತೇನೆ. ಸಹಕಾರ ಸಂಘಗಳ ತತ್ವದ ಪ್ರಚಾರದ ದಿಕ್ಕಿನಲ್ಲಿ ನಮ್ಮ ಪ್ರಗತಿ ಬಹಳವಾಗಿ ನಡೆದಿದೆ. ಆದರೆ ನಾವೇನು ಉದ್ದೇಶವನ್ನು ಇಟ್ಟುಕೊಂಡಿದ್ದೇವೆಯೋ ಅಥವಾ ಯಾವ ಮಟ್ಟದಲ್ಲಿ ಒಂದು ಪ್ರಗತಿ ಸಾಧನೆಯಾಗಬೇಕೋ ಆ ರೀತಿಯಲ್ಲಿ ಸಾಧನೆಯಾಗಿಲ್ಲ ಎಂದು ಹೇಳಿ ಬಹಳ ವಿಷಾದದಿಂದ ಹೇಳಬೇಕಾಗಿದೆ. ಆದ್ದರಿಂದ ವಿಶೇಷವಾಗಿ ಮಾರ್ಕೆಟಿಂಗ್ ಮತ್ತು ಕ್ರೆಡಿಟ್ ಹೊಂದಾಣಿಕೆ ಮಾಡಬೇಕೆಂದು ಒತ್ತಾಯವಾಗಿ ಹೇಳುತ್ತೇನೆ.

ಈ ರಾಜ್ಯದಲ್ಲಿ ಕೆಲವು ಪ್ರೊಸೆಸಿಂಗ್ ಸೊಸೈಟಿಗಳನ್ನು ಮಾಡಬೇಕೆಂದು ಇಂಡಿಯಾ ಸರ್ಕಾರದವರು ಹಣ ಕೊಟ್ಟಿದ್ದಾರೆ ಮತ್ತು ತಾವೂ ಕೂಡ ಕೊಟ್ಟಿದ್ದೀರಿ. ಒಂದು ವರ್ಷ ಆಯಿತು. ಒಂದೊಂದು ಸೊಸೈಟಿಗೆ ಎರಡೂವರೆ ಲಕ್ಷ ರೂಪಾಯಿಗಳನ್ನು ಇಂಡಿಯಾ ಸರ್ಕಾರದವರು ಸಹಾಯದ ರೂಪದಲ್ಲಿ ಮತ್ತು ಸಾಲದ ರೂಪದಲ್ಲಿ ಕೊಟ್ಟಿದ್ದಾರೆ. ಇನ್ನುವರೆಗೂ ಯಾವ ಕೆಲಸವೂ ಆಗಿಲ್ಲ ಅದು ಮೂಲೆಗೆ ಬಿದ್ದಿದೆ. ಡಿಪಾರ್ಟ್‌ಮೆಂಟಿನವರೇ ವಹಿಸಿಕೊಂಡು ಪ್ಲಾನ್ ಎಸ್ಟಿಮೇಟು ಕೊಡಿಸುತ್ತೇವೆ ಎಂದು ಇವತ್ತಿನವರೆಗೂ ಏನೂ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಇದು ಬಹಳ ವಿಷಾದನೀಯ. ಇದಕ್ಕೆ ದಯಮಾಡಿ ಗಮನ ಕೊಡಬೇಕೆಂದು ಹೇಳುತ್ತೇನೆ.

ನಮ್ಮ ದೇಶದಲ್ಲಿ ಅಪೆಕ್ಸ್ ಮಾರ್ಕೆಟಿಂಗ್ ಸೊಸೈಟಿ, ಅಪೆಕ್ಸ್ ಬ್ಯಾಂಕು, ಮತ್ತು ಲ್ಯಾಂಡ್ ಮಾರ್ಟಿಗೇಜ್ ಬ್ಯಾಂಕು ಇವುಗಳೆಲ್ಲಾ ಕೆಲಸ ಮಾಡುತ್ತಾ ಇವೆ. ಕೋ-ಆಪರೇಟೀವ್ ಆಕ್ಟಿನಲ್ಲಿ ಜನರಲ್ ಬಾಡಿ ಮೀಟಿಂಗ್ ಮಾಡಬೇಕಾದರೆ ಪ್ರತಿಯೊಂದು ಸೊಸೈಟಿಯೂ ಜೂನ್ ಅಖೈರಿನೊಳಗೆ ಅಥವಾ ಸೆಪ್ಟಂಬರ್ ಒಳಗೆ ಮಾಡಬೇಕೆಂದು ಒಂದು ನಿಯಮ ಇದೆ. ಸ್ವಾಮಿ ರಾಜ್ಯ ಮಟ್ಟದಲ್ಲಿ ಯಾವ ಸಹಕಾರ ಸಂಘವೂ ಈ ನಿಯಮವನ್ನು ಅನುಸರಿಸಿಲ್ಲ. ಈ ಮೂರು ಸಹಕಾರ ಸಂಘಗಳಿಗೂ ರಿಜಿಸ್ಟ್ರಾರ್‌ರವರೂ ಡೈರೆಕ್ಟರಾಗಿರುತ್ತಾರೆ. ಇವುಗಳು ಯಾವುದರಲ್ಲೂ ಕೂಡ ಚುನಾವಣೆಗಳು ಸಕಾಲದಲ್ಲಿ ನಡೆದಿಲ್ಲ, ಜನರಲ್ ಬಾಡಿ ಮೀಟಿಂಗ್ ಕರೆದಿಲ್ಲ, ಬೇರೆ ಸಹಕಾರದ ಸಂಘಗಳು ಕಾಲ ಕೇಳಿದರೆ ಕೊಟ್ಟಿಲ್ಲ ಇದಕ್ಕೆ ಎಕ್ಸ್‌ಪ್ಲನೇಷನ್ ಕೊಡಿ ಎಂದರೆ ಸಾಧ್ಯವಿಲ್ಲ ಎಂದು ಅನ್ನುತ್ತಾರೆ. ಇಂತಹ ದೊಡ್ಡ ಸಂಘಗಳಲ್ಲೇ ಈ ನಿಯಮಗಳನ್ನು ಪಾಲಿಸುತ್ತಾ ಇಲ್ಲ ಎಂದರೆ ಇದರ ಅರ್ಥವೇನು ? ಅಧಿಕಾರ ವರ್ಗದವರು ತಮ್ಮ ಅಧಿಕಾರವನ್ನು ಮುಂದುವರಿಸುವ ದೃಷ್ಟಿಯಿಂದ ಈ ರೀತಿ ಮಾಡುತ್ತಾ ಇದ್ದಾರೆ ಇದು ಬಹಳ ಆಶ್ಚರ್ಯಕರ. ಜಿಲ್ಲಾ ಮಟ್ಟದಲ್ಲೇ ಈ ರೀತಿ ಎಲ್ಲಾ ಆಗುತ್ತಾ ಇರುವುದನ್ನು ಅವರು ಕಣ್ಣುಮುಚ್ಚಿಕೊಂಡು ಕುಳಿತಿರುವುದು ಖಂಡಿತವಾಗಿಯೂ ನ್ಯಾಯವಾದುದಲ್ಲ ಎಂದು ಹೇಳಬಯಸುತ್ತೇನೆ.

ಇನ್ನು ಸಹಕಾರಿ ಸಕ್ಕರೆ ಕಾರ್ಖಾನೆಯ ಬಗ್ಗೆ ಹೇಳುವುದಾದರೆ ಮೊನ್ನೆ 8 ಕಾರ್ಖಾನೆಗಳನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ. ನಮ್ಮ ಹಿರಿಯೂರಿಗೂ ಒಂದು ಕಾರ್ಖಾನೆಯನ್ನು ಕೊಟ್ಟಿದ್ದಕ್ಕಾಗಿ ಮುಖ್ಯ ಮಂತ್ರಿಗಳಿಗೂ ಮತ್ತು ಸಹಕಾರ ಮಂತ್ರಿಗಳಿಗೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—ಈ ಬೇಡಿಕೆಗಳನ್ನು ನಾನು ವಿರೋಧಿಸುತ್ತಾ ಒಂದೆರಡು ಸಲಹೆಗಳನ್ನು ಮಾಡಬಯಸುತ್ತೇನೆ. ಗುಡ್ಸ್ ವೆಹಿಕಲ್ಸ್‌ಗೆ ಈ 4 ವರ್ಷದಲ್ಲಿ ಎರಡು ಸಾರಿ ಟ್ಯಾಕ್ಸನ್ನು ಹೆಚ್ಚು ಮಾಡಿ ನಮ್ಮ ಜನತೆಯ ಮೇಲೆ ದೊಡ್ಡದಾದ ಹೊರೆಯನ್ನು ಹೊರಿಸಿರತಕ್ಕ ಪ್ರಸಂಗ ಬಂದಿದೆ. ನಾನು ತಿಳಿದುಕೊಂಡಿರುವ ಹಾಗೆ ಮತ್ತೊಮ್ಮೆ ಈ ವರ್ಷ ಈ ಗುಡ್ಸ್ ವೆಹಿಕಲ್ಸ್ ಮೇಲೆ ಹೆಚ್ಚಿನ ಟ್ಯಾಕ್ಸನ್ನು ಹೊರಿಸಬೇಕೆಂದು ಸರ್ಕಾರ ನಿರ್ಧಾರ ಮಾಡಿರುವುದಾಗಿ ತಿಳಿದು ಬಂದಿದೆ. ರಾಜ್ಯದಲ್ಲಿ ಈಗಾಗಲೇ ಲಕ್ಷುರಿ ಗೂಡ್ಸ್ ಮೇಲೆ ಹೆಚ್ಚಿನದಾದ ತೆರಿಗೆ ಹಾಕಿರುವುದರಿಂದ ಪ್ರೈವೇಟ್ ಓನರ್ಸ್ ಕಾರುಗಳ ಮೇಲೆ ಹೆಚ್ಚಿನ ತೆರಿಗೆ ಹಾಕಿ ಗುಡ್ಸ್ ವೆಹಿಕಲ್ಸ್ ಮೇಲೆ ಕಡಿಮೆ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇನ್ನು ಎಂ.ಎಸ್.ಆರ್.ಟಿ.ಸಿ. ಬಸ್ಸುಗಳ ಮೇಲೆ ಹಾಕುವಾಗ ಮೋಟಾರ್ ವೆಹಿಕಲ್ಸ್ ಆಕ್ಟ್ ಮುಖಾಂತರ ಹಾಕುತ್ತಾರೆಯೋ ಅಥವಾ ಸರ್ಕಾರದವರೇ ನೇರವಾಗಿ ನೋಟಿಫಿಕೇಷನ್ ಮುಖಾಂತರ ಹಾಕುತ್ತಾರೆಯೋ ಎಂಬ ಅನುಮಾನ ಬಂದಿದೆ. ಮಂತ್ರಿಗಳು ಯಾವಾಗಲೂ ಹೇಳುತ್ತಾ ಇರುವುದನ್ನು ನಾವು ಕೇಳಿದ್ದೇವೆ, ಪ್ಯಾಸೆಂಜರ್ಸ್ ಮೇಲೆ ಹೆಚ್ಚಿನ ದರ ಹಾಕುತ್ತೇವೆಂದು ಹೇಳುತ್ತಾರೆ ಇದನ್ನೂ ಕೂಡ ಅವರು ಮೋಟಾರ್ ವೆಹಿಕಲ್ಸ್ ಆಕ್ಟ್ ಪ್ರಕಾರ ರೇಟ್ ನಿಗದಿ ಮಾಡಬೇಕೆಂದು ಹೇಳುತ್ತೇನೆ. ನಮ್ಮ ಡಿವಿಜನ್ನಿನಲ್ಲಿ ಗದಗ ಡಿಪೋಗೆ ಕಳಿಸ

9-30 A.M.

ತಕ್ಕಂಥ ಬಸ್ಸುಗಳು ಯಾವ ರೀತಿ ಇವೆ ಅಂದರೆ, ಬೇಸಿಗೆಯಲ್ಲಿ ಧೂಳು ಒಳಗೆ ಬರುತ್ತದೆ ಮಳೆಗಾಲದಲ್ಲಿ ಮಳೆ ನೀರು ಒಳಗೆ ಬರುತ್ತದೆ. ಅನುಕೂಲವಿಲ್ಲದಂಥ ಬಸ್ಸುಗಳನ್ನು ಕಳಿಸುತ್ತೀರಿ. ಆದಷ್ಟು ಮಟ್ಟಿಗೆ ದೊಡ್ಡ ಡಿಪೋಗಳಿಗೆ ಸರಿಯಾದ ಬಸ್ಸುಗಳನ್ನು ಕಳಿಸುವ ವ್ಯವಸ್ಥೆ ಮಾಡಬೇಕು ಎಂಬುದನ್ನು

(ಶ್ರೀ ಸಿದ್ಧಯ್ಯ ಕಾಶೀಮಠ)

ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. 1952ರಲ್ಲಿ ಲಕ್ಷ್ಮೇಶ್ವರದಲ್ಲಿ ಒಂದು ಡಿಪೋ ಇತ್ತು. ಏತಕ್ಕೆ ಅದನ್ನು ತೆಗೆದು ಹಾಕಿದರು ಗೊತ್ತಿಲ್ಲ. ಇಲ್ಲಿ 96 ಬಸ್ಸುಗಳು ಓಡಾಡುವ ಪ್ರಮೇಯ ಇರುವುದರಿಂದ ಡೀಪೊ ಇರುವುದು ಅಗತ್ಯ ಮತ್ತು ಇಲ್ಲಿ 20 ಸಾವಿರ ಜನಸಂಖ್ಯೆ ಇರತಕ್ಕಂಥ ಊರಿನಲ್ಲಿ ಜಾಗದ ಸೌಕರ್ಯವಿದೆ, ಬಸ್ ಸ್ಟ್ಯಾಂಡ್ ಇದೆ. ಆದುದರಿಂದ ಸುತ್ತಮುತ್ತಲಿನ ಜನರಿಗೆ ಸೌಕರ್ಯ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಧಾರವಾಡ ಜಿಲ್ಲೆಯಲ್ಲಿ 1,230 ಕೋ-ಆಪರೇಟಿವ್ ಸೊಸೈಟಿಗಳಿವೆ. ಇವು ತೃಪ್ತಿಕರವಾಗಿ ಕೆಲಸ ಮಾಡುತ್ತಿವೆ ಎಂಬುದು ಸಂತೋಷದ ...ಗತಿ. ಇಲ್ಲಿ ಎರಡು ರಿಜಿಸ್ಟ್ರಾರ್ ಆಫೀಸು ಇರುವುದರಿಂದ ಒಬ್ಬರಿಗೆ 630 ಸೊಸೈಟಿ ಆಡಳಿತವನ್ನು ...ಖಿ ಮಾಡುವುದು ಸಾಧ್ಯವಾಗುವುದಿಲ್ಲ. ಆದುದರಿಂದ ಗದಗಿನಲ್ಲಿ ಒಂದು ಅಸಿಸ್ಟೆಂಟ್ ರಿಜಿಸ್ಟ್ರಾರ್ ಆಫೀಸ್ ತೆರೆಯಬೇಕು ಎಂದು ಸಲಹೆ ಮಾಡುತ್ತೇನೆ. ಕೋ-ಆಪರೇಟಿವ್ ಸೊಸೈಟಿಗಳು ಊರ್ಜಿತ ಸ್ಥಿತಿಗೆ ಬರುವವರೆಗೆ ಸೌಕರ್ಯ ಒದಗಿಸಿಕೊಡಬೇಕು. ಇನ್ನು ಕನ್‌ಸ್ಯೂಮರ್ಸ್ ಸೊಸೈಟಿಗಳ ಆದಾಯ ಎಷ್ಟಿದೆ ಎಂಬುದನ್ನು ಕೊಟ್ಟಿದ್ದೀರಿ. ಕೆಲವು ಕಡೆ ಈ ಸೊಸೈಟಿಗಳಿಗೆ ಷೇರ್ ಬಂಡವಾಳ ಕೂಡ ಒದಗಿಸಿಕೊಟ್ಟು ಅವುಗಳನ್ನು ಊರ್ಜಿತ ಸ್ಥಿತಿಗೆ ತರಬೇಕು ಎಂದು ಹೇಳುತ್ತೇನೆ.

ಇನ್ನು ಲೇಬರ್ ವಿಷಯ ಹೇಳುವುದಾದರೆ ರೆಮಕೋನಲ್ಲಿ ಲೇಬರ್ ವಿಚಾರದಲ್ಲಿ ತೊಂದರೆಯಾದ ಬಗ್ಗೆ ಮ್ಯಾನೇಜಮೆಂಟಿಗೆ ಆದೇಶ ಕೊಟ್ಟಿದ್ದರೂ ಕೂಡ ಯಾವ ಸಮಸ್ಯೆಯನ್ನೂ ಬಗೆಹರಿಸಿಲ್ಲ. ಆದಷ್ಟು ಬೇಗನೆ ಅಲ್ಲಿಯ ಸಮಸ್ಯೆಗಳನ್ನು ಬಗೆಹರಿಸಬೇಕು. ಇನ್ನು ಎಂ.ಎಸ್.ಆರ್.ಟಿ.ಸಿ. ಬಗ್ಗೆ ಹೇಳುವುದೇನೆಂದರೆ, ಇಲ್ಲಿಯ ಫೆಡರೇಶನ್‌ನವರು ಸಾಕಷ್ಟು ಮಾಗಣಿ ಬರೆದು ಕೊಟ್ಟಿದ್ದಾರೆ. ಅವರ ಮಾಗಣಿಗಳಿಗೆ ಗಮನ ಕೊಟ್ಟು ಅವರ ಕಷ್ಟ ಬಗೆಹರಿಸಬೇಕು. ಅಲ್ಲಿ ಕೆಲಸ ಮಾಡುವ ಡ್ರೈವರುಗಳು ಡೀಜಿಲ್ ಎಣ್ಣಿಯ ವಾಸನೆ ಕುಡಿದು ಇವತ್ತಿನ ದಿವಸ ಅವರ ಆರೋಗ್ಯ ಕೆಟ್ಟು ಹೋಗುತ್ತಿದೆ. ಆದುದರಿಂದ ಈ ಡ್ರೈವರುಗಳಿಗೆ ಮೆಡಿಕಲ್ ಏಡ್ ಫ್ರೀಯಾಗಿ ಕೊಡಬೇಕು ಎಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ.

ಇನ್ನು ಬೆಗ್ಗರ್ಸ್ ಬಗ್ಗೆ ಹೇಳುತ್ತೇನೆ. ಬೆಗ್ಗರ್ಸ್ ರಿಲೀಫ್ ಬಗ್ಗೆ ಸಾಕಷ್ಟು ಹಣ ಬಡ್ಜೆಟ್ಟಿನಲ್ಲಿ ಕೊಟ್ಟಿದ್ದೀರಿ. ಇವತ್ತಿನ ದಿವಸ ರೇಲ್ವೆ ಸ್ಟೇಷನ್ನಿನಲ್ಲಿ ಬಸ್‌ಸ್ಟ್ಯಾಂಡ್‌ನಲ್ಲಿ ಎಲ್ಲಿ ನೋಡಿದರೂ ಬೆಗ್ಗರ್ಸ್ ಸಂಖ್ಯೆ ಹೆಚ್ಚುತ್ತಾ ಹೋಗುತ್ತಿದೆ. ಆದುದರಿಂದ ಬೆಗ್ಗರ್ಸ್ ರಿಲೀಫ್ ಕೆಲಸವನ್ನು ಸಂಬಂಧಪಟ್ಟ ಅಧಿಕಾರಿಗಳು ಕಟ್ಟುನಿಟ್ಟಾಗಿ ಮಾಡಬೇಕು. ಬೆಂಗಳೂರು ನಗರದಲ್ಲಿ ಇವರ ಹಾವಳಿ ಹೆಚ್ಚಾಗಿ ಪರಿಸ್ಥಿತಿ ಕೆಡುವುದರಲ್ಲಿದೆ. ಆದುದರಿಂದ ಈ ಹಾವಳಿ ಹೋಗಲಾಡಿಸಲಿಕ್ಕೆ ಜಾಗ್ರತೆ ಸರಕಾರ ಪ್ರಯತ್ನ ಮಾಡುವುದು ಅತ್ಯಗತ್ಯ ಎಂದು ಹೇಳುತ್ತೇನೆ.

ಕೊನೆಯದಾಗಿ ಗ್ರಾಮಪಂಚಾಯತಿ ಮತ್ತು ಲೋಕಲ್ ಬೋರ್ಡುಗಳ ಚುನಾವಣೆ ನಡೆಸುವ ಬಗ್ಗೆ ಒಂದು ಮಾತು ಹೇಳುತ್ತೇನೆ. ಜನರಲ್ ಇಲೆಕ್ಷನ್ ಸಮೀಪಕ್ಕೆ ಬರುತ್ತಿರುವ ಇಂದಿನ ಸಮಯದಲ್ಲಿ ಗ್ರಾಮಪಂಚಾಯತಿ ಮತ್ತು ಲೋಕಲ್ ಬೋರ್ಡು ಚುನಾವಣೆ ಮಾಡಿಯೇ ತೀರಬೇಕು. ಚುನಾವಣೆಯಾಗದೇ ಇದ್ದರೆ ಮ್ಯಾನೇಜ್‌ಮೆಂಟಿನವರು ನಿರ್ಲಕ್ಷಿಸಿ ಹಣ ಅಪವ್ಯಯವಾಗುವ ಸಂಭವವಿದೆ. ನಿರಂಕುಶ ಪ್ರಭುತ್ವ ಬೆಳೆಯುವ ಪ್ರವೃತ್ತಿ ಉಂಟಾಗುತ್ತದೆ. ಆದುದರಿಂದ ಆದಷ್ಟು ಜಾಗ್ರತೆ ಅಡ್ಮಿನಿಸ್ಟ್ರೇಟರ್ಸ್ ನೇಮಕಮಾಡಿ ಚುನಾವಣೆ ಮಾಡಬೇಕು ಎಂದು ಈ ಸಭೆಯಲ್ಲಿ ಸರಕಾರಕ್ಕೆ ಸಲಹೆಮಾಡುತ್ತೇನೆ.

ಶ್ರೀ ಜೆ. ದೇವಯ್ಯ (ಮಂಡ್ಯ).—ಮಾನ್ಯ ಸಭಾಪತಿಗಳವರೇ, ಈ ಬೇಡಿಕೆಯ ವಿಚಾರದಲ್ಲಿ ನಾನು ಎರಡು ವಿಷಯಗಳ ಮೇಲೆ ಮಾತನಾಡುತ್ತೇನೆ. ಮೊದಲು ನಮ್ಮ ಸರಕಾರ ಮತ್ತು ಮಂತ್ರಿಗಳ ವಿಷಯದಲ್ಲಿ ಮಾತನಾಡಲು ಬಯಸುತ್ತೇನೆ. ನಮ್ಮ ಸರಕಾರದವರು ಕಮಿಟಿಗಳ ರಚನೆಮಾಡುವಾಗ ಬರೀ ಕಾಂಗ್ರೆಸ್ಸಿಗರನ್ನೇ ಸೇರಿಸಿ ರಚನೆಮಾಡುತ್ತಾರೆ. ಈ ರೀತಿ ತಮ್ಮ ಪಕ್ಷದವರನ್ನೇ ಸೇರಿಸಿ ಕಮಿಟಿ ರಚನೆಮಾಡಿದರೆ ಎಲ್ಲರಿಗೂ ಹೇಗೆ ನ್ಯಾಯ ದೊರೆಯುತ್ತದೆ? ಸಾರಿಗೆ ಕಮಿಟಿಯಲ್ಲಿ ಒಬ್ಬ ಕಾಂಗ್ರೆಸ್ಸಿನವರನ್ನು ಸೇರಿಸುತ್ತಾರೆ. ಸಂಪಾದನೆ ಆಗತಕ್ಕಂಥ ಸ್ಥಳಕ್ಕೆ ತಮ್ಮವರನ್ನೇ ಸೇರಿಸುತ್ತಾರೆ ಅಂದರೆ ಏನು ? ಇಂತಹದರಲ್ಲಿ ಸ್ವಲ್ಪ ನ್ಯಾಯ ಇರಬೇಕು.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಸಂಪಾದನೆ ಅಂದರೆ ಏನು!

ಅಧ್ಯಕ್ಷರು.—ಹಾಗೆ ಸೂಚಿಸಿ ಮಾತನಾಡುವುದು ಬೇಡ.

ಶ್ರೀ ಜೆ. ದೇವಯ್ಯ.—ಕೃಷ್ಣ ರಾಜಸಾಗರ ಕಮಿಟಿಗೆ ನನ್ನಂಥ ಅಸೆಂಬ್ಲಿ ಮೆಂಬರನ್ನು ಬಿಟ್ಟಿರುತ್ತಾರೆ.

ಇನ್ನೊಂದು ವಿಚಾರ ಕಾರ್ಮಿಕರಲ್ಲಿ ಇಲೆಕ್ಷನ್ ನಡೆಯುವಾಗ ಎಲ್ಲ ಕೆಲಸ ಕಾರ್ಯಗಳನ್ನು ನಿರ್ವಹಿಸುವುದಕ್ಕೆ ಒಂದು ಸಂಸ್ಥೆಯವರಿಗೆ ವಹಿಸಿಕೊಡುತ್ತೀರಿ. ಪೋಲಿಂಗ್ ಆಫೀಸರ್, ರಿಟರ್ನಿಂಗ್ ಆಫೀಸರ್ ಎಲ್ಲರೂ ಒಂದೇ ಸಂಸ್ಥೆಯವರು ಇರಬೇಕೆಂಬ ಪದ್ಧತಿ ಇಟ್ಟುಕೊಂಡಿರುವುದರಿಂದ ನ್ಯಾಯ ದೊರೆಯುವುದಿಲ್ಲ. ಆದುದರಿಂದ ಎಲ್ಲರಿಗೂ ನ್ಯಾಯ ದೊರೆಯುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಯಾಕೆಂದರೆ ಒಂದು ಗುಂಪು ಮನೋಭಾವನೆ ಇಟ್ಟುಕೊಂಡು ಕೆಲಸಮಾಡುವುದು ಸರಿಯಲ್ಲ. ಗುಂಪು ಮನೋಭಾವನೆ ಬಂದುದಾದರೆ ಸಂಸ್ಥೆಗೆ ಧಕ್ಕೆ ಬರುತ್ತದೆ ಮತ್ತು ಕೆಟ್ಟ ಹೆಸರು ಬರುತ್ತದೆ. ಆದುದರಿಂದ ತಮ್ಮ ಕಾಲದಲ್ಲಿಯಾದರೂ ಇಂಥ ನೀತಿ ಬದಲಿಸಬೇಕು ಎಂದು ಸೂಚನೆ ಮಾಡುತ್ತೇನೆ.

ಮಾತನಾಡಲು ಹೆಚ್ಚು ಕಾಲಾವಕಾಶ ಇಲ್ಲದ ಮೂಲಕ ಸಹಕಾರಮಂತ್ರಿಗಳ ಇಲಾಖೆಯ ವಿಚರದಲ್ಲಿ ಒಂದೆರಡು ವಿಷಯ ಮಾತನಾಡುತ್ತೇನೆ. ಇಂದು ದುಡ್ಡೇ ದೊಡ್ಡಪ್ಪ ಅಗಿರುವುದರಿಂದ ಅದರ ಪ್ರಭಾವವನ್ನು ಹೊಗಳುತ್ತಾರೆ. ದುಡ್ಡು ಇದ್ದವರನ್ನು ಹಿಡಿಯುತ್ತಾರೆ. ದುಡ್ಡು ಇವರನ್ನು ಹಿಡಿಯುತ್ತದೆ. ಈ ದುಡ್ಡಿನ ಪ್ರಭಾವದ ಬಗ್ಗೆ ಹೆಚ್ಚಿಗೆ ಮಾತನಾಡುವುದಕ್ಕಾಗುವುದಿಲ್ಲ. ನಮ್ಮ ಮಂಡ್ಯ ಜಿಲ್ಲೆಯಲ್ಲಿ ಲಕ್ಷಾಂತರ ರೂಪಾಯಿ ವ್ಯವಹಾರ ನಡೆಸುವ ಯಾವದೇ ಸೊಸೈಟಿಯ ಲೆಕ್ಕ ಪತ್ರ ಆಡಿಟ್ ಮಾಡಿಲ್ಲ. ಸರಕಾರ ಈ ಸೊಸೈಟಿಗೆ ಸಾಲಕೊಟ್ಟದ್ದೇ ಕೊಟ್ಟದ್ದು ಆದರೆ ಸಾಲ ವಾಪಸ್ ವಸೂಲ್ಮಾಡಿಲ್ಲ. ಆದಷ್ಟು ಜಾಗ್ರತೆ ಲೆಕ್ಕ-ಪತ್ರ ಆಡಿಟ್‌ಮಾಡಬೇಕು. ಆಡಿಟ್ ಮಾಡುವುದಕ್ಕೆ ಸೊಸೈಟಿ ಅವಕಾಶ ಕೊಡದೇ ಇದ್ದರೆ ಅಲ್ಲಿ ಏನು ಲೆಕ್ಕಪತ್ರ ಸಿಕ್ಕುತ್ತವೆ ? ಲಕ್ಷಾಂತರ ರೂಪಾಯಿ ವ್ಯವಹಾರ ನಡೆಯುತ್ತಿದೆ. ಮಂಡ್ಯ ಸೊಸೈಟಿ ಲೆಕ್ಕಪತ್ರ ಆಡಿಟ್ ಆಗಿ ಎಷ್ಟು ವರ್ಷ ಆಯಿತು ? ಎಷ್ಟು ಸಾಲಕೊಟ್ಟಿದೆ, ಎಷ್ಟು ಹಣ ವಸೂಲಾಗಿದೆ ಇದನ್ನು ಹೇಳುವುದಕ್ಕೆ ಅವಕಾಶವಿದೆಯೇ ? ಇದನ್ನು ದಯವಿಟ್ಟು ಯೋಚನೆಮಾಡಿ. ಸೊಸೈಟಿಯಲ್ಲಿ ಷೇರ್ಸ್ ತೆಗೆದುಕೊಂಡು ಮೆಂಬರ್ಸ್ ಆಗುವುದಕ್ಕೆ ಅವಕಾಶ ಕೊಡದೇ ಹೋದರೆ ಇದು ಯಾವ ನ್ಯಾಯ ? ಲಕ್ಷಾಂತರ ರೂಪಾಯಿ ವ್ಯವಹಾರ ಮಾಡತಕ್ಕ ಸೊಸೈಟಿಯಲ್ಲಿ ಹೆಚ್ಚಿಗೆ ಮೆಂಬರ್ಸ್ ಆಗುವುದಕ್ಕೆ ಅವಕಾಶ ಕೊಡಬೇಕು. ಇದನ್ನು ಅನೇಕ ಸಲ ಸರಕಾರಕ್ಕೆ ಮನವಿಮಾಡಿದ್ದೇನೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ನ್ಯಾಯ ಜನರಿಗೆ ದೊರೆಯುವುದಿಲ್ಲ. ಇಲ್ಲಿ ಈಗ ನಮ್ಮ ನಾಯಕರು ಇದ್ದಾರೆ. ಈ ಅವಕಾಶ ಉಪಯೋಗಿಸಿಕೊಂಡು ನಮ್ಮ ನಾಯಕರಾದ ಮುಖ್ಯ ಮಂತ್ರಿಗಳಿಗೆ ಒಂದು ಮಾತು ಹೇಳುತ್ತೇನೆ. ಅವರು ಇದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಲಿ. ನಮ್ಮಲ್ಲಿ ಅನೇಕ ಕುಂದು ಕೊರತೆಗಳಿವೆ. ಅನೇಕ ಲೋಪದೋಷಗಳಿವೆ. ಅನೇಕ ಇಲಾಖೆಗಳಲ್ಲಿ ಏನೇನು ಲೋಪದೋಷಗಳಿವೆ ಅವುಗಳ ಬಗ್ಗೆ ಅಂಕಿಅಂಶಗಳನ್ನು ನಿಮ್ಮ ಮುಂದೆ ಇಡುತ್ತೇವೆ. ಅವುಗಳ ಬಗ್ಗೆ ಕ್ರಮ ತೆಗೆದುಕೊಳ್ಳದಿದ್ದರೆ ನಿಮ್ಮಮನೆ ಮುಂದೆ ಕುಳಿತು ಉಪವಾಸ ಸತ್ಯಾಗ್ರಹ ಮಾಡುತ್ತೇವೆ.

ಶ್ರೀ ಎಸ್. ನಿಜಲಿಂಗಪ್ಪ.—ಮೊದಲು ಅಂಕಿಅಂಶಗಳನ್ನು ಕೊಡಿ.

ಶ್ರೀ ಜೆ. ದೇವಯ್ಯ.—ಕೊಡುತ್ತೇವೆ. ಏನೇನು ಅನ್ಯಾಯವಾಗಿದೆ ಏನೇನು ತೊಂದರೆಯಾಗಿದೆ ಎಂಬುದಕ್ಕೆ ಅಂಕಿಅಂಶ ಕೊಡುತ್ತೇವೆ. ನಿಮ್ಮ ಗುಂಪು ಮನೋಭಾವನೆಯ ಮೂಲಕ ಉಂಟಾಗಿರುವ ತೊಂದರೆ ನಿವಾರಣೆಮಾಡಿಕೊಡಿ ಎಂದು ತಿಳಿಸಿ ಆ ಮೇಲೆ ಉಪವಾಸ ಸತ್ಯಾಗ್ರಹಕ್ಕೆ ಕೂತುಕೊಳ್ಳಬೇಕು ಎಂದು ಮಾಡಿದ್ದೇನೆ.

ಅಧ್ಯಕ್ಷರು.—ವಿಚಾರಣೆಮಾಡುವುದಕ್ಕೆ ಕಾಲಾವಕಾಶ ಕೊಡಿ. ಕೈಯಲ್ಲಿ ಕಾಗದ ಕೊಟ್ಟ ತಕ್ಷಣ ಉಪವಾಸ ಪ್ರಾರಂಭಿಸಬೇಡಿ.

ಶ್ರೀ ಜೆ. ದೇವಯ್ಯ.—ನಮ್ಮ ನಾಯಕರಿಗೆ ಇಷ್ಟು ಹೇಳುತ್ತೇನೆ. ಯಾವ ಯಾವ ಇಲಾಖೆಯಲ್ಲಿ ಏನೇನು ಆಗಿದೆ ಎಂಬುದನ್ನು ಅವರು ತಿಳಿದುಕೊಂಡು ಸರಿಪಡಿಸಿದರೆ ಉಪವಾಸ ಮಾಡುವುದಿಲ್ಲ. ಸರಿಮಾಡದೇ ಹೋದರೆ ಉಪವಾಸ ಮಾಡುತ್ತೇವೆ ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

†SRI D. DEVARAJ URS.—Sir, Sri A. Krishna Shetty and Sri Rajagopal have spoken on the administration of the Labour Department. Sri Krishna Shetty while speaking questioned the *bona fides* of the Government and he charged that the Government is siding, supporting or favouring the management always with a view to get benefits from these Managements for election purposes and so on and so forth. I never thought a seasoned worker and a seasoned Parliamentarian like him should have talked in this manner without realising or understanding as

(SRI D. DEVARAJ URS)

to how the work of the Department is being carried out and to what extent the Government in its activities is trying to help the labour to get its due share. Although he might have said certain things which are not quite helpful from the point of view of the Departmental working, I do not like to say anything against what he said. But I wish to ask him a question because he comes from the Communist Party. I would like to know from him how his party has worked in Kerala and what relationship they had with the Management during their period ? I want to know from him whether they wiped of the Management whether they put them in Jail ? what is it that they did ? Did they take the help of the Management for running the Industries ? Did they help the private persons, the capitalists to support the new Industries ? Did they invite people from outside ? I want to know. Was it favouring the Management or Labour ? That Government was neither in favour of Management nor in favour of Labour. The Primary duty of the Department of Labour is to see that Labour gets its due share and the labour is looked after well. But whenever the labour goes out of the way or resort to unconstitutional methods, it is again the duty of the Government to see that those unconstitutional methods are not continned and put the labour in the proper line and see that they take to constitutional methods.

While he was talking about the support of the Government for the Management, he had mentioned about the strike specially in Mangalore. I do not think Sri Krishna Shetty has taken the trouble to know what aspect of the problem that was there or dispute that was there between the Cashewnut Workers and the Management. The Management and the Cashewnut Workers had taken the dispute to the Labour Court and the Labour Court had taken a decision in favour of the Labour for payment of increased wages or D. A. Then the Management did not give effect to the award given by the Labour Court. They wanted to go in appeal. This is a constitutional right given to any Management. I do not know what Sri Krishna Shetty wants the Government to do at this juncture. Does he want to me put a stop to the Management from going to the higher Court in appeal ? Should the Government have any right to say that they should not proceed ? The Government cannot interefere and spoil the relationship that might be there between the Management and the Labour. I do not think there is any law by which the Government can say that no Management should go in appeal. Therefore the Government cannot come in the way of preferring an appeal either by the Management or by the Labour. I can assure the House That the Government is always sympathetic to the cause of labour and it is the business of the Government to see that good relationship, the industrial relationship, is maintained between the Labour and the Management. It is for promoting this relationship the Government is making every effort and I assure the House that Government is second to none so far as promoting this good relationship between the Management and the labour with a view to see that more and more production

is there in the country which is the need of the hour and if there are any acts which are coming in the way of this good relationship being maintained and more production being there, it is the duty of the Government, whether it is due to the acts of Labour or due to the acts of Management, to put down and see that both this parties do not come in the way of production or do not come in the way of maintaining good relationship. Sri Krishna Shetty also said that the Management of several industries have been able to get more than 30 per cent of profit whereas the share of labour by way of increased wages is about 7 or 8 per cent. I do not know how this profit has been calculated. May be there are certain industries where profits are more. But there are some other industries where profits or less. I am not straight away able to say anything opposite the figures are percentage he has just now quoted. All these should be proved by statistical data. Of late he is also aware that in many of the industries there is increased D.A. paid to the workers and my friend must be knowing that in Transport the workess have been paid by way of increased D.A. So far as M.S.R.T.C. is concerned we have given in the year nearly Rs. 54 lakhs by way of increased D.A. I want to know from my hon. friend whether it is not a case where whatever profit the concern has earned, has gone to the labour and for its benefits ?

Both Sri Rajagopal and Sri Krishna Shetty talked about increasing the minimum wages. There is some force in what they have stated. I think the minimum wages should have been revised by now; even according to the Act, we should revise it at least once in five years. But I regret it was not possible for various administrative reasons to constitute the Committee earlier than it was done; and it was not possible to revise it between that period. But I may inform the House that a Committee has been constituted and that Committee is already working. The direction given to the Committee is to keep 1960 as the basic year for calculating the cost of living index. I hope the committee is likely to give its report early. As soon as we receive the report, Government will take all steps to see that any reasonable Suggestions made in the Report will, as far as possible, be implemented from the point of view of giving more D.A. or wages to the labour class.

Even with regard to the increase in the wages to the beedi workers and also to the agricultural labour and other classes of labour, whose wages are fixed under the Minimum Wages Act, all these will be given effect to. The Minimum Wages Board, which has been constituted, and which has already given a report is before the Government; and it will be implemented. As soon as the implementation is there, there will be revised minimum wages fixed for all these categories of workers.

Sri Rajagopal said that in only 18 industries it has been possible to fix minimum wages and not in all the 23 scheduled industries. I may inform the Hon. Member that it is not 18, but in 21 industries we have already fixed the minimum wages in addition, there are two more industries on which minimum wages will be fixed; that is still under

(Sri D. Devaraj Urs)

ಶ್ರೀ ಕೆ. ಪುಟ್ಟಸ್ವಾಮಿ.—ಕಾರ್ಯಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿದಿರಿ. ಆದರೆ ಕಾರ್ಯಕ್ರಮ ತೆಗೆದುಕೊಂಡಿದೆ ಹಣ ದುರುಪಯೋಗವಾಗಿದೆ ಎಂದು ಹೇಳಿದರು. ಯಾವುದಾದರೂ ಒಂದು ದೊಡ್ಡ ದೊಡ್ಡ ವ್ಯಾಪಾರ ನಡೆಸುವ ಕಾಲದಲ್ಲಿ ಯಾವ ಒಂದೂ ಲೋಪದೋಷವಿಲ್ಲದೆ ಸಂಸ್ಥೆ ನಡೆಯುತ್ತದೆ, ನಡೆಯುವುದಕ್ಕೆ ಸಾಧ್ಯ ಎಂಬ ಭ್ರಾಂತಿ ಅವರಲ್ಲಿ ಇದೆ. ಅದು ತಪ್ಪು ಭಾವನೆ. ಕೆಲವು ವೇಳೆ ತಪ್ಪುಗಳು ಆಗುವುದು ಉಂಟು. ನಡೆಯುವವರ ಕಾಲು ಎಡವುತ್ತದೆ, ಕುಳಿತಿರುವವರ ಕಾಲು ಎಡವುವುದಿಲ್ಲ. ದೋಷಗಳು ಬರಬಹುದು, ಅದನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ನಡೆದಿದೆಯೇ ಎಂದು ಮಾನ್ಯ ಸದಸ್ಯರು ಮೊದಲು ನೋಡಬೇಕು. ಇನ್ನೊಂದು ವಿಚಾರ ಅವರ ಮನಸ್ಸಿನಲ್ಲಿ ಇದೆ. ಸಹಕಾರಸಂಘಗಳಿಗೂ, ಸರ್ಕಾರಕ್ಕೂ ಬಾಂಧವ್ಯವಿದೆ ಎಂದು. ಸರ್ಕಾರಕ್ಕೂ ಸಹಕಾರ ಸಂಸ್ಥೆಗಳಿಗೂ ಇರುವ ಸಂಬಂಧ, ಪೋಲೀಸ್ ಇಲಾಖೆಗೂ ಸಮಾಜಘಾತಕ ವ್ಯಕ್ತಿಗಳಿಗೂ ಇರುವ ಸಂಬಂಧದಂತೆ ಎಂದು ಕೆಲವು ಸದಸ್ಯರು ತಿಳಿದುಕೊಂಡಿರುವಂತೆ ಕಾಣುತ್ತದೆ. ಈ ಮನೋಭಾವ ಸದಸ್ಯರುಗಳಲ್ಲಿ ಇದ್ದರೆ ಅದು ತಪ್ಪು ಎಂದು ಹೇಳುತ್ತೇನೆ. ಸಹಕಾರ ಸಂಸ್ಥೆಗಳನ್ನು ನಡೆಸುವವರು ಯಾರು, ಜನತೆ ನಡೆಸುತ್ತದೆಯೇ ? ಸರ್ಕಾರ ನಡೆಸುತ್ತದೆಯೇ ? ಈ ಒಂದು ವಿಚಾರದಲ್ಲಿ ಸದಸ್ಯರುಗಳು ಟೀಕೆ ಮಾಡಿದರೆ, ಆ ಟೀಕೆ ಪ್ರತ್ಯಕ್ಷವಾಗಿ ಅಲ್ಲದಿದ್ದರೂ, ಪರೋಕ್ಷವಾಗಿ ಆಯಾ ಭಾಗದ ಜನರಮೇಲೆ ಆಗುತ್ತದೆ ಎಂಬುದನ್ನು ಮರೆಯಬಾರದು ಎಂದು ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಸಹಕಾರ ಸಂಸ್ಥೆಗಳು ಜನತೆಯ ಸಂಸ್ಥೆಗಳು. ಈ ಸಂಸ್ಥೆಗಳಿಗೆ ಆಯಾ ಭಾಗದಲ್ಲಿ ವಾಸ ಮಾಡುವ ಪ್ರತಿಯೊಬ್ಬ ಪ್ರಾಪ್ತವಯಸ್ಕರನೂ ಸದಸ್ಯನಾಗುವುದಕ್ಕೆ ಅರ್ಹನಾಗಿರುತ್ತಾನೆ. ಸಹಕಾರ ಸಂಘಗಳ ಆಡಳಿತದ ಅಂತಿಮ ಜವಾಬ್ದಾರಿ ಸರ್ಕಾರದಮೇಲೆ ಇರುತ್ತದೆಯೇ ವಿನಾ ಎಲ್ಲಾ ಕಾಲದಲ್ಲೂ ಸರ್ಕಾರದ ಜವಾಬ್ದಾರಿ ಇರುತ್ತದೆಯೆಂದು ತಿಳಿದುಕೊಂಡಿರುವುದು ತಪ್ಪು. ಸರ್ಕಾರದವರು ಸಹ ಈ ಸಹಕಾರ ಸಂಘಗಳು ಸರಿಯಾಗಿ ನಡೆಯುವಂತೆ ಮಾರ್ಗದರ್ಶನ ಕೊಡುತ್ತಾರೆ. ಹಣದ ಸಹಾಯವನ್ನು ಒದಗಿಸುತ್ತಾರೆ. ಅದಕ್ಕೆ ಬೇಕಾಗುವ ಎಲ್ಲಾ ಸೌಕರ್ಯಗಳನ್ನು ಒದಗಿಸಿಕೊಡುವುದರಲ್ಲಿಯೇ ಸರ್ಕಾರದ ಜವಾಬ್ದಾರಿ ಪರ್ಯಾವಸಾನವಾಗುತ್ತದೆ. ಸಹಕಾರ ಸಂಘಗಳನ್ನು ಸರ್ಕಾರದವರೇ ನಡೆಸಬೇಕು ಎಂದು ಹೇಳುವುದು ಶುದ್ಧ ತಪ್ಪು ಎಂದು ಹೇಳುತ್ತೇನೆ. ಸಹಕಾರ ಸಂಘಗಳನ್ನು ನಡೆಸುವುದು ಜನತಾ ಪ್ರತಿನಿಧಿಗಳು. ಜನತಾ ಪ್ರತಿನಿಧಿಗಳು ಸಂಸ್ಥೆಗಳನ್ನು ನಡೆಸುವ ಕಾಲದಲ್ಲಿ ಏನಾದರೂ ಲೋಪದೋಷಗಳು ಬಂದರೆ, ಆ ಲೋಪದೋಷಗಳನ್ನು ಸರಿ ಮಾಡಬೇಕಾದರೆ, ಸರ್ವ ಸದಸ್ಯರ ಸಭೆಯಲ್ಲಿ ತೀರ್ಮಾನವಾಗಬೇಕು. ಇದಕ್ಕಾಗಿ ಸರ್ಕಾರದ ಕೈ ಕಾದು ಕುಳಿತುಕೊಳ್ಳುವುದು ಸರಿಯಲ್ಲವೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಗುಂಡಿಬಂಡೆ ಸಹಕಾರ ಸಂಘದ ವಿಚಾರ ಪ್ರಸ್ತಾಪ ಮಾಡುತ್ತಿದ್ದೆ. ಮಾನ್ಯ ಸದಸ್ಯರು ಹೇಳಿದರು, ಅಲ್ಲಿ 2 ಲಕ್ಷ ರೂಪಾಯಿ ದುರುಪಯೋಗವಾಗಿದೆ ಎಂದು. ಯಾರಿಂದ ಆಗಿದೆ, ಯಾರು ಮಾಡಿದ್ದಾರೆ, ಎಷ್ಟು ಮಾಡಿದ್ದಾರೆ ಎಂದ ು ತಿಳಿದುಕೊಳ್ಳು

(ಶ್ರೀ ಕೆ. ಪುಟ್ಟಸ್ವಾಮಿ)

ವುದು ಅವಶ್ಯಕ. ಅಲ್ಲಿ 23,325-86 ಪೈಸೆ ದುರುಪಯೋಗವಾಗಿದೆ ಎಂದು ನಮಗೆ ವರದಿ ಬಂದಿದೆ. ಇದನ್ನು ದುರುಪಯೋಗ ಮಾಡಿರುವವರು ಯಾರು ಎಂದು ಚರ್ಚೆ ಮಾಡುವ ವೇಳೆಯಲ್ಲಿ, ಸಹಕಾರಸಂಘಗಳನ್ನು ನಡೆಸತಕ್ಕಂಥವರು ಎರಡು ವರ್ಗದ ಜನರು ಇರುತ್ತಾರೆ. ಒಂದು deliberative sideನಲ್ಲಿ ತೀರ್ಮಾನ ಮಾಡಿ ಕಾರ್ಯ ನಡೆಸಬೇಕು ಎನ್ನುವವರು ಜನತಾ ಪ್ರತಿನಿಧಿಗಳು. ಇದನ್ನು ಕಾರ್ಯರೂಪಕ್ಕೆತರುವ ಅಧಿಕಾರಿಗಳು, ಸರ್ಕಾರದಿಂದ ಎರವಲು ಪಡೆದವರಾಗಿರಬಹುದು, ಅಥವಾ ಸೊಸೈಟಿಯವರು ನೇಮಕ ಮಾಡಿರುವ ಅಧಿಕಾರಿಗಳಾಗಿರಬಹುದು. ಸಹಕಾರ ಸಂಘದವರೇ ನೇಮಕ ಮಾಡಿದ ಅಧಿಕಾರಿಯು ಹಣವನ್ನು ದುರುಪಯೋಗಪಡಿಸಿದರೆ, ಆ ಅಧಿಕಾರಿಯ ಮೇಲೆ ಸಂಘದವರು ಕಾರ್ಯಕ್ರಮ ತೆಗೆದು ಕೊಳ್ಳುತ್ತಿರುವಾಗಲೇ, ಬೇರೆಯವರು ಇಲ್ಲಸಲ್ಲದ ಅಪಾದನೆ ಮಾಡಿ ಅಧಿಕಾರಿಯನ್ನು ಗಲ್ಲಿಗೆ ಏರಿಸುವ ಪ್ರಯತ್ನ ಮಾಡುವುದು ಸರಿಯಲ್ಲ. ಇದರಿಂದ ಸಾರ್ವಜನಿಕ ಹಿತ ಸಾಧನೆ ಮಾಡಿದಂತೆ ಆಗುವುದಿಲ್ಲವೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಎಲ್ಲಿಯಾದರೂ ಒಂದು ಸೊಸೈಟಿಯಲ್ಲಿ ಒಬ್ಬ ಉಪಕಾರ್ಯದರ್ಶಿ ಹಣದ ದುರುಪಯೋಗ ಮಾಡಿದ್ದಾನೆ ಎಂದು ವರದಿ ಬಂದರೆ ಪೋಲೀಸಿನವರಿಗೆ ಕ್ರಮ ತೆಗೆದುಕೊಳ್ಳಲು ಹೇಳುತ್ತೇವೆ. ಅಲ್ಲದೆ ಯೋಗ್ಯವಾದ ರೀತಿಯಲ್ಲಿ ಆಡಳಿತ ನಡೆಸುವುದಕ್ಕೆ ಗಮನಕೊಟ್ಟಿಲ್ಲ ಎಂದು ಸಂಘಕ್ಕೆ ಷೋಕಾಸ್ ನೋಟಿಸ್ ಕೊಡುತ್ತೇವೆ. ಇದರ ಬಗ್ಗೆ ಸಂಘದವರು ಏನು ಹೇಳುತ್ತಾರೆ ಎಂದು ನೋಡುತ್ತೇವೆ. ಯಾವ ಸಂದರ್ಭದಲ್ಲಿ, ಸಂಘದವರ ಗಮನಕ್ಕೆ ಬಾರದೆ ಈ ಹಣದ ದುರುಪಯೋಗವಾಗಿದೆಯೋ ಎಂದು ಸರ್ಕಾರದವರು ಕಾದು ನೋಡಬೇಕಾಗುತ್ತದೆ. ಕೆಲವು ವೇಳೆ ಸಂಘದವರ ಮಿತಿಗೆ ಮೀರಿ ಇಂಥ ಒಂದು ಕಾರ್ಯ ನಡೆದಿದ್ದರೆ ಅದಕ್ಕೆ ಸಂಘದವರನ್ನೇ ಜವಾಬ್ದಾರಿ ತೆಗೆದುಕೊಳ್ಳಿ ಎಂದು ಹೇಳುವುದು ಅಷ್ಟಾಗಿ ಯೋಗ್ಯವಾಗಿ ಕಾಣುವುದಿಲ್ಲ ಎಂದು ನನ್ನ ಭಾವನೆ. ಈ ವಿಚಾರವನ್ನು ಇಷ್ಟಕ್ಕೆ ಬಿಡುತ್ತೇನೆ.

ಇನ್ನೊಂದು ವಿಚಾರ ಮಾನ್ಯ ಸದಸ್ಯರು ಹೇಳಿದರು. ಅದು ಸಿರಾ ಸಹಕಾರ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯ ವಿಚಾರ. ಅಲ್ಲಿ ಎರಡು ಲಕ್ಷ ಮಿಸ್ ಅಪ್ರೊಪ್ರಿಯೇಟ್ ಆಗಿದೆ ಎಂದು ಹೇಳಿದರು. ನಮ್ಮ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಲಕ್ಕಪ್ಪನವರು ಈ ಹಣದ ಮೊತ್ತ ಹೇಳುವುದರಲ್ಲಿ ಬಹಳ ಉದಾರವಾಗಿರುತ್ತಾರೆ. ಅವರಿಗೆ ಯಾವುದೂ ಫ್ರಾಕ್ಷನ್ನಿನಲ್ಲಿ ನಂಬಿಕೆ ಇಲ್ಲ. ಎರಡು ಲಕ್ಷ, ನಾಲ್ಕು ಲಕ್ಷ, ಆರು ಲಕ್ಷ ಹೀಗೆ ಲಕ್ಷದ ವಿಚಾರದಲ್ಲಿ ಹೇಳುತ್ತಾರೆ. ಸದ್ಯದಲ್ಲಿ ಕೋಟಿಗೆ ಹೋಗಿಲ್ಲವಲ್ಲ ಎಂದು ಒಂದೇ ಸಂತೋಷ. ನಮ್ಮ ಕಾಲದಲ್ಲಿ ಇಲ್ಲದೆ ಇದ್ದರೂ ನಮ್ಮ ಮಕ್ಕಳ ಕಾಲದಲ್ಲಿ ಸಹಕಾರ ಸಂಘ ಕೋಟಿ, ಕೋಟಿ ರೂಪಾಯಿ ವ್ಯವಹಾರ ಮಾಡತಕ್ಕ ಶಕ್ತಿಯನ್ನು ಬೆಳೆಸಿಕೊಳ್ಳುತ್ತವೆ. ನಾನು ಅಂಕಿಅಂಶಗಳನ್ನೂ ರಿಕಾರ್ಡುಗಳನ್ನು ಕೈಯಲ್ಲಿಟ್ಟು ಕೊಂಡು ಹೇಳುತ್ತೇನೆ. ಅದಿಲ್ಲದ ಅವರು ಹೇಳಿದ್ದು ನಿಜವಲ್ಲ ಎಂದು ಮಾತ್ರ ಹೇಳಿದ್ದರೆ ಮಾನ್ಯ ಸದಸ್ಯರು ಸ್ವಲ್ಪ ಶಂಕೆ ಪಡುವುದಕ್ಕೆ ಅವಕಾಶ ಇತ್ತು. ಸಿರಾ ತಾಲ್ಲೂಕು ಕೋ-ಆಪರೇಟೀವ್ ಸೊಸೈಟಿಯವರು ಯಾವ ಮೊಬಲಗೂ ಮಿಸ್ ಅಪ್ರೋಪ್ರಿಯೇಷನ್ ಆಗಿಲ್ಲ ಎಂದು ಹೇಳಿದ್ದಾರೆ ಮತ್ತೆ ಅಲ್ಲಿನ ಆಡಿಟ್ ರಿಪೋರ್ಟಿನಲ್ಲಿ ಇರತಕ್ಕ ಪ್ರಕಾರ, ಒಬ್ಬ ಸದಸ್ಯರು ಅಡ್ವಾನ್ಸ್ ಪಡೆದು ಜೋಳ ಮತ್ತು ಬತ್ತ ಪರ್ಚೇಸ್ ಮಾಡಿಕೊಟ್ಟು, 11,277 ರೂಪಾಯಿ ಬಾಕಿದಾರರಾಗಿದ್ದಾರೆ. ಒಬ್ಬ ಸದಸ್ಯರು ಬಾಕಿದಾರರಾಗುವುದಕ್ಕೂ ಮಿಸ್ ಅಪ್ರೋಪ್ರಿಯೇಷನ್ ಅಥವಾ ಹಣ ಚಪಾವಣಿ ಆಗುವುದಕ್ಕೂ ಅಜಗಜಾಂತರ ವ್ಯತ್ಯಾಸ ಇದೆ ಎನ್ನುವುದನ್ನು ಕಾನೂನು ಅನುಭವ ಇರತಕ್ಕ ಶ್ರೀ ಲಕ್ಕಪ್ಪನವರು ತಿಳಿದುಕೊಳ್ಳಬಲ್ಲರು. ಹಣ ದುರುಪಯೋಗವಾಗಿದೆ, ಮಿಸ್ ಅಪ್ರೋಪ್ರಿಯೇಟ್ ಆಗಿದೆ ಎನ್ನುವುದಕ್ಕೂ ಅಡ್ವಾನ್ ತೆಗೆದುಕೊಂಡಿದ್ದು ವಾಪಸ್ಸು ಕೊಡಲಿಲ್ಲ ಎನ್ನುವುದಕ್ಕೂ ಬಹಳ ವ್ಯತ್ಯಾಸ ಇದೆ. ಅಡ್ವಾನ್ಸ್ ತೆಗೆದುಕೊಂಡು ವಾಪಸ್ಸು ಕೊಡದಿದ್ದರೆ ಸಿವಿಲ್ ಲೆಯಬಿಲಿಟಿ ಆಗುತ್ತದೆ. ಹಣ ದುರುಪಯೋಗಪಡಿಸಿದರೆ ಕ್ರಿಮಿನಲ್ ಲೆಯಬಿಲಿಟಿ ಆಗುತ್ತದೆ.

ಶ್ರೀ ಕೆ. ಲಕ್ಕಪ್ಪ.—ಅದು ಟೆಂಪೊರರಿ ಮಿಸ್ ಅಪ್ರೋಪ್ರಿಯೇಷನ್ ಆಗುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿ.—ಒಂದೇ ವಿಚಾರ ಹೆಚ್ಚಾಗಿ ವಿಸ್ತಾರ ಮಾಡುವುದಕ್ಕೆ ಬಯಸುವುದಿಲ್ಲ. ಸಿರಾ ಸಹಕಾರ ತಾಲ್ಲೂಕು ಮಾರ್ಕೆಟಿಂಗ್ ಕೋ-ಆಪರೇಟೀವ್ ಸೊಸೈಟಿ ಹೇಗೆ ನಡೆದಿದೆ ಎಂದು ಒಂದು ವಿಚಾರ ಹೇಳಿದರೆ ನಮ್ಮ ಮಾನ್ಯ ಸದಸ್ಯರು ಆ ರೀತಿ ಶಂಕೆ ಪಡುವುದಿಲ್ಲ ಎಂದು ತೋರುತ್ತದೆ. ಸಾರ್ವಜನಿಕ ಹಣವನ್ನು ಎಲ್ಲೆಲ್ಲಿ ಜನರು ಚಲಾವಣೆ ಮಾಡುತ್ತಾ ಇರುತ್ತಾರೋ, ಎಲ್ಲಿ ಜನರಿಗೆ ಹಣದಮೇಲೆ ಹೋಲ್ಡ್ ಇರುತ್ತದೋ ಅಲ್ಲೆಲ್ಲಾ ಹಣದ ದುರುಪಯೋಗವಾಗುತ್ತದೆ. ಎನ್ನುವ ಭಾವನೆ ಇರಬಾರದು ಎನ್ನುವುದಕ್ಕೆ ಹೇಳುತ್ತೇನೆ. ಈ ಒಂದು ಸಹಕಾರ ಸಂಘ

ಕಂಪ್ಲೀಟ್ ಆಗಿ ಆಡಿಟ್ ಆಗಿದೆ. 1963-64ನೇ ಸಾಲಿಗೆ 12,659.27 ರೂಪಾಯಿಗಳು ಲಾಭ ಬಂದಿದೆ. ಮತ್ತೆ 1964-65ನೇ ಸಾಲಿಗೆ 31,393.34 ರೂಪಾಯಿಗಳು ಲಾಭ ಮಾಡಿದೆ. ಚಾಲ್ತಿ ಸಾಲಿನಲ್ಲಿ 40 ಸಾವಿರ ರೂಪಾಯಿ ಲಾಭ ಆಗತಕ್ಕ ನಿರೀಕ್ಷಣೆ ಇದೆ. ಇಷ್ಟು ಸಮರ್ಪಕವಾಗಿ ಸಹಕಾರ ಸಂಘ ನಡೆಯುತ್ತಾ ಇದ್ದರೂ ಕೂಡ, ಅದರಮೇಲೆ ಆರೋಪಣೆ ಮಾಡುವಾಗ ಸ್ವಲ್ಪ ಮಟ್ಟಿಗೆ ವಿವೇಚನೆ ಮಾಡಿ ಮಾತನಾಡಿದರೆ ನಾನು ಸಂತೋಷ ಪಡುತ್ತಾ ಇದ್ದೆ. ಅಥವಾ ಅವರಿಗೆ ಸಂಶಯ ಬಂದಂಥ ವೇಳೆಯಲ್ಲಿ ನನ್ನನ್ನು ಕೇಳಿದ್ದರೆ, ವಿವರಗಳನ್ನು ಬಹಳ ಸಂತೋಷದಿಂದ ಒದಗಿಸಿಕೊಡುತ್ತಾ ಇದ್ದೆ. ಇಷ್ಟು ಮಾತ್ರ ಭರವಸೆ ಕೊಡಲು ಇಷ್ಟಪಡುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ಪ್ರೆಸಿಡೆಂಟರು ಹಣ ತೆಗೆದುಕೊಂಡು ಹೋಗಿ ವ್ಯವಹಾರ ನಡೆಸಿದ್ದಾರೆ. ಅವರಿಗೋಸ್ಕರ ಸಹಕಾರ ಸಂಘ ಇರುವುದೋ ?

ಶ್ರೀ ಕೆ. ಎಸ್. ಪುಟ್ಟಸ್ವಾಮಿ.—ಯಾರೋ ಒಬ್ಬರು ಸದಸ್ಯರು ಅವರ ಹೆಸರು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ನಾನಾದರೂ ಹೇಳುತ್ತೇನೆ, ಅದು ಅಧ್ಯಕ್ಷರೂ ಅಲ್ಲ, ಕಾರ್ಯದರ್ಶಿಗಳೂ ಅಲ್ಲ ಇಷ್ಟು ಹೇಳಿದರೆ ತೃಪ್ತಿ ಆದೀತು ಎಂದು ತಿಳಿದಿದ್ದೇನೆ. ಈ ಸಹಕಾರ ಸಂಘವನ್ನು ನಡೆಸತಕ್ಕದ್ದು ಬಹಳ ಕಷ್ಟದ ಕೆಲಸ. ಅದರಲ್ಲೂ ಈಚೆಗೆ ಹೆಚ್ಚಿನ ವ್ಯವಹಾರ ಇರತಕ್ಕ ಕಾಲದಲ್ಲಿ ಗೊಬ್ಬರ ವಿತರಣೆ ಮಾಡತಕ್ಕದ್ದು, ಬೇಕಾದಂಥ ಬೀಜಗಳನ್ನು ಒದಗಿಸತಕ್ಕದ್ದು, ಉಪಕರಣಗಳನ್ನು ಒದಗಿಸತಕ್ಕದ್ದು ಜೊತೆಗೆ ಈಚೆಗೆ ಪ್ರೊಕ್ಯೂರ್‌ಮೆಂಟ್ ಹಣದಿಂದ ದವಸವನ್ನು ವಸೂಲು ಮಾಡುವುದು, ದವಸವನ್ನು ಹಂಚುವುದು ಇಂತಹ ಮಹತ್ತರವಾದ ಜವಾಬ್ದಾರಿ ನಿರ್ವಹಿಸತಕ್ಕ ಸಹಕಾರ ಸಂಘಗಳ ಮೇಲೆ ಅಪಾದನೆ ಮಾಡುವುದಕ್ಕೆ ಮುಂಚಿತವಾಗಿ, ಯಾವ ಸದಸ್ಯರೇ ಆಗಲಿ, ಯಾವ ಸಮಯದಲ್ಲಿ ಅಂಕಿ ಅಂಶ ಕೇಳಿದರೂ ಕೊಡಲು ನಾನು ಒದಗಿಸುವುದಕ್ಕೆ ಸದಾ ಸಿದ್ಧನಾಗಿದ್ದೇನೆ ಎನ್ನುವ ವಿಚಾರವನ್ನು ಈ ಸಮಯದಲ್ಲಿ ವಿನಂತಿಮಾಡಿಕೊಳ್ಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಈ ಒಂದು ಸಿರಾ ಸಹಕಾರ ಸಂಘದ ವಿಚಾರದಲ್ಲಿ ಮಾನ್ಯ ಸದಸ್ಯರಾದ ಶ್ರೀ ಮುಕ್ಕಣ್ಣಪ್ಪನವರು ಒಂದು ವಿಚಾರ ಪ್ರಸ್ತಾಪ ಮಾಡಿದರು. ಯಾವುದೋ ಒಂದು ಎಲೆಕ್ಟ್ರಿಕಲ್ ಸ್ಟೋರ್ಸ್‌ಗೆ ಹೆಚ್ಚಿನ ಹಣವನ್ನು ಕೊಟ್ಟಿದ್ದಾರೆ ಎರಡು ಲಕ್ಷ ರೂಪಾಯಿನವರೆಗೆ ಹಣ ಕೊಟ್ಟಿದ್ದಾರೆ ಎಂದು ಹೇಳಿದರು. ಈ ಒಂದು ಎಲೆಕ್ಟ್ರಿಕಲ್ ಸ್ಟೋರ್ಸ್‌ಗೆ ಇರತಕ್ಕ ಸಾಮಾನಿನಮೇಲೆ ಒಂದು ಕೀ ಲೋನ್ ಕೊಟ್ಟಿರುವುದು ನಿಜ. ಕೀ ಲೋನ್ ಕೊಟ್ಟು ಒಂದು ಅರೇಂಜ್‌ಮೆಂಟ್ ಅವರ ಜೊತೆಯಲ್ಲಿ ಬಂದಿದ್ದೇವೆ, ಅವರಿಗೆ ಪ್ರತಿ ವರ್ಷ ಲಾಭ ಬರುತ್ತದೆ, ಅವರು ಬಡ್ಡಿ ಕೊಟ್ಟು, ಅದರಮೇಲೆ 7-8 ಸಾವಿರ ರೂಪಾಯಿ ಲಾಭ ಬರುತ್ತದೆ ಎಂದು ಹೇಳಿದ್ದಾರೆ. ಆದರೂ ಕೂಡ ನಮ್ಮ ರಿಜರ್ವ್ ಬ್ಯಾಂಕ್ ಆಗಲಿ ಅಗ್ರಿಕಲ್‌ಚರಲ್ ಕ್ರೆಡಿಟ್ ಕೊಡುವ ಸಂಬಂಧದಲ್ಲಿ ಅನುಸರಿಸಬೇಕಾದ ನಿಯಮಕ್ಕೆ ಅದು ಎಷ್ಟುಮಟ್ಟಿಗೆ ಸರಿಯಾಗಿದೆ ಎನ್ನುವುದನ್ನು ಪರಿಶೀಲನೆ ಮಾಡಿ ನೋಡಬೇಕು ಎಂದು ಇದ್ದೇನೆ. ಅದಕ್ಕೆ ನಮ್ಮ ಇಲಾಖೆಯಲ್ಲಿರತಕ್ಕ ಅಸಿಸ್ಟೆಂಟ್ ರಿಜಿಸ್ಟ್ರಾರ್ ಸರಿಯಾಗಿದೆ ಎಂದು ಅವರ ಅಪ್ಪಣೆಯನ್ನು ಪಡೆದು ಮಾಡಿದ್ದಾರೆ. ಆದುದರಿಂದ ಸಹಕಾರ ಸಂಘದಮೇಲೆ ನಾನು ಏನೂ ದೋಷವನ್ನು ಹೇಳುವುದಕ್ಕಾಗುವುದಿಲ್ಲ. ಅದು ರೆಗ್ಯುಲರ್ ಟ್ರಾನ್ಸ್‌ಕ್ಷನ್ನೋ ಅಥವಾ ಇರ್ರೆಗ್ಯುಲರ್ ಟ್ರಾನ್ಸ್‌ಕ್ಷನೇ ಎನ್ನುವುದನ್ನು ಪರಿಶೀಲನೆ ಮಾಡಿ ನೋಡಬೇಕೆಂದು ಇದ್ದೇವೆ. ಇನ್ನೂ ಇದೇ ತರಹ ಅನೇಕ ವಿಚಾರಗಳನ್ನು ಹೇಳಿದ್ದಾರೆ. ಸ್ಟೇಟ್ ಮಾರ್ಕೆಟಿಂಗ್ ಕೋ-ಆಪರೇಟೀವ್ ಸೊಸೈಟಿ ವಿಚಾರವಾಗಿ ಶ್ರೀ ಲಕ್ಕಪ್ಪನವರು ಮಾತನಾಡುತ್ತಾ ಆಲೂಗಡ್ಡೆಯಿಂದ 23 ಲಕ್ಷ ರೂಪಾಯಿ ನಷ್ಟ ಮತ್ತು ಗೊಬ್ಬರ ವ್ಯವಹಾರದಿಂದ 15 ಲಕ್ಷ ರೂಪಾಯಿ ನಷ್ಟ ಆ ಸೊಸೈಟಿಗೆ ಆಗಿದೆ ಎಂದು.

Sri S. M. KRISHNA.—Repeated requests are being made for the last three years to conduct some judicial enquiry into the working of the State Marketing Societies. These requests have been made on the floor of this House. This has fallen on the deafears of the Government. To-day the Hon'ble Minister is saying that we are criticising the attitude of the Government. What is it they have done to improve the working of the State Marketing Society? There are a number of allegations. I would have congratulated the Hon'ble Minister if anything had been done to improve the working of the Marketing Society.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಕೃಷ್ಣ ಅವರು ಈ ಒಂದು ಸ್ಟೇಟ್ ಮಾರ್ಕೆಟಿಂಗ್ ಕೋ-ಆಪರೇಟೀವ್ ವಿಚಾರದಲ್ಲಿ ನಾನು ಏನು ಹೇಳಬೇಕೆಂದು ಇದ್ದೆನೋ ಆ ಹೇಳಿಕೆ ಕೇಳಿದ್ದರೆ ಅವರು ಅವರ ಅಭಿಪ್ರಾಯವನ್ನು ಬದಲಾವಣೆ ಮಾಡಿಕೊಳ್ಳುತ್ತಿದ್ದರು ಎಂದು ತಿಳಿದುಕೊಂಡಿದ್ದೇನೆ. ಈ ಸಭೆಯಲ್ಲಿ ಕೆಲವು ಸಾರಿ ಕೆಲವು ಕೋರಿಕೆಗಳು ಬಂದಿರುವುದು ಉಂಟು. ಅವು ನನಗೆ ಜ್ಞಾಪಕ ಇಲ್ಲ. ಜ್ಯುಡಿಷಿಯರ್ ಎನ್‌ಕ್ವೈರಿ ಆಗಬೇಕು ಎಂದು ಕೇಳಿದ ವಿಚಾರ ಜ್ಞಾಪಕ ಇಲ್ಲ. ಇದುವರೆಗೆ ಕೇಳಲಿಲ್ಲ. ಈಗ ಸಜೆಸ್ಟ್ ಮಾಡಿದ್ದೇ ಕೇಳಿಕೆ ಎಂದು ಭಾವನೆ ಮಾಡುತ್ತೇನೆ. ಅದನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಈ ಸ್ಟೇಟ್ ಮಾರ್ಕೆಟಿಂಗ್ ಕೋ-ಆಪರೇಟಿವ್ ಸೊಸೈಟಿ ಒಂದು ಸ್ಟೇಟ್ ಲೇವೆಲ್ ಇನ್‌ಸ್ಟಿಟ್ಯೂಷನ್. ಇದು ಸರ್ಕಾರ ಘೋಷಿತ ಇನ್‌ಸ್ಟಿಟ್ಯೂಷನ್ ಆಗಿರಲಿಲ್ಲ. 1957ರವರೆಗೂ ಕೂಡ ಅದು ಸಾಮಾನ್ಯ ಸಹಕಾರ ಸಂಸ್ಥೆಯೇ ಆಗಿತ್ತು. 1957ರಿಂದ ಈಚೆಗೆ ಇದು ಸಂಸ್ಥಾನಾದ್ಯಂತ ವ್ಯಾಪಕವಾದಂಥ ಒಂದು ಸಂಸ್ಥೆಯಾಗಿದೆ. ಆದಾದಮೇಲೆ ಕೂಡಾ ಸರ್ಕಾರವಾದರೂ ಇದಕ್ಕೆ ಯಾವ ವಿಧವಾದ ನೇರವಾದ ಜವಾಬ್ದಾರಿಯನ್ನು ವಹಿಸಿರಲಿಲ್ಲ. 1960 ರಿಂದ ಈಚೆಗೆ ಈ ಜವಾಬ್ದಾರಿಯನ್ನು ವಹಿಸಿದೆ.

11-30 A.M.

ಶ್ರೀಮಾನ್ ಕೃಷ್ಣನವರು ಕೇಳಿ ತಿಳಿದಿರಬಹುದು. ಅಥವಾ ಈ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಬೇಕಾದರೆ ಅದರ ಪೂರ್ವ ಚರಿತ್ರೆಯನ್ನು ತಿಳಿದುಕೊಂಡು ಹೇಳುತ್ತಾರೆ ಎಂದು ನಾನಾದರೂ ನಂಬಿಕೊಂಡಿದ್ದೇನೆ. ನಮ್ಮ ದೇಶದಲ್ಲಿ ಗೊಬ್ಬರ ವಿತರಣೆ ಮಾಡುವ ಕಾರ್ಯ ಎಷ್ಟು ಸಮರ್ಪಕವಾಗಿ ನಡೆಯುತ್ತದೆ ಎನ್ನುವ ವಿಷಯ ತಮಗೆಲ್ಲಾ ಗೊತ್ತಿರುವ ವಿಚಾರ. ನಮ್ಮ ಈ ಅಗ್ರಿಕಲ್ಚರ್ ಇಲಾಖೆಯ ಮೂಲಕ ಈ ಒಂದು ಕರ್ತವ್ಯವನ್ನು ನಿರ್ವಹಿಸಿಕೊಂಡು ಬರತಕ್ಕ ಕಾಲದಲ್ಲಿ ಹಲವಾರು ಲೋಪದೋಷಗಳು ಕಂಡುಬಂದುದರಿಂದ ಇದನ್ನು ಜನತೆಯ ಪ್ರತಿನಿಧಿಗಳನ್ನೊಳಗೊಂಡ ಒಂದು ಸಹಕಾರ ಸಂಘ ಸಂಸ್ಥೆಯ ಮೂಲಕ ನಡೆಸಲು ಇದನ್ನು ವಹಿಸಿಕೊಟ್ಟಿದ್ದೇವೆ. ಇದಕ್ಕೆ ನಾವು ಕೊಟ್ಟಿರತಕ್ಕ ಹಣ, ಮೆಂಬರ್‌ಶಿಪ್ ಕ್ಯಾಪಿಟಲ್ 62,250 ರೂಪಾಯಿ, ಸರ್ಕಾರ ಕೊಡತಕ್ಕದ್ದು 5,42,750 ರೂಪಾಯಿ ಮತ್ತು ಆಡಳಿತ ನೋಡುವುದಕ್ಕೆ ಹಿಂದೆ ಒಬ್ಬ ಅಧ್ಯಕ್ಷರನ್ನು ನೇಮಕ ಮಾಡಿತ್ತು. ಆಗ ಈಗಿರತಕ್ಕ ಅಧ್ಯಕ್ಷರೇ ಸರ್ಕಾರದಿಂದ ನೇಮಕವಾಗಿ ಕೆಲವು ಕಾಲ ಅಧ್ಯಕ್ಷರಾಗಿದ್ದರು. ನಂತರ ಈ ಮೂರು ವರ್ಷದಿಂದೀಚೆಗೆ ಸರ್ಕಾರ ಅಧ್ಯಕ್ಷರನ್ನು ನೇಮಕ ಮಾಡುತ್ತಾ ಇಲ್ಲ. ಅಲ್ಲಿ ಪ್ರಜಾ ಪ್ರತಿನಿಧಿಗಳು, ಜನತಾ ಪ್ರತಿನಿಧಿಗಳು ಚುನಾವಣೆ ಮಾಡಿಕೊಳ್ಳತಕ್ಕ ಒಂದು ಅವಕಾಶವನ್ನು, ಒಂದು ಅಧಿಕಾರವನ್ನು ಸರ್ಕಾರ ಕೊಟ್ಟಿದೆ. ಅದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಯಾವುದೇ ಒಂದು ಸಹಕಾರ ಸಂಘದ ಆಡಳಿತದಲ್ಲಿ ಸರ್ಕಾರ ಕೈಹಾಕಬೇಕಾದರೆ, ತಲೆ ಹಾಕಬೇಕಾದರೆ, ಅದು ಅದಕ್ಕೆ ಬೇಕಾದಂತಹ ಪೂರ್ವಭಾವಿ ವಿಚಾರಗಳನ್ನೆಲ್ಲಾ ವಿಚಾರಣೆ ಮಾಡಬೇಕಾಗುತ್ತದೆ. ಅದನ್ನು ಮಾಡಬೇಕಾದರೆ, ಅದರ ಮೇಲೆ, ಗುರುತರವಾದಂತಹ ಅಪಾದನೆಗಳು ಬರಬೇಕು. ಅವರಲ್ಲೂ ಅತ್ಯಂತ ವ್ಯಾಪಕವಾದ ಸಂಸ್ಥೆಗಳಲ್ಲಿ ಪ್ರಜಾಪ್ರತಿನಿಧಿಗಳು ಆಡಳಿತ ನಡೆಸತಕ್ಕ ಕಾಲದಲ್ಲಿ, ಕೇವಲ ಈ ಹುರುಳಿಲ್ಲದ ಅಪಾದನೆಗಳನ್ನು ವಿಚಾರಣೆ ಮಾಡುವುದು ಅಷ್ಟು ಸೂಕ್ತವಲ್ಲವೆಂದು ಕಾಣುತ್ತದೆ. ಮೊದಲು ಅಪಾದನೆಗಳಲ್ಲಿ ಏನಾದರೂ ಸತ್ಯಾಂಶವಿದೆಯೇ, ಈ ವಿಚಾರದಲ್ಲಿ ಪರಿಶೀಲನೆ ಮಾಡಿದರೆ ಆಡಳಿತದಲ್ಲಿ ದೋಷಗಳು ನಮಗೆ ಸಾಕಷ್ಟು ತಿಳಿವಳಿಕೆ ಬರುತ್ತದೆಯೇ, ಅಥವಾ ಹೊರ ಕಣ್ಣಿಗೆ ತೋರದಿರತಕ್ಕ ಅಗೋಚರ ವಿಚಾರಗಳು ಅದರಲ್ಲಿ ಅಡಗಿದೆಯೇ, ಎಂಬುದನ್ನೆಲ್ಲಾ ತಿಳಿದು, ಅಂಥ ಸಮಯದಲ್ಲಿ ಮಾತ್ರ ನಾವು ಒಂದು ವಿಚಾರಣೆಯನ್ನು ಮಾಡಬೇಕೇ ವಿನಹ ಸಾಮಾನ್ಯವಾದ ಅಪಾದನೆಗಳು ಬಂದ ತಕ್ಷಣ ಅದನ್ನು ವಿಚಾರಣೆ ಮಾಡಬೇಕು ಎಂಬುದು ಯೋಗ್ಯವಾಗಿ ಕಾಣುವುದಿಲ್ಲ. ಒಂದು ವೇಳೆ, ಅಂತಹ ಸ್ವಭಾವವನ್ನು ಸರ್ಕಾರದವರು ಬೆಳಸಿಕೊಂಡು ಬಂದಿದ್ದೇ ಆದರೆ, ದೇಶದಲ್ಲಿ ಇಂತಹ ಸಂಸ್ಥೆಗಳು ಸುಸೂತ್ರವಾಗಿ ಆಡಳಿತವನ್ನು ನಡೆಸಿಕೊಂಡು ಬರುವುದಕ್ಕೆ ಕಷ್ಟವಾಗುವುದು. ನಮ್ಮ ದೇಶದಲ್ಲಿ ಇಲ್ಲದ ಸಲ್ಲದ ಅಪಾದನೆಗಳನ್ನು ಮಾಡತಕ್ಕ ಜನರು ಬೇಕಾದಷ್ಟು ಇದ್ದಾರೆ. ಅದನ್ನು ನಂಬಿ ಆ ಆರೋಪಣೆಗಳನ್ನು ನಾವು ವಿಚಾರಣೆಗೆ ಗುರಿಪಡಿಸಿದರೆ, ಅಂಥ ಒಂದು ಸ್ವಭಾವವನ್ನು ಸರ್ಕಾರ ಬೆಳೆಸಿಕೊಂಡು ಬಂದದ್ದೇ ಆದರೆ, ಯಾವ ಜನರೂ ಈ ಸಂಸ್ಥೆಗಳಲ್ಲಿ, ಸೇವೆ ಸಲ್ಲಿಸುವುದಕ್ಕೆ ಬರುವುದಿಲ್ಲ ಎಂದು ನಾನು ಹೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ (ಹೊಳೇನರಸೀಪುರ).—ಈ ಸ್ಟೇಟ್ ಮಾರ್ಕೆಟಿಂಗ್ ಕೋಆಪರೇಟಿವ್ ಸೊಸೈಟಿಯ ಮೇಲೆ ಆರೋಪಣೆ ಮಾಡಿದ ಬಗ್ಗೆ ಶ್ರೀಮಾನ್ ಕೊಂಡಜ್ಜಿ ಬಸಪ್ಪನವರು

ಅಲ್ಲ ನಡೆದಿರತಕ್ಕ ಅವ್ಯವಹಾರಗಳ ಬಗ್ಗೆ ವಿಚಾರಣೆ ನಡೆಸಬೇಕೆಂದು ತಿಳಿಸಿದ್ದಾರೆ. ತಾವು ಅಕ್ಯುಮುಲೇಟೆಡ್ ಲಾಸ್ ಏನು ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರುಗಳು ಹೇಳಿದಂತಹ ಸಂಶಯಗಳನ್ನು ನನಗೆ ಶಕ್ತಿಯಿದ್ದಷ್ಟು ಮಟ್ಟಿಗೆ ನಿವಾರಣೆ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಇಲ್ಲ ಅಕ್ಯುಮುಲೇಟೆಡ್ ಲಾಸ್ ವಿಚಾರ ಕೇಳುತ್ತಿದ್ದಾರೆ. ಅದರ ಕಾರಣ ಇಲ್ಲಿ ಹೇಳುವುದು ಅಗತ್ಯವೆಂದು ಕಾಣುತ್ತದೆ. ಈ ಸಂಸ್ಥಾನಾದ್ಯಂತ ವ್ಯಾಪಕವಾಗಿರತಕ್ಕ ಸಂಸ್ಥೆಗಳಿಗೆ ನಾವು ಜವಾಬ್ದಾರಿಯನ್ನು ಕೊಟ್ಟಮೇಲೆ ಏನು ನಷ್ಟವಾಗಿದೆ ಎಂಬುದನ್ನು ನಾನು ಇಲ್ಲಿ ತಿಳಿಸಲಿಚ್ಛಿಸುತ್ತೇನೆ.

1960—61	ಜದರಲ್ ಸೆಕ್ಷನ್ನಿನಲ್ಲಿ	...	1,13,473—95 ಲಾಭ ಬಂದಿದೆ.
...	ಫರ್ಟಿಲೈಸರ್ ಸೆಕ್ಷನ್ನಿನಲ್ಲಿ		20,099—28 ನಷ್ಟವಾಗಿದೆ.
1961—62	ಜನರಲ್ ,,	...	65,649—79 ನಷ್ಟವಾಗಿದೆ.
1961—62	ಫರ್ಟಿಲೈಸರ್ಸ್ ,,		38,977—70 ನಷ್ಟವಾಗಿದೆ.
1962—63	ಜನರಲ್ ಸೆಕ್ಷನ್‌ನಲ್ಲಿ	...	43,543—75 ಲಾಭವಾಗಿದೆ.
1962—63	ಫರ್ಟಿ ಲೈಸರ್ಸ್ ಸೆಕ್ಷನ್ನಿನಲ್ಲಿ		7,56,320—48 ನಷ್ಟವಾಗಿದೆ.
1963—64ರಲ್ಲಿ	ಜನರಲ್ ಸೆಕ್ಷನ್‌ನಲ್ಲಿ	...	70,652—33 ನಷ್ಟವಾಗಿದೆ.
1963—64	ಫರ್ಟಿಲೈಸರ್ಸ್	...	1,50,668—30 ನಷ್ಟವಾಗಿದೆ.

ಒಟ್ಟಿನಲ್ಲಿ ಆಗಿರತಕ್ಕ ನಷ್ಟ—9,45,354—14.

ಈ ಫರ್ಟಿಲೈಸರ್ ಸೆಕ್ಷನ್ನಿನಲ್ಲಿ ಈಗ ನಷ್ಟವಾಗಿದೆ ಎನ್ನುವುದಕ್ಕೆ ಕಾರಣ ನಾನು ಹೇಳುತ್ತೇನೆ. ಫರ್ಟಿಲೈಸರ್ ಸೆಕ್ಷನ್ನಿನಲ್ಲಿ ಇದುವರೆಗೆ ಸ್ಟೇಟ್ ಕೊಪರೇಟಿವ್‌ಗೆ ಕೊಡುತ್ತಿದ್ದ ಮಾರ್ಜಿನ್, ಟನ್ ಒಂದಕ್ಕೆ 6 ರೂಪಾಯಿ ಮಾತ್ರ. ಆ ಆರು ರೂಪಾಯಿನಲ್ಲಿ ಲೋಡಿಂಗ್ ಅನ್‌ಲೋಡಿಂಗ್ ಎಲ್ಲಾ ಆಗಬೇಕು. ಮದ್ರಾಸ್ ಹಾರ್ಬರಿನಿಂದ ಲೋಡಿಂಗ್ ಮಾಡಿ ಅದನ್ನು ಇಲ್ಲಿ ತಂದು ಸೆಂಟ್ರಲ್ ಡಿಪೋವಿನಲ್ಲಿ ಅನ್‌ಲೋಡಿಂಗ್ ಮಾಡುವುದು ಮತ್ತು ಪುನಃ ಅದನ್ನು ಸೊಸೈಟಿಗಳಿಗೆ ಕಳಿಸಿಕೊಡಬೇಕಾದರೆ ಲೋಡಿಂಗ್ ಅನ್‌ಲೋಡಿಂಗ್ ಮತ್ತು ಇದಕ್ಕೆ ಬೇಕಾದಂತಹ ಗೋಡೌನ್ ಮೈಂಟಿನೇನ್ಸ್, ಇದೆಲ್ಲಾ ಆ 6 ರೂಪಾಯಿಯಲ್ಲಿ ಆಗುತ್ತಾ ಇಲ್ಲ. ಇದೆಲ್ಲಾ ಕವರ್ ಆಗುತ್ತಾ ಇಲ್ಲ ಎಂದು ಅವರು ಪದೇ ಪದೇ ಹೇಳುತ್ತಿದ್ದಾರೆ. ಸರ್ಕಾರ ಕೊಡುವ ಎರಡು ರೂಪಾಯಿಯನ್ನು ಕೂಡಿಸಿದರೆ, ಈ ನಷ್ಟ ಕಡಿಮೆಯಾಗುತ್ತದೆ. ಸರ್ಕಾರ ಎರಡು ರೂಪಾಯಿ ಕೊಡಬೇಕಾದರೆ, ಅದರ ಅಂಕಿ ಅಂಶ ನೋಡಿ ಅದು ಸರಿಯಾಗಿ ಕಂಡುಬಂದ ಪಕ್ಷದಲ್ಲಿ ಎರಡು ರೂಪಾಯಿ ಕೊಡಬಹುದಿತ್ತು. ಈ ದೃಷ್ಟಿಯಿಂದ ಫರ್ಟಿಲೈಸರ್ಸ್ ಸೆಕ್ಷನ್ನಿನಲ್ಲಿ ನಷ್ಟವಾಗಿರುವುದಕ್ಕೆ ಕಾರಣ. ಅದರಿಂದ ಆ ಮಾರ್ಜಿನ್ ಕೊಡಬೇಕಾಗಿರುವುದರಿಂದ ಇದನ್ನು ಗಮನದಲ್ಲಿಟ್ಟುಕೊಂಡು ಕಳೆದ ವರ್ಷ 10 ರೂಪಾಯಿಗೆ ಏರಿಸಿದೆ. ಅದರಿಂದ ನಿಮಗೆ ಅರ್ಥವಾಗುತ್ತದೆ, ಆರು ರೂಪಾಯಿಯಲ್ಲಿ ನಷ್ಟವಾಗುತ್ತದೆ ಎಂದು. ಅವರಿಗೆ ಇರತಕ್ಕ ಮಾರ್ಜಿನ್‌ನ 30 ರೂಪಾಯಿಯಲ್ಲಿ ಹೆಚ್ಚಿನ ಭಾಗವನ್ನು ಸರ್ವಿಸ್ ಕೋ ಆಪರೇಟಿವ್‌ಗೆ ಕೊಡುತ್ತಿದ್ದಾರೆ. ಅದರಿಂದ ಯಾವ ಯಾವ ಭಾಗದಲ್ಲಿ ಫರ್ಟಿಲೈಸರ್ಸ್ ಮಾರಾಟವಾಗುತ್ತಿತ್ತೋ, ಆ ಭಾಗದ ಸರ್ವಿಸ್ ಕೋ ಆಪರೇಟಿವ್ ಸೊಸೈಟಿಗಳು ಬೆಳೆಯುವುದಕ್ಕೆ ಕಾರಣವಾಯಿತು. ಆ ಕಾರಣದಿಂದಲೇ ಮಂಡ್ಯ ಜಿಲ್ಲೆಯಲ್ಲಿರತಕ್ಕ ಸರ್ವಿಸ್ ಕೊ ಆಪರೇಟಿವ್ ಸೊಸೈಟಿಯು ಸ್ವಲ್ಪ ಪುಷ್ಟಿಯಾಗಿ ಬೆಳೆಯುವುದಕ್ಕೆ ಸಾಧ್ಯವಾಯಿತು. ಮತ್ತು ಈ ಮಾರ್ಜಿನ್ ಎಲ್ಲೆಲ್ಲಿ ಸಹಕಾರ ಸಂಘಗಳಲ್ಲಿ ಕಡಿಮೆ ಇತ್ತೋ, ಅವುಗಳಲ್ಲಿ ನಷ್ಟವಾಗಲು ಕಾರಣವಾಗುತ್ತಿತ್ತು. ಮೇಲ್ಕಂಡ ಸಹಕಾರ ಸಂಘಗಳಲ್ಲಿ ಮಾರ್ಜಿನ್ ಬಹಳ ಕಡಿಮೆ ಇತ್ತು.

ಇನ್ನು ಮಾನ್ಯ ಮಿತ್ರರಾದ ಶ್ರೀ ಲಕ್ಕಪ್ಪನವರು ಒಂದು ವಿಚಾರ ಹೇಳಿದರು. 23 ಲಕ್ಷ ರೂಪಾಯಿ ಆಲುಗಡ್ಡೆಯಲ್ಲಿ ನಷ್ಟವಾಗಿದೆ ಎಂದು.

ಶ್ರೀ ಕೆ. ಲಕ್ಕಪ್ಪ.—ಆಲುಗಡ್ಡೆ ವ್ಯಾಪಾರದಲ್ಲಿ ಆದ ನಷ್ಟ, ಮಾರ್ಕೆಟಿಂಗ್ ಸೊಸೈಟಿಯಲ್ಲಿ ಆದ ನಷ್ಟ ಎಲ್ಲ ಹಾಕಿದರೆ ಎಷ್ಟಾಗುತ್ತದೆ?

ಶ್ರೀ ಕೆ. ಪುಟ್ಟಸ್ವಾಮಿ.—ಎಲ್ಲ ಹಾಕಿ 20 ರಿಂದ ಗುಣಿಸಿದರೆ ಮಾನ್ಯ ಸದಸ್ಯರು ಹೇಳಿದಷ್ಟು ಆಗಬಹುದು. ಮಾನ್ಯ ಸದಸ್ಯರು ಉದ್ದೇಶಪೂರ್ವಕವಾಗಿ ಉತ್ಪ್ರೇಕ್ಷೆ ಮಾಡುವುದಿಲ್ಲ. ಆ ವಿಚಾರದಲ್ಲಿ ನನಗೆ ನಂಬಿಕೆ ಉಂಟು. ಆದರೆ ವಿಚಾರ ತಿಳಿಯದೆ ಮಾಡುತ್ತಾರೆ. ಅವರು ಆ ವಿಚಾರವನ್ನು ನನ್ನಲ್ಲಿ ಕೇಳಿದ್ದರೆ ಹೇಳುತ್ತಿದ್ದೆ. ಒಂದೊಂದು ಸಾರಿಯೂ ಈ ಸಭೆಯಲ್ಲಿ ಮಾಡುವ ಹೇಳಿಕೆಗಳಿಗೆ

(ಶ್ರೀ ಕೆ. ಪುಟ್ಟಸ್ವಾಮಿ)

ಬಹಳವಾದ ಮಹತ್ವವನ್ನು ಜನ ಕೊಡುತ್ತಾರೆ. ನಾನು ಮಾಡುವ ಹೇಳಿಕೆಗೂ ಮಹತ್ವ ಕೊಡುತ್ತಾರೆ. ಜನಜೀವನ ಅಷ್ಟು ವಿರಾಮವಿಲ್ಲದೆ ಇರುವಾಗ ಎಲ್ಲರೂ ಮಾಡುವಂಥ ಹೇಳಿಕೆಗಳನ್ನು ಓದುತ್ತಾರೆ ಎನ್ನುವುದು ಸಾಧ್ಯವಿಲ್ಲ. ಪತ್ರಿಕೆಗಳಲ್ಲಿ ಬರುವುದು ವಿನಾ ಎಲ್ಲವನ್ನೂ ಓದಲು ವೇಳೆ ಯಾರಿಗಾದರೂ ದೊರೆಯುವುದು ಅಸಂಭವ. ಒಂದು ವೇಳೆ ಯಾರಾದರೂ ಕೆಲವರು ಶ್ರೀಮಾನ್ ಲಕ್ಕಪ್ಪನವರು ಹೇಳಿದ ಅಂಶಗಳನ್ನು ಓದಿ ಅದರ ಮಾರನೆಯ ದಿನ ನಾನು ಹೇಳಿದುದನ್ನು ಓದದೆ ಹೋದರೆ ಜನರಲ್ಲಿ ಎಂಥ ತಪ್ಪು ಭಾವನೆ ಬರುತ್ತದೆ ಎನ್ನುವುದನ್ನು ನಾವು ಊಹೆ ಮಾಡಬೇಕು. ಆಲೂಗಡ್ಡೆಯಿಂದ 23 ಲಕ್ಷ ರೂಪಾಯಿ ನಷ್ಟವಾಗಿದೆ ಎಂದು ಹೇಳಿದರು. ಆದರೆ ಇದರಿಂದ ಆಗಿರುವ ನಷ್ಟ 1,25,215—59 ರೂಪಾಯಿ. ಎಲ್ಲ ಬಾಬುಗಳಿಂದಲೂ ಆಗಿರುವ ಒಟ್ಟು ನಷ್ಟ 9 ಲಕ್ಷ 45 ಸಾವಿರ ಚಿಲ್ಲರೆ. ಎಲ್ಲ ನಷ್ಟಗಳನ್ನೂ ಸೇರಿಸಿದರೆ 11,02,367—84 ರೂಪಾಯಿ ಆಗುತ್ತದೆ ಇದರಲ್ಲಿ ಲಾಭ 1,57,017—70 ಕಳೆದರೆ 9,[illegible],350 ರೂಪಾಯಿ ನಿವ್ವಳ ನಷ್ಟವಾಗುತ್ತದೆ. ಅದು 23 ಲಕ್ಷ ರೂಪಾಯಿಗಳಂತೂ ಅಲ್ಲ ಎಂದು ನಾನು ಸ್ಪಷ್ಟವಾಗಿ ಹೇಳಿದರೂ ಆಲೂಗಡ್ಡೆಯಲ್ಲಿ 23 ಲಕ್ಷ, ಗೊಬ್ಬರದಲ್ಲಿ 15 ಲಕ್ಷ, ಒಟ್ಟು 38 ಲಕ್ಷ ರೂಪಾಯಿ ನಷ್ಟವಾಗಿದೆ ಎಂದು ಹೇಳಿದರು. ಈ 9 ಲಕ್ಷ ರೂಪಾಯಿ ನಷ್ಟವಾಗುವುದಕ್ಕೂ ಕಾರಣವಿದೆ. ರೈತರಿಗೆ ಅಗತ್ಯವಾಗಿ ಬೇಕಾದ ಗೊಬ್ಬರವನ್ನು ಒದಗಿಸುವುದಕ್ಕೆ ಜವಾಬ್ದಾರಿಯನ್ನು ಕೊಟ್ಟು ಅವರಿಗೆ ಸಾಕಷ್ಟು ಮಾರ್ಜಿನ್ ಕೊಡದೆ ಇರುವುದರಿಂದ ನಷ್ಟವಾಗಿದೆ. ನಷ್ಟವಾದ ವೇಳೆ ಸರ್ಕಾರ ಎರಡು ರೂಪಾಯಿನಂತೆ ಕೊಡುತ್ತದೆ ಎಂದು ಹೇಳಿದ್ದ ಹಣವನ್ನು ಕೊಡುವ ವ್ಯವಸ್ಥೆ ಇನ್ನೂ ಆಗಿಲ್ಲ. ಆ ಭಾಗದಲ್ಲಿ ಅವರು ನಿರೀಕ್ಷಿಸಿರುವ ಹಣ 10,35,846.55 ರೂಪಾಯಿ. ಆದುದರಿಂದ ಸರ್ಕಾರದವರು ಅವರು ಹೇಳಿರತಕ್ಕ ಅಂಕಿ ಅಂಶಗಳನ್ನು ಒಪ್ಪಿ 10 ಲಕ್ಷ ಚಿಲ್ಲರೆ ಕೊಟ್ಟಂಥ ಕಾಲದಲ್ಲಿ ನಷ್ಟವಾಗುವುದಿಲ್ಲ ಎನ್ನುವುದನ್ನು ನಾವು ಹೊಸದಾಗಿ ಹೇಳಬೇಕಾಗಿಲ್ಲ. ಆದರೆ ಆಲೂಗಡ್ಡೆ ಬಾಬತ್ತು ನಮಗೆ ನಷ್ಟವಾಯಿತು, ಇದು ಏಕೆ ಎಂದರೆ ಅದು ಆಗಿರತಕ್ಕದ್ದು ನಾಲ್ಕಾರು ವರ್ಷಗಳಲ್ಲಿ ಆಗಿರುವುದಿಲ್ಲ, ಒಂದೇ ಒಂದು ವರ್ಷದಲ್ಲಿ ನಷ್ಟವಾಯಿತು. ಬರ್ಮದಿಂದ ಬರಬೇಕಾದ ಆಲೂಗೆಡ್ಡೆ ಇಲ್ಲಿಗೆ ಬರುವುದು ನಿದಾನವಾಗಿ, ಕೆಟ್ಟು ಹೋದುದರಿಂದ ನಷ್ಟವಾಯಿತು. ಸ್ವಾಮಿ, ಯಾವುದಾದರೂ ಒಂದು ವ್ಯವಹಾರವನ್ನು ಮಾಡುವುದದಲ್ಲಿ ಎಲ್ಲ ವ್ಯವಹಾರದಲ್ಲಿಯೂ ಬರೀ ಲಾಭ ಬರುವುದಿದ್ದರೆ ವ್ಯಾಪಾರಿ ವರ್ಗವನ್ನೇ ಆಗಲಿ, ವ್ಯಾಪಾರದಲ್ಲಿ ತೊಡಗಿರುವ ಯಾವುದಾದರೂ ಫರ್ಮ್, ಸೊಸೈಟಿ, ಯಾವುದನ್ನೇ ಆಗಲೀ ಯಾರೂ ಹಿಡಿದು ನಿಲ್ಲಿಸುವುದಕ್ಕಾಗುತ್ತಿರಲಿಲ್ಲ. ವ್ಯಾಪಾರದಲ್ಲಿ ಲಾಭವಾಗುವುದೂ ಉಂಟು, ನಷ್ಟವಾಗುವುದೂ ಉಂಟು, ಈ ವಿಚಾರದಲ್ಲಿ ಸಂಭವಿಸಿದ ನಷ್ಟವನ್ನು ಸ್ಟೇಟ್ ಮಾರ್ಕೆಟಿಂಗ್ ಕೋ-ಆಪರೇಟಿವ್ ಸೊಸೈಟಿ ಕೊಡಬೇಕಾಗಿ ಬಂತು.

ಶ್ರೀ ಕೆ. ಲಕ್ಕಪ್ಪ.—ಅದೇ ವರ್ಷ ಅದರ ಅಧ್ಯಕ್ಷರು ಬರ್ಮಕ್ಕೆ ಹೋಗಿದ್ದರು. ಖಾಸಗಿಯವರು ಕೂಡ ಆ ವರ್ಷ ಲಾಭವನ್ನು ಗಳಿಸಿದ್ದಾರೆ. ಹೀಗಿರುವಾಗ ಅಧ್ಯಕ್ಷರಾಗಿ ಜನರಿಂದ ಚುನಾಯಿರಾದವರು, ಜವಾಬ್ದಾರಿಯುತವಾಗಿ ಏತಕ್ಕೋಸ್ಕರ ಮಾಡಿಲ್ಲ ?

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಅದಕ್ಕೆ ಉತ್ತರ ಹೇಳಬೇಕಾಗಿಲ್ಲ. ಒಂದು ವಿಚಾರವನ್ನು ಮಾತ್ರ ಹೇಳುತ್ತೇನೆ. ಆ ಮಹನೀಯರು ವರ್ಷಂಪ್ರತಿ ಸರ್ಕಾರ ನಾಮಕರಣ ಮಾಡಿದ್ದು ಅದ ಮೇಲೂ ಕೂಡ ಸರ್ವಾನುಮತದಿಂದ ಚುನಾಯಿತರಾಗಿ ಬರುತ್ತಿದ್ದಾರೆ. ಅವರ ವಿಚಾರದಲ್ಲಿ ಅಲ್ಲಿನ ಪ್ರತಿನಿಧಿಗಳಿಗೆ ಸಂಪೂರ್ಣವಾದ ವಿಶ್ವಾಸ, ನಂಬಿಕೆ ಇದೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಸಂಘದಲ್ಲಿ ಸರಿಯಾಗಿ ಕೆಲಸ ನಡೆಯುತ್ತಿದ್ದರೆ ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡಿರುವುದಕ್ಕೆ ಕಾರಣವೇನು ?

ಶ್ರೀ ಕೆ. ಲಕ್ಕಪ್ಪ.—ಅವರು ಅಧ್ಯಕ್ಷರಾಗುವುದಕ್ಕೆ ಮೊದಲು ಅವರಿಗೆ ಇದ್ದ ಆಸ್ತಿ ಪಾಸ್ತಿ ಏನು. ಅವರು ಅಧ್ಯಕ್ಷರಾದ ಮೇಲೆ ಈಗ ಇರುವ ಆಸ್ತಿಪಾಸ್ತಿಗಳೇನು ಎನ್ನುವುದನ್ನು ಇನ್ವೆಸ್ಟಿಗೇಟ್ ಮಾಡಿ. ಹಿಂದೆ ಹೇಗಿತ್ತು ಮತ್ತು ಈಗ ಹೇಗಿದೆ ಎಂದು ನೋಡಿ. ನಾನು ಹೇಳುವುದರಲ್ಲಿ ಸತ್ಯಾಂಶವಿಲ್ಲದೆ ಇದ್ದರೆ ನಾನು ನನ್ನ ಸದಸ್ಯತ್ವಕ್ಕೆ ರಾಜಿನಾಮೆಯನ್ನು ಕೊಡುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ಇಂಥದ್ದನ್ನು ಅವರೊಬ್ಬರ ಮೇಲೆ ಮಾತ್ರವಲ್ಲ ಅನೇಕರ ಮೇಲೆಯೂ ಹೇಳುತ್ತಾ ಇದ್ದಾರೆ. ಅವರಿಗೆ ಆಸ್ತಿಪಾಸ್ತಿಗಳ ಗೀಳು ಹಿಡಿದಿದೆ. ಸಾಮಾನ್ಯವಾಗಿ ಸರ್ಕಾರ ಯಾರಾದರೂ ಒಬ್ಬ ಮಾನ್ಯ ಸದಸ್ಯರಿಗೆ ಜವಾಬ್ದಾರಿಯನ್ನು ಕೊಟ್ಟರೆ ಅದನ್ನು ಸರಿಯಾಗಿ ನಿರ್ವಹಿಸುತ್ತಾರೆಯೇ, ಇಲ್ಲವೇ ಎಂದು ಅಷ್ಟಕ್ಕೇ ಮಿತಿಗೊಳಿಸಿಕೊಳ್ಳಬೇಕೇ ಹೊರತು ಅವರ ಪೂರ್ವಾಪರವನ್ನು ವಿಚಾರಿಸುವ ಗೋಜಿಗೆ ಸರ್ಕಾರ ಹೋಗುವುದಿಲ್ಲ ಎಂದು ಮಾತ್ರ ಹೇಳುತ್ತೇನೆ.

ಅಡ್ಮಿನಿಸ್ಟ್ರೇಷನ್ ಅಫೀಸರ ನೇಮಕ ಏಕೆ ಮಾಡಿದಿರಿ ಎಂದು ಕೇಳಿದರು, ಬಹುಶಃ ಅವರು ಹೇಳುವ ರೀತಿ ಸರಿಯಾಗಿಲ್ಲ ಎಂದು ಹೇಳುತ್ತೇನೆ. ಒಬ್ಬ ಆಡಳಿತಾಧಿಕಾರಿಯನ್ನು ಹ್ಯಾಕಬೇಕಾದರೆ, ಒಂದು ಸಹಕಾರ ಸಂಘವನ್ನು ಸೂಪರ್ಸೀಡ್ ಮಾಡಿ, ಅಲ್ಲಿರುವ ಜನರ ಪ್ರತಿನಿಧಿಗಳನ್ನು ತೆಗೆದು ಹಾಕಿ, ಆಡಳಿತ ಮಂಡಳಿಯನ್ನು ತೆಗೆದು ಹಾಕಿ, ಆಡಳಿತಾಧಿಕಾರಿಯನ್ನು ನೇಮಕ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆ. ಆದರೆ ಈ ಸಂದರ್ಭದಲ್ಲಿ ಪ್ರತಿನಿಧಿಗಳ ಮಂಡಳಿಯನ್ನು ರದ್ದು ಮಾಡಿಲ್ಲ. ಅವರ ಅಪೇಕ್ಷೆಯ ಮೇರೆಗೆ ನಾವು ಅಲ್ಲಿಗೆ ಒಬ್ಬ ಸೀನಿಯರ್ ಐ.ಎ.ಎಸ್. ಅಧಿಕಾರಿಯನ್ನು ಮ್ಯಾನೇಜಿಂಗ್ ಡೈರೆಕ್ಟರಾಗಿ ಕೊಟ್ಟಿದ್ದೇವೆ. ಇದಕ್ಕೆ ಕಾರಣವೇನು ಎನ್ನುವುದನ್ನು ಕೇಳಬೇಕು. ಈ ಸಹಕಾರ ಸಂಘ ಪ್ರಾರಂಭವಾದಾಗ ಇದ್ದಂಥ ಜವಾಬ್ದಾರಿಗೂ, ಈಗ ನಿರ್ವಹಿಸಬೇಕಾಗಿರುವ ಜವಾಬ್ದಾರಿಗೂ ಎಷ್ಟು ಪ್ರಮಾಣದಲ್ಲಿ ಬೆಳೆದಿದೆ ಎನ್ನುವುದನ್ನು ಮಾನ್ಯ ಸದಸ್ಯರು ಊಹಿಸಿಕೆದಳ್ಳಬೇಕು. ಈ ವರ್ಷ ಈ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಗೆ ಆಹಾರವನ್ನು ಸಂಗ್ರಹ ಮಾಡುವ ಜವಾಬ್ದಾರಿಯನ್ನು ಕೊಟ್ಟಿದ್ದೇವೆ. ಸಂಸ್ಥಾನಾದ್ಯಂತ ವಸೂಲಾಗತಕ್ಕ ಆಹಾರವನ್ನು ಸಂಗ್ರಹ ವಯಡುವುದು ಸುಲಭವಲ್ಲ. ಕೋಟ್ಯಂತರ ರೂಪಾಯಿ ವ್ಯವಹಾರ ಮಾಡಬೇಕು. ಅದರ ಜೊತೆಗೆ ಎಲ್ಲ ಕಡೆಯೂ ಕೂಡ ಜನರು ರಾಸಾಯನಿಕ ಗೊಬ್ಬರವನ್ನು ಉಪಯೋಗಿಸತಕ್ಕ ಪದ್ಧತಿ ಬಂದಿದೆ. ಹೆಚ್ಚು ಹೆಚ್ಚು ರಾಸಾಯನಿಕ ಗೊಬ್ಬರ ಬೇಕು ಎಂದು ಕೇಳುತ್ತಿದ್ದಾರೆ. ಇಂಡಿಯಾ ಸರ್ಕಾರದವರು ಕೂಡ ಹೆಚ್ಚಿನ ಪ್ರಮಾಣದಲ್ಲಿ ರಸಾಯನಿಕ ಗೊಬ್ಬರವನ್ನು ನಮ್ಮ ದೇಶಕ್ಕೆ ಆಮದು ಮಾಡಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಇಷ್ಟೊಂದು ಜವಾಬ್ದಾರಿಯನ್ನು ಸಾಮಾನ್ಯವಾಗಿ ಹತ್ತಾರು ಹವ್ಯಾಸಗಳನ್ನು ಇಟ್ಟುಕೊಂಡಿರತಕ್ಕ ಪಾರ್ಟ್ ಟೈಂ ಕೆಲಸ ಮಾಡತಕ್ಕ ಅಧ್ಯಕ್ಷರು ನಿರ್ವಹಿಸುವುದಕ್ಕೆ ಸಾಧ್ಯವೇ ? ಅಲ್ಲಿಯ ಆಡಳಿತ ಮಂಡಳಿ, ಅಧ್ಯಕ್ಷರು ಸರ್ಕಾರದಲ್ಲಿ ಮಾತನಾಡಿ ಆ ಸೊಸೈಟಿಗಳಲ್ಲಿ ನಡೆಯುವ ವ್ಯವಹಾರಗಳನ್ನು ನಡೆಸತಕ್ಕ ಶಕ್ತಿ ಇರತಕ್ಕ ಅಧಿಕಾರಿಯನ್ನು ಮ್ಯಾನೇಜಿಂಗ್' ಡೈರಕ್ಟರಾಗಿ ಕೊಡಬೇಕು ಎಂದು ಕೇಳಿದರು. ಅವರ ಕೋರಿಕೆಯ ಮೇರೆಗೆ ನಾವು ಅಲ್ಲಿಗೆ ಒಬ್ಬ ಅಧಿಕಾರಿಯನ್ನು ಕೊಟ್ಟಿದ್ದೇವೆ. ಆದರೂ ಒಂದು ವಿಚಾರವನ್ನು ಮಾನ್ಯ ಸದಸ್ಯರು ಪರಿಶೀಲನೆ ಮಾಡಬೇಕು. ಈ ಕಾರಣದಿಂದಲೇ ಏಕಪಕ್ಷೀಯವಾಗಿ ಅಧಿಕಾರಿಗಳನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವರ್ಗ ಮಾಡಿದಂತೆ ಕಳಿಸುವುದಕ್ಕೆ ಆಗುವುಲ್ಲ. ಸರ್ಕಾರ ಒಂದು ಎಕ್ಸಿಕ್ಯೂಟಿವ್ ಆರ್ಡರ್ ಮೂಲಕ ಒಬ್ಬ ಅಧಿಕಾರಿಯನ್ನು ಕೊಡುವುದಕ್ಕಾಗುವುದಿಲ್ಲ. ಇದಾಗಬೇಕಾದರೆ ಆ ಸಂಸ್ಥೆಯ ಬೈಲಾಗಳ ತಿದ್ದುಪಡಿಯಾಗಬೇಕು ಇದನ್ನು ಸರ್ಕಾರ ಮಾಡುವುದಕ್ಕಾಗುವುದಿಲ್ಲ. ಸರ್ಕಾರ ತನಗೆ ಇರತಕ್ಕ ಅಧಿಕಾರವನ್ನು 54ನೇ ಸೆಕ್ಷನ್‌ನಲ್ಲಿರುವ ಅಧಿಕಾರವನ್ನು ಇಟ್ಟುಕೊಂಡು ಈ ಅಧಿಕಾರಿಯನ್ನು ನೇಮಕ ಮಾಡಲಿಲ್ಲ, ಸ್ಟೇಟ್ ಮಾರ್ಕೆಟಿಂಗ್ ಕೋ ಆಪರೇಟಿವ್ ಸೊಸೈಟಿಯವರು ಅದರ ಅಂಗರಚನೆಯನ್ನು ಬದಲಾವಣೆ ಮಾಡಿ, ಮ್ಯಾನೇಜಿಂಗ್ ಡೈರೆಕ್ಟರು ಸರಿಯಾದ ರೀತಿಯಲ್ಲಿ ಆಡಳಿತವನ್ನು ನಡೆಸುವುದಕ್ಕೆ ಯಾವ ಅಧಿಕಾರ ಬೇಕೋ ಆ ಅಧಿಕಾರವನ್ನು ನೀಡಿರುವು ನೀಡುವಂತೆ ಆಶ್ವಾಸನೆಯನ್ನು ಕೊಟ್ಟಿರುವುದರಿಂದ, ಕೊಟ್ಟಂಥ ಆಶ್ವಾಸನೆಯ ಪ್ರಕಾರ ಕ್ರಮವನ್ನು ಕೈಕೊಂಡಿರುವುದರಿಂದ ಅಲ್ಲಿಗೆ ಒಬ್ಬ ಸೀನಿಯರ್ ಐ.ಎ.ಎಸ್. ಅಧಿಕಾರಿಯನ್ನು ಕೊಟ್ಟಿದ್ದೇವೆ. ಅದರಲ್ಲಿಯೂ ಆಡಳಿತದಲ್ಲಿ ಹೆಚ್ಚು ಅನುಭವವಿರತಕ್ಕ, ದಕ್ಷತೆ ಇರತಕ್ಕ, ಸಾಕಷ್ಟು ಖ್ಯಾತಿಯನ್ನು ಗಳಿಸಿರುವ ಅಧಿಕಾರಿಯನ್ನು ಕೊಟ್ಟಿದ್ದೇವೆ. ಕಾರಣವಾದರೂ ಕೂಡ, ಅಲ್ಲಿನ ಆಡಳಿತ ಮಂಡಳಿ ಮಂಡಳಿ ಮಂಡಲಿ ಮೇಲಿ ಅಪನಂಬಿಕೆ ಇಟ್ಟು ಈ ಕಾರ್ಯವನ್ನು ಮಾಡಲಿಲ್ಲ. ಅಲ್ಲಿರತಕ್ಕ ಆಡಳಿತ ಮಂಡಳಿಯ ಅಧ್ಯಕ್ಷರಾಗಲೀ ಅಥವಾ ಉಪಾಧ್ಯಕ್ಷರಾಗಲೀ ಈ ಕಾರ್ಯವನ್ನು ಮಾಡಲಿಲ್ಲ. ಆದ್ದರಿಂದ ಅದರ ಅಂಗರಚನೆಯಲ್ಲಿ ತಿದ್ದುಪಡಿ ಮಾಡಬೇಕೆಂದು ಈ ಕಾರ್ಯಕ್ರಮವನ್ನು ತೆಗೆದುಕೊಂಡಿದೆ. ಅದೇ ರೀತಿಯಲ್ಲಿ ಅಪೆಕ್ಸ್ ಬ್ಯಾಂಕಿನಲ್ಲಿಯೂ ಕೂಡ ತಕ್ಕ ಕ್ರಮವನ್ನು ತೆಗೆದುಕೊಂಡಿದ್ದೇವೆ. ಅಪೆಕ್ಸ್ ಬ್ಯಾಂಕು ಕೇವಲ ಆರೇಳು ವರ್ಷಗಳಿಂದಲೂ ಸಾಮಾನ್ಯ ಸಂಸ್ಥೆಯಾಗಿತ್ತು. ಆ ಸಂಸ್ಥೆಯನ್ನು ಸರ್ಕಾರದವರು ಪುನರುಜ್ಜೀವನಗೊಳಿಸಬೇಕಾಗಿದ್ದುದರಿಂದ ನಾಲ್ಕೈದು ಲಕ್ಷ ರೂಪಾಯಿಗಳ ಹಣವನ್ನು ಕೊಟ್ಟು ಅದನ್ನು ಈಗ ಪುನರುಜ್ಜೀವನಗೊಳಿಸಲಾಗಿದೆ. ಇವತ್ತು ಅವರೇ ಕೋಟ್ಯಾಂತರ ರೂಪಾಯಿಗಳ ವ್ಯವಹಾರವನ್ನು ಮಾಡುತ್ತಿದ್ದಾರೆ. ಮೈಸೂರು ದೇಶದಲ್ಲಿರತಕ್ಕ ಎಲ್ಲಾ ವ್ಯವಸಾಯಗಾರರಿಗೂ, ವ್ಯವಸಾಯೋತ್ಪನ್ನ ಮಾಡತಕ್ಕ ಪ್ರೋಸೆಸಿಂಗ್ ಸೊಸೈಟಿಗಳಿಗೂ ಮತ್ತು ಎಲ್ಲಾ ಮಾರ್ಕೆಟಿಂಗ್ ಕೋ-ಆಪರೇಟಿವ್ ಸೊಸೈಟಿಗಳಿಗೂ ಹಣವನ್ನು ಒದಗಿಸತಕ್ಕ ಶಕ್ತಿಯನ್ನು ಅದು ಈಗ ಪಡೆದಿದೆ. ಇಂತಹ ಒಂದು ಸಂದರ್ಭದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಹೆಚ್ಚು ಪರಿಣತರಾದವರನ್ನೇ ಅದರಲ್ಲಿ ಎಕ್ಸ್‌ಪರ್ಟ್ಸ್ ಆದವರನ್ನೇ ನೇಮಕ ಮಾಡಿದ್ದೇವೆ, ಯಾರೋ ಸದಸ್ಯರು ಈ ಬ್ಯಾಂಕಿನ ಮೇಲೆ ದೂರು ಮಾಡಿದರು. ಇವತ್ತಿನವರೆಗೂ ಅಪೆಕ್ಸ್ ಬ್ಯಾಂಕಿದವರ ಮೇಲೆ ಯಾರೂ ಚಕಾರ ಶಬ್ದವನ್ನು ನುಡಿಯಲಿಲ್ಲ. ಆಡಳಿತ ಬಹಳ ಚೆನ್ನಾಗಿ ನಡೆಯುತ್ತಿದೆ. ಇದರ ಮೇಲೆ ಯಾರೂ ಆಕ್ಷೇಪಣೆಯನ್ನು ಯಾವತ್ತೂ ಮಾಡಲಿಲ್ಲ. ಅಲ್ಲಿ ಹೆಚ್ಚು ಕಾರ್ಯಗಳು ಆಗುತ್ತಿವೆ.

(ಶ್ರೀ ಕೆ. ಪುಟ್ಟಸ್ವಾಮಿ)

ಅಲ್ಲಿ ನಾಲ್ಕಾರು ಕೆಲಸಗಳನ್ನು ಇಟ್ಟುಕೊಂಡಿರತಕ್ಕವರನ್ನು ನೇಮಿಸಿಲ್ಲ. ಅವರಿಗೆ ಬೇಕಾದಷ್ಟು ಸಿಬ್ಬಂದಿಯನ್ನು ಕೊಟ್ಟಿದ್ದೇವೆ. ಆಡಳಿತವರ್ಗದವರನ್ನು ನೇಮಿಸಿದ್ದೇವೆ. ಅಂದಮೇಲೆ ಆಡಳಿತ ಮಂಡಲಿ ಮೇಲೆ ಏನೋ ಒಂದು ಊಹೆ ಮಾಡುವುದು ಸರಿಯಲ್ಲವೆಂದು ನಾನು ಹೇಳುತ್ತೇನೆ.

ಇನ್ನು ಶ್ರೀಮಾನ್ ಲಕ್ಕಪ್ಪನವರು ಯಾವತ್ತೂ ಎಡಬಿಡದೆ ಒಂದು ಸಂಸ್ಥೆಯ ವಿಷಯವಾಗಿ ಸರ್ಕಾರದ ಗಮನವನ್ನು ಸೆಳೆಯುತ್ತಾ ಇರತಕ್ಕದ್ದು ಅಂದರೆ, ತುಮಕೂರು ತಾಲ್ಲೂಕು ಮಾರ್ಕೆಟಿಂಗ್ ಕೋ ಆಪರೇಟಿವ್ ಸೊಸೈಟಿಯ ವಿಷಯ. ಅವರು ಹೇಗಾದರೂ ಆ ವಿಚಾರವನ್ನು ಪ್ರಸ್ತಾಪ ಮಾಡುತ್ತಾರೆಂದು ನಾನು ನಿರೀಕ್ಷಿಸಿದ್ದೆ. ಸ್ವಾಭಾವಿಕವಾಗಿ ಇಂತಹ ಅವಕಾಶವನ್ನು ಅವರು ಉಪಯೋಗಿಸಿಕೊಂಡು ಅಲ್ಲಿರತಕ್ಕ ಲೋಪ ದೋಷಗಳ ವಿಚಾರವಾಗಿ ಈ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದಾರೆ. ಈ ಸಂದರ್ಭದಲ್ಲಿ ನಾವೂ ಕೂಡ ವಿಷಯಗಳನ್ನು ಸರಿಯಾಗಿ ನೋಡದೆ ಮಾನ್ಯ ಸದಸ್ಯರು ಹೇಳುವುದು ಸರಿಯಲ್ಲವೆಂದು ಹೇಳಿದರೆ ಅವರನ್ನು ಸಮಾಧಾನಮಾಡಿದಂತೆ ಆಗುವುದಿಲ್ಲ. ಏನಾದರೂ ಸರಿಯಾದಂಥ ಅಂಕಿ ಅಂಶಗಳನ್ನು ತರಿಸಿಕೊಟ್ಟರೆ ಆಗ ಮಾನ್ಯ ಸದಸ್ಯರಿಗೆ ಸಮಾಧಾನವಾಗುತ್ತದೆಂದು ಕೆಲವಾರು ಅಂಕಿ ಅಂಶಗಳನ್ನು ತರಿಸಿಕೊಂಡಿದ್ದೇನೆ. 85 ಸಾವಿರ ರೂಪಾಯಿಗಳನ್ನು 3–4 ತಿಂಗಳುಗಳಲ್ಲಿ ಒಬ್ಬರು ಉಪಯೋಗಿಸಿಕೊಂಡಿದ್ದಾರೆಂದು ಹೇಳಿದರು. ಯಾರೇ ಒಬ್ಬ ಸದಸ್ಯ ಅವನಿಗೆ ಎಷ್ಟೇ ಸಮಯವಾದರೂ ಆಗಿರಲಿ, 3–4 ತಿಂಗಳುಗಳಲ್ಲಿ ಅಷ್ಟು ಮೊಬಲಗನ್ನು ಉಪಯೋಗಿಸಿಕೊಂಡಿದ್ದಾನೆಂದರೆ ಅದು ನಿಜವಾಗಿ ದುರುಪಯೋಗವೆಂದು ನಾನು ಭಾವನೆಮಾಡುತ್ತೇನೆ. ಅದು ಸರಿಯಾದ ಕೆಲಸವಲ್ಲ, ಆ ರೀತಿ ಮಾಡುವುದು ಸರಿಯಾದುದೂ ಅಲ್ಲ. ನಾನು ಜಿಲ್ಲಾ ಬ್ಯಾಂಕಿನಿಂದಲೂ ಅಂಕಿ ಅಂಶಗಳನ್ನು ತರಿಸಿಕೊಂಡಿದ್ದೇನೆ. ಅವರು ಕೊಟ್ಟಿರತಕ್ಕ ಹಣಕ್ಕೆ ಹೆಚ್ಚುಹೆಚ್ಚಾಗಿ ಈಡು ಮಾಡಿಸಿಕೊಂಡಿದ್ದಾರೆ. ಅಧ್ಯಕ್ಷರಾದವರು ಯಾವುದೇ ಹಣವನ್ನು ಯಾವುದೇ ಪ್ರಮಾಣದಲ್ಲಿ ಹೀಗೆ 85 ಸಾವಿರ ರೂಪಾಯಿಗಳನ್ನು 5 ರೂಪಾಯಿಗಳು 5 ಪೈಸಾ ಬಡ್ಡಿಗೆ ತೆಗೆದುಕೊಂಡು ಖರ್ಚು ಮಾಡುತ್ತಾ ಇದ್ದರೆ ಅಂಥಾದ್ದನ್ನು ಯಾರಾದರೂ ದುರುಪಯೋಗವೆಂದು ಭಾವನೆಮಾಡಬಹುದು. ಆದರೆ ಆ ಬ್ಯಾಂಕಿನ ಅಧ್ಯಕ್ಷರು ಆ ಬ್ಯಾಂಕಿನ ಯಾವ ಒಂದು ಪೈಸಾವನ್ನೂ ಕೂಡ ದುರುಪಯೋಗಮಾಡಿಕೊಂಡು ತಮ್ಮ ಬೇರೆ ಕೆಲಸಗಳಿಗೆ ಅಲ್ಲಿನ ಹಣವನ್ನು ಉಪಯೋಗಿಸಿಕೊಂಡಿದ್ದಾರೆಂದು ಅವರಮೇಲೆ ಆರೋಪಣೆ ಮಾಡುವುದು ಸರಿಯಲ್ಲ. ಅವರ ಮೇಲೆ ಅಂತಹ ಅಪಾದನೆಯನ್ನು ಹೊರಿಸುವುದು ಸರಿಯಲ್ಲ. ಅಲ್ಲಿನ ಲೆಕ್ಕಗಳು ಆಡಿಟ್ ಆಗಿರುವುದನ್ನು ತರಿಸಿ ಇಲ್ಲಿ ಹೇಳುತ್ತಿದ್ದೇನೆ. ತುಮಕೂರು ತಾಲ್ಲೂಕು ಸೊಸೈಟಿ ಪರವಾಗಿ ಡಿಸ್ಟ್ರಿಕ್ಟ್ ಬ್ಯಾಂಕಿನಲ್ಲಿ 1,25,587 ರೂಪಾಯಿಗಳಷ್ಟು ಸಾಲ ಪಡೆದಿದ್ದಕ್ಕೆ 2,67,973 ರೂಪಾಯಿಗಳಷ್ಟು ಬೆಲೆಯುಳ್ಳ ಸ್ಟಾಕ್ ಡಬ್ಬಲ್ ಲಾಕ್‌ನಲ್ಲಿದೆ. ಡಿಸ್ಟ್ರಿಕ್ಟ್ ಬ್ಯಾಂಕಿನವರದು ಒಂದು ಲಾಕ್, ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿಯವರದು ಒಂದು ಲಾಕ್ ಇದೆ. ಇನ್ನೊಂದು ಲೆಕ್ಕದಲ್ಲಿ 257 ಸಾವಿರ ರೂಪಾಯಿಗಳ ಸಾಲ ಪಡೆದು ಇರತಕ್ಕವರಿಂದ 278 ಸಾವಿರ ರೂಪಾಯಿಗಳಷ್ಟು ಸ್ಟಾಕನ್ನು ಈಡು ಮಾಡಿದೆ.

ಶ್ರೀ ಕೆ. ಲಕ್ಕಪ್ಪ.—ಅದು ಯಾವ ಗೋಡೌನಿನಲ್ಲಿದೆ? ಅದೇನಾದರೂ ತುಮಕೂರು ಮಾರ್ಕೆಟಿಂಗ್ ಸೊಸೈಟಿ ಗೋಡೌನಿನಲ್ಲಿದೆಯೋ ಅಥವಾ ಆ ಊರು ಬಿಟ್ಟು ಬೇರಾ ಎಲ್ಲಾದರೂ ಇಟ್ಟಿದ್ದಾರೆಯೋ, ಸಹಕಾರ ಸಂಘದ ಮೇಲೆ ಇರತಕ್ಕ...

ಶ್ರೀ ಕೆ. ಪುಟ್ಟಸ್ವಾಮಿ.—ಸದಸ್ಯರು ಹೇಳಿದಂತಹ ಎಲ್ಲಾ ವಿಚಾರಗಳ ಮೇಲೂ ಸಂಶಯ ಪಟ್ಟು ಇದು (ಎ) ಅವರಲ್ಲದೆ, ನಾನು ನೋಡಿದ್ದೇನೆ, ಅವರು ನೋಡಿದ್ದಾರೆಂದು ಹೇಳುವುದಕ್ಕೆ ಮಾನ್ಯ ಸದಸ್ಯರೇನಾದರೂ ಕನ್ನಡಕವನ್ನು ಹಾಕಿಕೊಂಡು ನೋಡಿದ್ದಾರೆಯೇ? ಹೀಗೆಲ್ಲಾ ಕೇಳಿದರೆ ಮಾನ್ಯ ಸದಸ್ಯರನ್ನು ತೃಪ್ತಿಪಡಿಸುವುದಕ್ಕಾಗುವುದಿಲ್ಲ.

ಇನ್ನೊಂದು ಲೆಕ್ಕದಲ್ಲಿ 2,72,623 ರೂಪಾಯಿಗಳನ್ನು ಸಾಲವಾಗಿ ಪಡೆದಿದ್ದಾರೆ. ಅದಕ್ಕೆ ಸ್ಟಾಕ್ 3,08,027 ರೂಪಾಯಿಗಳಷ್ಟು. ಅದೂ ಸಹ ಡಬ್ಬಲ್ ಲಾಕ್‌ನಲ್ಲಿದೆ. 1,32,229 ರೂಪಾಯಿಗಳಷ್ಟು ಮಾಲು ಡಬ್ಬಲ್ ಲಾಕ್‌ನಲ್ಲಿದೆ. ಅದಕ್ಕೆ ಓಪನ್ ಲೋನ್ 1,72,698 ರೂಪಾಯಿಗಳು. ಅಲ್ಲಿನ ನಿಯಮಗಳಂತೆ ಅಲ್ಲಿರತಕ್ಕ ಷೇರು ಬಂಡವಾಳ, ರಿಜರ್ವ್ ಫಂಡು ಮತ್ತು ಮೂಲಧನ ಕೊಡಬೇಕು. ಅಲ್ಲಿನ ಯಾವ ಒಂದು ಅಂಕಿ ಅಂಶ ನೋಡುವುದಾದರೆ 1,72,000 ಸಾವಿರ ರೂಪಾಯಿಗಳಿಗೆ ಕಡಮೆ ಇರುವುದಿಲ್ಲ. ಕಾರಣ ಆ ಸಹಕಾರ ಸಂಘದ ಆಡಳಿತ ಅಷ್ಟು ಚೆನ್ನಾಗಿ ನಡೆದಿದೆ. ಆದ್ದರಿಂದ ಆ ವಿಚಾರದಲ್ಲಿ ಮಾನ್ಯ ಸದಸ್ಯರು ಸಂಶಯಪಡುವುದು ಬೇಡ.

ಶ್ರೀ ಕೆ. ಲಕ್ಕಪ್ಪ.—ಸುಮಾರು 4 ವರ್ಷಗಳಿಂದಲೂ ತುಮಕೂರು ತಾಲ್ಲೂಕು ಮಾರ್ಕೆಟಿಂಗ್ ಕೋಆಪರೇಟಿವ್ ಸೊಸೈಟಿಯ ವಿಚಾರವನ್ನು ನಾನು ಸರ್ಕಾರದವರ ಗಮನಕ್ಕೆ ತರುತ್ತಿದ್ದೇನೆ. 1957-58ನೇ ಇಸವಿಯಿಂದ ಆದನ್ನು ಪ್ರೋಬ್ ಮಾಡಬೇಕು. ಆಡಿಟ್ ಮಾಡಿರುವುದನ್ನು ಚೆಕ್ ಮಾಡಿಸಬೇಕು. ಆ ಬಗ್ಗೆ ಎಲ್ಲಾ ವಿವರಗಳನ್ನೂ ಕೊಡಲಿ. ಸ್ಪೆಷಲ್ ಆಡಿಟ್ ಸಿಬ್ಬಂದಿಯನ್ನು (ಸೆಲ್ಲನ್ನು) ಕರೆದುಕೊಂಡು ಹೋಗಿ ಚೆಕ್ ಮಾಡಿಸಬಹುದು. ನನಗೆ ಕೊಡಲಿ ಆ ಒಂದು ಅವಕಾಶ ವನ್ನು. ಆದರೆ ನಾನು ಮಾಡಿದ ಆರೋಪಣೆಯನ್ನು ಮುಚ್ಚಕೂಡದು.

Mr. SPEAKER.—This is a matter to which the Member is too much attached. I am giving every chance to members. But this is a very delicate matter on which he is constantly harping.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸಭಾ ಸದಸ್ಯರು ನಾನು ಅವರಿಗೆ ಯಾವ ಕಾರ್ಯವನ್ನು ವಹಿಸಬಾರದಂದಿದ್ದೆನೋ ಆ ಕಾರ್ಯವನ್ನು ಕೇಳುತ್ತಿದ್ದಾರೆ. ಅದರು ಹೇಳಿದರು ಆಡಿಟ್ ಆಗಿರು ವುದನ್ನು ಚೆಕ್‌ಮಾಡಲು ಸ್ಪೆಷಲ್ ಆಡಿಟ್ ಸೆಲ್‌ನವರನ್ನು ಕಳುಹಿಸಿ ಎಂದು. ಅದಕ್ಕಾಗಿಯೇ ಅಧಿಕಾರಿಗಳಿದ್ದಾರೆ, ರಿಜಿಸ್ಟ್ರಾರ್ ಇದ್ದಾರೆ, ಅಸಿಸ್ಟೆಂಟ್ ರಿಜಿಸ್ಟ್ರಾರ್ ಇದ್ದಾರೆ, ಆಡಿಟರುಗಳಿದ್ದಾರೆ, ಆದ್ದರಿಂದ ಅಂತಹವರ ಜೊತೆಗೆ ಈ ಮಾನ್ಯ ಸದಸ್ಯರನ್ನು ಇರಿಸುವುದಕ್ಕೆ ನಾನು ತಯಾರಾಗಿಲ್ಲ.

ಶ್ರೀ ಕೆ. ಲಕ್ಕಪ್ಪ.—ನಾನೇ ಆಡಿಟ್ ಸೆಲ್ಲನ್ನು ಕರೆದುಕೊಂಡು ಹೋಗುತ್ತೇನೆಂದು ಹೇಳಿ ದ್ದೇನೆ. 57-58ನೇ ಇಸವಿಯಿಂದಲೂ ಅದರಲ್ಲಿ ಲೋಪದೋಷಗಳಿವೆ. ಅವು ಏನು ?

ಶ್ರೀ ಕೆ. ಪುಟ್ಟಸ್ವಾಮಿ.—57-58ನೇ ಇಸವಿಯಿಂದಲೂ ನಾನು ಅದರ ಲೆಕ್ಕಗಳನ್ನು ತರಿಸಿ ಕೊಂಡಿದ್ದೇನೆ. ಈ ಮಾನ್ಯ ಸದಸ್ಯರ ಕಣ್ಣಿಗೆ ಬೃಹದಾಕಾರವಾಗಿ ಕಾಣುವ ದೋಷಗಳೇನೆಂಬು ದನ್ನು ಪ್ರಸ್ತಾಪಮಾಡುತ್ತೇನೆ. ಮಾನ್ಯ ಸದಸ್ಯರು ಮಾಡುತ್ತಾ ಇರತಕ್ಕ ಟೀಕೆ ಸರಿಯಾಗಿಲ್ಲ. ಮುಖ್ಯವಾಗಿ ಈ ಸಂಸ್ಥೆ ಚೆನ್ನಾಗಿ ನಡೆಯುತ್ತಿದೆಂದು ಮಾನ್ಯ ಸದಸ್ಯರ ಮನಸ್ಸನ್ನು ಒಪ್ಪಿಸಬೇಕು. ಇದರಲ್ಲಿ ಯಾವ ರೀತಿಯಾದರೂ ನನಗೆ ಸಂತೋಷ. 56-57ರಲ್ಲಿ ವೋಚರ್‌ಲೆಸ್ ಎಕ್ಸ್‌ಪೆನ್ಸ್ 71 ರೂಪಾಯಿಗಳು. 57-58ರಲ್ಲಿ voucherless expences ಎಂದು 95 ಎಂದು ರೂಪಾಯಿಗಳು 2 ಪೈಸೆ ಆಗಿದೆ. ಇದು ದೋಷವೇ ? ಸರ್ವ ಸದಸ್ಯರ ಸಭೆ ಸೇರಿ ವೋಚರ್‌ಲೆಸ್ ಎಕ್ಸ್‌ಪೆಂಡಿಚರ್ ಒಪ್ಪುತ್ತಾರೆ, ಇದು ಕೊಡಬಹುದೆಂದು ಮಾಡಿದ್ದಾರೆ. ನಮ್ಮಲ್ಲಿ ಅಲ್ಲಿ ಆಗಿರತಕ್ಕ ದೋಷ ಬೇರೆ ಜನರಲ್ ಬಾಡಿ ಮೀಟಿಂಗ್‌ನಲ್ಲಿ ಆ ರೀತಿಯಾಗಿ ತೀರ್ಮಾನ ಒಪ್ಪದಿದ್ದರೆ ಅದಕ್ಕೆ ಆಗಲೇ ಕೆಂಪು ಶಾಯಿ ಕೂಡ ಹಾಕುತ್ತಿದ್ದರು. ನಾವು ಅದನ್ನೂ ಒಪ್ಪಲಿಲ್ಲ. ಈ ಒಂದು ಸಣ್ಣ ವಿಚಾರ ಪದೇಪದೇ ಬರುತ್ತಿದೆ. ಇಡೀ ತಾಲ್ಲೂಕ್ ವ್ಯಾಪ್ತಿಯನ್ನು ಇಟ್ಟುಕೊಂಡು ಆಡಳಿತ ನಡೆಸುತ್ತಿರುವ ಒಂದು ಸಂಸ್ಥೆಯಲ್ಲಿ ಯಾವುದಾದರೂ ಇಂತಹ ಕೆಲವು ದೋಷಗಳು ಇದ್ದರೆ, ಅವನ್ನೇ ಯಾವತ್ತೂ ಹೇಳು ತ್ತಿದ್ದರೆ ಅದು ಎಷ್ಟರಮಟ್ಟಿಗೆ ಶೋಭಿಸೀತು ಎಂದು ನಾನು ಹೇಳುತ್ತೇನೆ.

12-00 NOON.

ಮತ್ತೆ 1957-58ರಲ್ಲಿ ಕೆಲವು ಹಣ ಬರಬೇಕೆಂದು ಇದೆ. ನೌಕರರೊಬ್ಬರಿಂದ 11 ರೂಪಾಯಿ 89 ನಯಾ ಪೈಸಾ ಬರಬೇಕು. ಇನ್ನೊಬ್ಬರಿಂದ 212 ರೂಪಾಯಿ 24 ನಯಾ ಪೈಸೆ ಬರಬೇಕು. ಮತ್ತೊಬ್ಬರಿಂದ 216 ರೂಪಾಯಿ 89 ನಯಾಪೈಸಾ ಬರಬೇಕು. ಅದರಲ್ಲಿ ಇಬ್ಬರು ಕಾಲವಾಗಿ ಹೋಗಿ ದ್ದಾರೆ. ಅದನ್ನು ವಸೂಲಮಾಡುವುದಕ್ಕೆ ಆಗದೇ ಇದ್ದರೆ ಅದನ್ನ ರೈಟ್ ಆಫ್ ಮಾಡಬೇಕು ಎಂದು ನೋಡುತ್ತಿದ್ದೇವೆ. ಜನರಲ್‌ಬಾಡಿ ಸೇರಿದಾಗ ಎಗ್ಸಿಕ್ಯುಟೀವ್ ಕಮಿಟಿಯು ಅದನ್ನು ರೈಟ್‌ಆಫ್ ಮಾಡುತ್ತಾರೆ. ಅಲ್ಲಿಗೆ ಅದು ಮುಗಿಯುತ್ತದೆ. ಇದನ್ನೆಲ್ಲಾ ಶ್ರೀಮಾನ್ ಲಕ್ಕಪ್ಪನವರು ದೊಡ್ಡ ದೊಡ್ಡ ಅಪರಾಧಗಳು ಎಂದು ಹೇಳಿದ್ದಾರೆ. ನಾನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳು ತ್ತೇನೆ, ಯಾವುದೇ ಹಣವನ್ನು ರೈಟ್‌ಆಫ್ ಮಾಡಬೇಕಾದರೂ ಸಹ, ನಾವು ಆಕ್ಷೇಪಣೆಗೆ ಒಳಗಾಗು ತ್ತೇವೆ ಎನ್ನುವ ಭಯದಿಂದ ರೈಟ್‌ಆಫ್ ಮಾಡುವಾಗ ಯಾವು ಯಾವುದು ಯೋಗ್ಯ, ನಾಳೆ ಯಾರಾದರೂ ಮಾನ್ಯ ಸದಸ್ಯರು ಅದರ ಬಗ್ಗೆ ಸರ್ಕಾರದ ಸಮಜಾಯಿಷಿ ಕೇಳಿದರೆ ಅದನ್ನು ಹೇಳು ವುದಕ್ಕೆ ಸಿದ್ಧರಾಗಬೇಕು ಎನ್ನುವುದನ್ನ ತಿಳಿದುಕೊಂಡು ಮಾಡಿದ್ದೇವೆ.

ಇನ್ನು ಮಾನ್ಯ ಸದಸ್ಯರು ಲಾರಿ ವಿಚಾರದಲ್ಲಿ ಏನೋ ಹಣ ಹೆಚ್ಚು ಕಡಿಮೆ ಆಗಿದೆ ಎಂದು ಹೇಳಿದರು. ಇದರಲ್ಲಿ ಲಾರಿ ಓವರ್ ಡ್ಯೂಸ್ ಬಗ್ಗೆ ಅಲ್ಲಿ ಇದ್ದಂತಹ ಸೆಕ್ರೆಟರಿಗಳು 7665 ರೂಪಾಯಿ 32 ನಯಾ ಪೈಸೆ ಕೊಡಬೇಕಾಗಿತ್ತು. ಅವರ ಮೇಲೆ ಕ್ರಮ ತೆಗೆದು ಕೊಂಡು ಆ ಹಣವನ್ನು ವಸೂಲು ಮಾಡಿದೆ. ಆ ಸಂಬಂಧದಲ್ಲಿ ಇನ್ನೂ 4,959 ರೂಪಾಯಿ

(ಶ್ರೀ ಕೆ. ಪುಟ್ಟಸ್ವಾಮಿ)

41 ಪೈಸಾ ಬರಬೇಕಾಗಿದೆ. ಅದಕ್ಕಾಗಿ ಅವರ ಮೇಲೆ ಡಿಸ್‌ಪ್ಯೂಟ್ ಫೈಲ್ ಮಾಡಲಾಗಿದೆ. ಅದನ್ನು ವಸೂಲು ಮಾಡುತ್ತೇವೆ. ಎಲ್ಲಾ ಅಂಕಿಅಂಶಗಳನ್ನೂ ಕೂಡ ಕೊಟ್ಟಮೇಲೆ ಮಾನ್ಯ ಸದಸ್ಯರು ಒಪ್ಪಬಹುದು ಎಂದು ನಾನು ಆಶೆಯಿಂದ ಹೇಳಿದೆ. ಆದರೂ ಸಹ ಪ್ರಯೋಜನ ವಾಗಲಿಲ್ಲ. ಅವರು ಯಾವುದನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದಾರೆಯೋ ಅದು ನನಗೆ ಗೊತ್ತಿಲ್ಲ. ಡಿಸ್ಟ್ರಿಕ್ಟ್ ಬ್ಯಾಂಕಿನ ವಿಚಾರದಲ್ಲಿ ಶ್ರೀಮಾನ್ ಲಕ್ಕಪ್ಪನವರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಈ ವಿಚಾರದಲ್ಲಿ ನನ್ನ ಪ್ರಯತ್ನಮಾಡಿ ಅವರನ್ನ ಒಪ್ಪಿಸುವುದಕ್ಕೆ ಪ್ರಯತ್ನ ಮಾಡುವುದು ನನ್ನ ಕರ್ತವ್ಯ ಎಂದು ನಾನು ಭಾವನೆ ಮಾಡುತ್ತೇನೆ. ಡಿಸ್ಟ್ರಿಕ್ಟ್ ಬ್ಯಾಂಕಿನಲ್ಲಿ 3-4 ವರ್ಷಗಳ ಹಿಂದೆ ಎರಡು ಲಕ್ಷ ರೂಪಾಯಿಗಳು ದುರುಪಯೋಗವಾಗಿದೆ, ಅದನ್ನು ಯಾವಾಗ ಖಜಾನೆಗೆ ತುಂಬಿದರು ಎಂದು ಹೇಳಿದರು. ಆ ಒಂದು ಆಪಾದನೆ ನಿಜವಾದರೆ ಅದು ಬಹಳ ವಿಷಾದಪಡತಕ್ಕ ವಿಚಾರ. ಅದು ಸರಿಯಾದ್ದಲ್ಲ. ಆದರೆ ಅದು ನಿಜವೇ ? ಅದಕ್ಕೆ ಬುಡವೇ ಇಲ್ಲ. ಅಲ್ಲಿ ಇರುವುದು ಒಂದು. ಮಾನ್ಯ ಸದಸ್ಯರು ಹೇಳುವುದು ಒಂದು. ಒಂದಕ್ಕೊಂದಕ್ಕೆ ಅಜಗಜಾಂತರ ವ್ಯತ್ಯಾಸ ಇದೆ. ಸಹಕಾರ ಸಂಘಗಳಲ್ಲಿ ಯಾವುದೇ ಒಂದು ಇರೆಗ್ಯುಲಾರಿಟಿ ಆಗಿದ್ದರೂ ಕೂಡ ಹಣ ದುರುಪ ಯೋಗವಾಗಿದೆ ಎನ್ನುವ ಒಂದೇ ಮಂತ್ರವನ್ನು ಹೇಳುವುದಾದರೆ ಅದೇ ಭಾವನೆಯನ್ನು ಬೆಳೆಸಿ ಕೊಂಡರೆ ಅನೇಕ ಸಹಕಾರ ಸಂಘಗಳ ಆಡಳಿತದಲ್ಲಿ ಹೆಚ್ಚು ಆಸಕ್ತಿ ಮತ್ತು ಶ್ರದ್ಧೆಯನ್ನು ಹೊಂದಿರ ತಕ್ಕ ಯಾವ ಖಾಸಗೀ ದೊಡ್ಡಮನುಷ್ಯರೂ ಕೂಡ ನಾಳೆ ಈ ಸಹಕಾರ ಸಂಘಗಳ ಗೋಜಿಗೆ ಬರುವುದಿಲ್ಲ. ಅದರಿಂದ ಬಹಳ ಕಷ್ಟವಾಗುತ್ತದೆ. ಆಮೇಲೆ ಬೆಂಕಿಯ ಜೊತೆಯಲ್ಲಿ ಸರಸವಾಡಿದ ಹಾಗಾಗುತ್ತದೆ. ಈಗ ಅವರಲ್ಲಿ ಇರೆಗ್ಯುಲಾರಿಟೀಸ್ ಇದ್ದದ್ದು ಒಂದು 4 ಸಾವಿರ ರೂಪಾಯಿಗಳ ಸಾಲ, ಇನ್ನೊಂದು ಎರಡು ಸಾವಿರ ರೂಪಾಯಿಗಳ ಸಾಲ. ಅದರಲ್ಲಿ ಆ ಬ್ಯಾಂಕಿನಲ್ಲಿರತಕ್ಕ ನೌಕರರೊಬ್ಬರ ಸಂಬಂಧೀಕರಿಬ್ಬರಿಗೆ 4 ಸಾವಿರ ರೂಪಾಯಿಗಳ ಸಾಲವನ್ನು ಇರೆಗ್ಯುಲರ್ ಆಗಿ ಇಷ್ಯೂ ಮಾಡಿತ್ತು. ಅದು ಇರೆಗ್ಯುಲರ್ ಆಗಿದೆ ಎಂದು ಗಮನಕ್ಕೆ ಬಂದಕೂಡಲೇ ಸಾಲವನ್ನು ರೀಕಾಲ್ ಮಾಡಿದ್ದಾರೆ. ಅವರು ಆ ಹಣವನ್ನು ವಾಪಸ್ಸು ಕೊಟ್ಟಿದ್ದಾರೆ.

ಶ್ರೀ ಕೆ. ಲಕ್ಕಪ್ಪ.—ಆ ಅಧಿಕಾರಿಗಳು ಅಲ್ಲಿಯೇ ಕಂಟಿನ್ಯೂ ಆಗಿದ್ದಾರೆ ಏತಕ್ಕೆ ?

Mr. SPEAKER.—Now, the member will have to retire. I will ask him to retire. But if the member does not disturb again, I will not enforce it. We are coming to the end of the debate on Demands. All these days we have carried on without any hitch and Should we have it at the end ? Kindly have some patience. Everything does not suit one's taste. There are certain unpleasant things. It may be that what has been done is wrong. Difference of opinion is bound to exist. If all think in one way, there would have been only one party.

Sri K. PUTTASWAMY.—Sir, I will not make any reference to what the Hon'ble Member Sri Lakkappa has said so that I may not give room to Sri Lakkappa to interrupt.

ಅದರಲ್ಲಿ ಅಧಿಕಾರಿಗಳು ಇದ್ದಾರೆ ಎಂದು ಹೇಳಿದರು. ಯಾವುದೋ ಒಂದು ತಪ್ಪಿಗೆ ಅವರನ್ನು ಗಡಿಪಾರು ಮಾಡಬೇಕೆಂದು ನನ್ನ ಅಪೇಕ್ಷೆ ಇಲ್ಲ. ಒಂದು ಡಿಸ್ಟ್ರಿಕ್ಟ್ ಬ್ಯಾಂಕಿನಲ್ಲಿ ಒಬ್ಬ ಉದ್ಯೋಗಿ ಇದ್ದಾನೆ. ಅವರ ಸಂಬಂಧೀಕರು ಅಲ್ಲಿ ಸಾಲವನ್ನು ತೆಗೆದುಕೊಂಡಿದ್ದಾರೆ. ಅದಕ್ಕೆ ಅವರು ಜವಾಬ್ದಾರರು ಎಂದು ಎಷ್ಟರಮಟ್ಟಿಗೆ ಕೋರ್ಟಿನಲ್ಲಿ ಸಾಬೀತು ಮಾಡುವುದಕ್ಕಾಗುತ್ತದೆ ಎಂಬು ದನ್ನು ಊಹೆ ಮಾಡಬೇಕು. ಸ್ವಲ್ಪಮಟ್ಟಿಗೆ ಅವರು ಸಹಾಯ ಮಾಡಿರಬಹುದು ಅವರು ಅಲ್ಲಿರು ವುದರಿಂದ. ಅನೇಕವೇಳೆ ಅಣ್ಣತಮ್ಮಂದಿರೇ ಸಹಾಯ ಮಾಡುವುದಕ್ಕೆ ಬದಲು ತೊಂದರೆ ಮಾಡತಕ್ಕ ಸಂದರ್ಭಗಳೂ ಉಂಟು. ಆ ಹಣವನ್ನು ಪಡೆದಿದ್ದವರಿಗೆ ಆ ಬ್ಯಾಂಕಿನಲ್ಲಿ ನೌಕರರ ಸಂಬಂಧ ಇದೆ, ಎಂದು ಪಿರ್ಯಾದನ್ನು ಕೊಟ್ಟಿದ್ದರು. ಆದರೆ ಅದಕ್ಕೆ ಪೋಲೀಸಿನವರು ಸಾಕಷ್ಟು ರುಜುವಾತು ಇಲ್ಲ, ಅವರ ಬಗ್ಗೆ ಕೇಸು ಹಾಕುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು. ಆ ನಂತರ ಅವರನ್ನು ಸಸ್‌ಪೆನ್‌ಷನ್‌ನಲ್ಲಿ ಇಟ್ಟಿದ್ದನ್ನು ವಾಪಸ್ಸು ತೆಗೆದುಕೊಂಡರು. ಅಷ್ಟು ಹೆಚ್ಚು ನಿಖರವಾಗಿ ಕ್ರಮ ವನ್ನು ಕೈಗೊಳ್ಳುವುದಕ್ಕೆ ಡಿಸ್ಟ್ರಿಕ್ಟ್ ಬ್ಯಾಂಕಿಗೆ ಸಾಧ್ಯವಾಗುವುದಿಲ್ಲ. ಯಾರಾದರೂ ಒಬ್ಬರು ಸಂಬಂಧೀಕರ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಬೇಕಾದಂತಹ ಕಾನೂನು ಕಟ್ಟಳೆಗಳನ್ನು

ಮಾಡುವುದಕ್ಕೆ ಈ ಸಭೆ ಒಪ್ಪುತ್ತದೆ ಎಂದು ನಾನು ತಿಳಿದುಕೊಂಡಿಲ್ಲ. ಈಗಲಾದರೂ ಶ್ರೀಮಾನ್ ಲಕ್ಕಪ್ಪನವರು ಇದನ್ನು ಅರ್ಥಮಾಡಿಕೊಂಡಿದ್ದಾರೆಂದು ನಾನು ಭಾವಿಸಿ ಅವರು ಹೇಳಿದಂತಹ ರೆಫರೆನ್ಸಸ್ ಅನ್ನು ಬಿಟ್ಟು ನಾನು ಮುಂದಕ್ಕೆ ಹೋಗುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ಅರ್ಬಿಟ್ರೇಟರ ವಿಷಯ ಹೇಳಲಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಇಲ್ಲಿ ಕೆಲವು ಆರ್ಬಿಟ್ರೇಟರುಗಳಿಗೆ ಕ್ವಾಲಿಫಿಕೇಷನ್ ಹೆಚ್ಚು ಕಡಿಮೆ ಇದೆ ಎಂದು ಹೇಳಿದರು. ನಮಗೆ ಕೊಟ್ಟಂತಹ ಅಂಕಿ ಅಂಶಗಳ ಪ್ರಕಾರ ಅವರ ಕ್ವಾಲಿಫಿಕೇಷನ್ ಹೆಚ್ಚು ಕಡಿಮೆ ಆಗಿರುವುದು ಉಂಟು. ನಾನು ತಿಳಿದಿದ್ದರಲ್ಲಿ ಆರ್ಬಿಟ್ರೇಟರ್ ಆಗಬೇಕಾಗಿದ್ದರೆ ಲಾ ಪದವೀಧರರೇ ಆಗಬೇಕೆಂದೇನೂ ಇಲ್ಲ. ಅವರು ಕೋ ಆಪರೇಟೀವ್ ಫೀಲ್ಡಿನಲ್ಲಿ ಇರಬೇಕು. ಅವರಿಗೆ ಸಹಾನುಭೂತಿ ಇರಬೇಕು. ವಿಚಾರವನ್ನು ವಿಮರ್ಶೆ ಮಾಡಿ ತೀರ್ಮಾನ ಮಾಡುವ ಶಕ್ತಿ ಇರಬೇಕು. ಸಹಕಾರ ಸಂಘಗಳ ಮತ್ತು ಸರ್ಕಾರದ ಎರಡು ಹಿತಗಳನ್ನು ರಕ್ಷಣೆ ಮಾಡತಕ್ಕ ಸಹೃದಯತೆ ಅವರಿಗೆ ಇರಬೇಕು.

ಆಮೇಲೆ ಇನ್ನೊಂದು ವಿಚಾರವನ್ನು ಹೇಳಿದರು. ಅದೇನೆಂದರೆ, ಕೆಲವರಿಗೆ ಹೆಚ್ಚು ಹಣವನ್ನು ಕೊಟ್ಟಿದ್ದಾರೆ, ಕೆಲವರಿಗೆ ಕಡಿಮೆ ಹಣವನ್ನು ಕೊಟ್ಟಿದ್ದಾರೆ ಎಂದು ಹೇಳಿದರು. ಅದನ್ನೇನು ಬಚ್ಚಿಟ್ಟಿಲ್ಲ. ಅದಕ್ಕೆ ಅಧಿಕಾರಿಗಳು ಕೊಟ್ಟಿರತಕ್ಕ ಕಾರಣಗಳೂ ಸಹ ನಮ್ಮಲ್ಲಿ ಇವೆ. ಆದರೂ ಕೂಡ ನಾವು ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಇದರ ಬಗ್ಗೆ ರಿಜಿಸ್ಟ್ರಾರ್ ರವರೂ ಕೂಡ ಒಂದು ಸರ್ಕ್ಯುಲರನ್ನು ಕೊಟ್ಟಿದ್ದಾರೆ. ಹೀಗಿರುವಾಗಿ ಇಲ್ಲಿ ಈಕ್ವಿಟಬಲ್ ಡಿಸ್ಟ್ರಿಬ್ಯೂಷನ್ನು ಮಾಡಿಲ್ಲದಿದ್ದರೆ ಅಥವಾ ಅಲ್ಲಿ ಯಾರಾದರೂ ಕೆಲಸ ಮಾಡದೆ ಇದ್ದರೆ ಅಂತಹವರ ಹೆಸರುಗಳನ್ನು ಅರ್ಬಿಟ್ರೇಷನ್ನು ಲಿಸ್ಟಿನಿಂದ ತೆಗೆದುಹಾಕುತ್ತಿದ್ದೆವು. ಮತ್ತೆ ಇಲ್ಲಿ ಹೈ ಕೋರ್ಟಿನ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ಹೇಳಿದರು. ಯಾವ ಕೆಲಸಕ್ಕಾಗಿ ಏನು ಅಪರಾಧ ಮಾಡಿರುವುದಕ್ಕಾಗಿ ಇದನು ಮಾಡಬೇಕು ಎನ್ನುವುದು ಗೊತ್ತಾಗಲಿಲ್ಲ. ಈ ದೇಶದಲ್ಲಿ ಸುಮಾರು 18000 ಸಹಕಾರ ಸಂಘಗಳು ಇವೆ. ಇವುಗಳ ಮೇಲೆ ಒಬ್ಬ ಹೈ ಕೋರ್ಟು ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿ ವಿಚಾರಣೆ ಮಾಡಿ ಎಂದರೆ ಇದು ಸಾಮಾನ್ಯ ವಾದಂತಹ ಕೆಲಸವೇ? ಇಲ್ಲಿ ಕಾರ್ಯ ಮಾಡುತ್ತಿರತಕ್ಕ ಸಂಘಗಳ ಸೇವಕರಾಗಿರತಕ್ಕ ಅನೇಕ ನೌಕರರುಗಳ ಮೇಲೆ ವಿಚಾರಣೆಗೆ ಗುರಿಪಡಿಸತಕ್ಕ ಒಂದು ಉದ್ಯೋಗವನ್ನು ಸರಕಾರ ಮಾಡಲು ಒಪ್ಪುವುದಿಲ್ಲ ಬಹುಶಃ ಮಾನ್ಯ ಸದಸ್ಯರು ಇನ್ನು ಮುಂದೆ ಇಂತಹ ಸಲಹೆಯನ್ನು ಮಾಡಲಾರರು ಎಂದು ನಾನು ಆಶಿಸುತ್ತೇನೆ.

ಇನ್ನು ಮಾನ್ಯ ಸದಸ್ಯರಾದ ಶ್ರೀ ಎ. ಎಸ್. ಪಾಟೀಲ್ ರವರು ಕೆಲವು ವಿಚಾರಗಳನ್ನು ಹೇಳಿದರು ಮತ್ತು ಅವರು ಹೇಳಿದಂತಹ ಸಲಹೆಗಳಿಗಾಗಿ ನಾನು ಕೃತಜ್ಞನಾಗಿದ್ದೇನೆ. ಆದರೆ ಅವರು ಒಂದು ವಿಚಾರವನ್ನು ಇಲ್ಲಿ ಹೇಳಿದರು. ಅಧಿಕಾರಿಗಳ ನೇಮಕ ಮಾಡಿದರೆ 'ಎಂಬ್ರೇಸಿಂಗ್ ಡೆತ್' ಎಂದಾಗುತ್ತದೆ ಎಂದರು. ಅಧಿಕಾರಿಗಳನ್ನು ಏತಕ್ಕಾಗಿ ನೇಮಕ ಮಾಡುತ್ತಿದ್ದೀರಿ ಎನ್ನುವುದರಲ್ಲಿ ಏನಾದರೂ ತಪ್ಪು ಅಭಿಪ್ರಾಯವನ್ನು ಇಲ್ಲಿ ಹೇಳಿದ್ದರೆ ಅಂತಹ ತಪ್ಪು ಅಭಿಪ್ರಾಯಗಳಿದ್ದರೆ ಅದನ್ನು ನಿವಾರಣೆ ಮಾಡಬಹುದಾಗಿತ್ತು ಎಂದು ನಾನು ಇಲ್ಲಿ ಹೇಳುತ್ತೇನೆ. ಆಡಳಿತ ನಡೆಸತಕ್ಕ ಮಂಡಲಿಯಲ್ಲಿ ನಾವೇ ಅಧಿಕಾರಿಗಳನ್ನು ತುಂಬಿ ಅವರ ಮೇಲೆ ಆಡಳಿತ ನಡೆಸಬೇಕು ಎನ್ನುವುದು ಸರಿಯಾದದು ಅಲ್ಲ. ಸರಕಾರ ಇದನ್ನು ಅಪೇಕ್ಷಿಸುತ್ತಲೂ ಇಲ್ಲ. ಎಲ್ಲ ಸಹಕಾರ ಸಂಘಗಳಲ್ಲೂ ಸರಕಾರದ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುತ್ತಿಲ್ಲ. ಎಲ್ಲಿಯಾದರೂ ನೇಮಕ ಮಾಡಿದ್ದರೆ ಒಂದೊಂದು ತಾಲ್ಲೂಕು ಮಟ್ಟದಲ್ಲಿರುವ ಸಹಕಾರ ಸಂಘದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ನೇಮಕ ಮಾಡಿಕೊಳ್ಳುತ್ತಿದ್ದಾರೆ. ತಾಲ್ಲೂಕಾ ಮಟ್ಟದಲ್ಲಿ ಒಬ್ಬರು ಹಾಗೂ ಜಿಲ್ಲಾ ಮಟ್ಟದಲ್ಲಿ ಮೂರುಜನ ಅಧಿಕಾರಿಗಳನ್ನು ಮಾತ್ರ ನೇಮಕ ಮಾಡಲಾಗಿದೆ. ಬಹುಶಃ ಸರಕಾರದಲ್ಲಿ ಅಧಿಕಾರಿಗಳಾಗಿ ಕೆಲಸ ಮಾಡುವುದರಲ್ಲಿಯೂ ಮತ್ತು ಇಂತಹ ಒಂದು ಆಡಳಿತ ಮಂಡಲಿಯಲ್ಲಿ ಕೆಲಸ ಮಾಡುವುದಕ್ಕೆ ಬರುವುದರಲ್ಲಿಯೂ ವ್ಯತ್ಯಾಸವಿದೆ ಎನ್ನುವುದು ಅವರಿಗೂ ಗೊತ್ತು ಮತ್ತು ಮಾನ್ಯ ಸಭೆಯವರೂ ಒಪ್ಪುತ್ತಾರೆ. ಸಹಕಾರ ಸಂಘಗಳು ಇನ್ನೂ ಸರಿಯಾಗಿ ಆಡಳಿತ ನಿರ್ವಹಣೆ ಮಾಡತಕ್ಕ ಅಧಿಕಾರಿಗಳನ್ನು ನಿರ್ಮಾಣ ಮಾಡದೇ ಇರುವುದರಿಂದ ಅನಿವಾರ್ಯವಾಗಿ ಇಂದು ಕೆಲವು ಸಹಕಾರ ಸಂಘಗಳಿಗೆ ಅಧಿಕಾರಿಗಳನ್ನು ಎರವಲು ಕೊಡಬೇಕೆಂದು ಅಪೇಕ್ಷೆಪಟ್ಟರೆ ಆಗ ನಮ್ಮ ಅಧಿಕಾರಿಗಳನ್ನು ಕೊಡುತ್ತೇವೆ. ಅಲ್ಲದೆ ನಮ್ಮ ಸರಕಾರದ ಅಧಿಕಾರಿಗಳನ್ನು ತೆಗೆದುಕೊಳ್ಳಬೇಕೆಂದು ಒತ್ತಾಯವೇನಿಲ್ಲ. ನಮಗೂ ಕೂಡ ಅಧಿಕಾರಿಗಳು ಅಕ್ಷಯನಿಧಿಯಂತೆ ಇಲ್ಲ. ನಮಗೂ ಕೂಡ ಜವಾಬುದಾರಿಯಿಂದ ಸೇವೆ ಮಾಡುವ ಅಧಿಕಾರಿಗಳು ಬೇಕಾಗಿರುತ್ತದೆ. ನಾವು ಎರವಲು ಕೊಡುವ ಅಧಿಕಾರಿಗಳಿಂದ ಸಹಕಾರ ಸಂಘಗಳಿಗೆ ಒಳ್ಳೆಯದಾಗಬೇಕು ಮತ್ತು

(ಶ್ರೀ ಕೆ. ಪುಟ್ಟಸ್ವಾಮಿ)

ಅಲ್ಲಿನ ಜನರಿಗೆ ಸೌಲಭ್ಯಗಳನ್ನು ಒದಗಿಸಬೇಕು ಎಂದು ಅಲ್ಲಲ್ಲಿ ಒಬ್ಬಿಬ್ಬರು ಅಧಿಕಾರಿಗಳನ್ನು ಕೊಟ್ಟು ಅವರೊಡನೆ ಸಹಕರಿಸಿ ಕಾರ್ಯ ಮಾಡುವಂತೆ ಸಹಾಯ ಮಾಡುತ್ತಿದ್ದೇವೆ. ಇದರಲ್ಲಿ ನಾವೇನೂ ಅವರನ್ನು ಒತ್ತಾಯ ಮಾಡಿ ತೆಗೆದುಕೊಳ್ಳಬೇಕೆಂದು ಹೇಳುತ್ತಿಲ್ಲ.

ಶ್ರೀಮಾನ್ ಅಣ್ಣಾರಾವ್ ಗಣಮುಖಿಯವರು ಕೆಲವು ಮುಖ್ಯ ವಿಚಾರಗಳನ್ನು ಹೇಳಿದರು. ಬಹುಶಃ "history repeats itself" ಎಂದರೆ ಚರಿತ್ರೆ ಪುನರಾವೃತ್ತಿಯಾಗುತ್ತಲೇ ಇರುತ್ತದೆ. ಡಿಸ್ಟ್ರಿಕ್ಟ್ ಬ್ಯಾಂಕುಗಳಲ್ಲಿ ಅಗ್ರಿಕಲ್‌ಚರು ಕ್ರೆಡಿಟ್ ಕೊಡುವಾಗ ಈಗ ತ್ರೀ ಟೈರು ಸಿಸ್ಟಂ ಎಂದು ಇದೆ. ಇಲ್ಲಿ ಟೂ ಟೈರ್ ಸಿಸ್ಟಂ ಏಕೆ ತರಬಾರದು ಎಂದು ಹೇಳಿದರು. ಈಗ ರಿಸರ್ವ್ ಬ್ಯಾಂಕಿನಲ್ಲಿ ತ್ರೀ ಟೈರು ಸಿಸ್ಟಂ ಎಂದು ಇದೆ ಮತ್ತು ಅವರು ಕೊಡುವ ಹಣಕ್ಕೆ ಶೇಕಡಾ ಮೂರುವರೆಯಂತೆ ಬಡ್ಡಿ ಹಾಕುತ್ತಾರೆ ಅದನ್ನು ಇಲ್ಲಿ ತಂದು ಶೇಕಡಾ ಒಂಬತ್ತರಂತೆ ಬಡ್ಡಿ ದರದ ಮೇಲೆ ಕೊಟ್ಟರೆ ಅದು ರೈತರ ಮೇಲೆ ತಲೆ ಹೊರೆ ಹೆಚ್ಚಾಗುವುದಿಲ್ಲವೇ ? ಆದುದರಿಂದ ಲ್ಯಾಂಡು ಡೆವಲಪ್‌ಮೆಂಟು ಬ್ಯಾಂಕುಗಳಲ್ಲಿ ಟೂ ಟೈರ್ ಸಿಸ್ಟಂ ಎಂದು ಏಕೆ ಮಾಡಬಾರದು ಎಂದು ಕೇಳಿದರು. ಇದು ಸ್ವಾಭಾವಿಕ. 1957ನೇ ಇಸವಿಗೆ ಮುಂಚೆ ನಮ್ಮಲ್ಲಿ ಕೂಡ ಟೂ ಟೈರ್ ಸಿಸ್ಟಂ ಇತ್ತು ಮತ್ತು ಅಪೆಕ್ಸ್ ಬ್ಯಾಂಕಿನವರೇ ನೇರವಾಗಿ ರೈತರಿಗೆ ಸಾಲ ಕೊಡುತ್ತಿದ್ದರು. ಹಾಗೆ ನೇರವಾಗಿ ಕೊಡುವುದ ರಿಂದಾಗಿ ಅಪೆಕ್ಸ್ ಬ್ಯಾಂಕ್ ತನ್ನ ಕೈಯ್ಯನ್ನು ಸುಟ್ಟುಕೊಂಡಿತು. ಇದರ ಜೊತೆಗೆ ಯಾವ ಉದ್ದೇಶ ಸಾಧನೆ ಮಾಡಬೇಕೆಂದು ಇದ್ದೆವೋ ಆ ಉದ್ದೇಶ ಸಾಧನೆ ಮಾಡುವುದಕ್ಕಾಗಲಿಲ್ಲ. ರಿಸರ್ವ್ ಬ್ಯಾಂಕು ಇದರ ಬಗ್ಗೆ ಒಂದು ರಿಪೋರ್ಟನ್ನು ಕೊಟ್ಟ ಮೇಲೆ ಇಂಡಿಯಾ ಸರಕಾರದವರು ತ್ರೀ ಟೈರ್ ಸಿಸ್ಟಂ ಎನ್ನುವುದನ್ನು ಒಪ್ಪಿಕೊಳ್ಳಬೇಕಾಗಿ ಬಂತು. ಅದರಂತೆ ಹಿಂದೆ ಇದ್ದ ಟೂ ಟೈರ್ ಸಿಸ್ಟಂ ತೆಗೆದು ಈಗ ನಾವೂ ಕೂಡ ತ್ರೀ ಟೈರ್ ಸಿಸ್ಟಂ ಉತ್ತಮ ಎಂದು ಒಪ್ಪಬೇಕಾಯಿತು. ಈ ತ್ರೀ ಟೈರ್ ಸಿಸ್ಟಂ ಏತಕ್ಕಾಗಿ ಇರಬೇಕು ಎನ್ನುವುದನ್ನು ವಿಚಾರ ಮಾಡುವ ಗೋಜಿಗೆ ಹೋಗುವುದಿಲ್ಲ. ಒಂದು ವಿಚಾರ ಇಲ್ಲಿ ಹೇಳಬೇಕಾಗಿ ಬಂದಿದೆ. ಅಪೆಕ್ಸ್ ಬ್ಯಾಂಕು ಇದುವರೆಗೆ ಬ್ಯಾಂಕಿಂಗ್ ವ್ಯವಹಾರಗಳನ್ನು ಮಾಡುತ್ತಿರುವುದನ್ನು ನೋಡಿದರೆ ಕೊನೆಯ ಪಕ್ಷ ಅರ್ಧ ಶತ ಮಾನಕ್ಕಿಂತ ಹೆಚ್ಚಾಗಿ ರೈತರಿಗೆ ಸಹಾಯ ಮಾಡಬೇಕೆಂದು ಅದು ಬ್ಯಾಂಕಿಂಗ್ ವ್ಯವಹಾರಗಳನ್ನು ನಡೆಸುತ್ತಿವೆ. ಏನೋ ನತದೃಷ್ಟನಾದ ರೈತ ಅವರು ಒದಗಿಸಿಕೊಟ್ಟಂತಹ ಹಣದ ಸೌಲಭ್ಯಗಳನ್ನು ಪಡೆಯಲು ಇಂತಹ ಬ್ಯಾಂಕನ್ನು ನಿರ್ಮಾಣ ಮಾಡಿದ್ದೇವೆ. ಮತ್ತು ರೈತರಿಗೆ ಹಣ ಸಹಾಯ ಮಾಡುವ ವಿಷಯದಲ್ಲಿ ತೀವ್ರಾಸಕ್ತಿಯಿಂದ ಜನತೆಯಲ್ಲಿ ಕೆಲಸ ಮಾಡಬೇಕೆಂದು ಇಲ್ಲಿನ ಸದಸ್ಯರು ಮಾಡುತ್ತಿದ್ದಾರೆ. ಈ ಒಂದು ಸೆಟ್ ಅಪ್ ಮಾಡಿ ಇದರ ಮೂಲಕ ರೈತಾಪಿ ಜನಕ್ಕೆ ಕೆಲವು ಸೌಕರ್ಯಗಳನ್ನು ಮಾಡಿಕೊಡಬೇಕೆಂದು ಇಟ್ಟುಕೊಂಡಿದ್ದೇವೆ. ಮಾನ್ಯ ಸದಸ್ಯರಾದ ಶ್ರೀ ಅಣ್ಣಾ ರಾವ್ ಗಣಮುಖಿಯವರು ಈ ವಿಚಾರಗಳನ್ನೆಲ್ಲಾ ತಿಳಿದುಕೊಂಡಿದ್ದಾರೆ. ಒಂದು ವಿಧದಲ್ಲಿ ಅವರು ನನಗೆ ಉಪಕಾರ ಮಾಡಿದ್ದಾರೆ. ಅವರು ಇಲ್ಲಿ ಈ ವಿಚಾರ ಪ್ರಸ್ತಾಪ ಮಾಡದೇ ಇದ್ದರೆ ನಾನು ಈ ಸಭೆಯಲ್ಲಿ ಕಾಲವನ್ನು ತೆಗೆದುಕೊಂಡು ಇದರ ಅವಶ್ಯಕತೆ ವಿಚಾರ ಹೇಳಬೇಕಾದ ಒಂದು ಅವಕಾಶ ದೊರೆಯುತ್ತಿರಲಿಲ್ಲ. ಈಗ ಅದನ್ನೊದಗಿಸಿ ಅವರು ನನಗೆ ಉಪಕಾರ ಮಾಡಿದ್ದಾರೆ. ಹಣ ಕೊಡುವುದರಲ್ಲಿ ಇಲ್ಲಿ ಎಷ್ಟು ಅಂತರವಿದೆ ಯಾವ ರೀತಿಯಾಗಿ ಕೊಟ್ಟುಬಿಡಬೇಕು ಎನ್ನುವುದರ ಬಗ್ಗೆ ಸ್ವಲ್ಪ ಆಲೋಚನೆ ಮಾಡೋಣ. ರಿಸರ್ವ್ ಬ್ಯಾಂಕು ಅಪೆಕ್ಸ್ ಬ್ಯಾಂಕಿಗೆ ಸಾಲವಾಗಿ ಹಣ ಕೊಡುತ್ತಿದ್ದಾರೆ. ರಿಸರ್ವ್ ಬ್ಯಾಂಕಿನವರು ಶೇಕಡಾ ಮೂರೂವರೆ ದರದಂತೆ ಸಾಲ ಕೊಡುವು ದನ್ನು ಅಪೆಕ್ಸ್ ಬ್ಯಾಂಕಿನವರು ಶೇಕಡಾ ನಾಲ್ಕರ ದರದಂತೆ ಮೀಡಿಯಂ ಲೋನಿಗಾಗಿ ಕೊಡುತ್ತಾರೆ. ಹಾಗೇನೆ ರಿಸರ್ವ್ ಬ್ಯಾಂಕಿನಿಂದ ಶೇಕಡಾ ನಾಲ್ಕೂವರೆಯಂತೆ ಬಡ್ಡಿ ಮೇಲೆ ತಂದು ಡಿ.ಸಿ.ಸಿ. ಬ್ಯಾಂಕ್ ಶೇಕಡಾ ಐದರಂತೆ ಕೊಡುತ್ತಾರೆ. ಕೇವಲ ಅರ್ಧ ಪರ್ಸೆಂಟು ಮಾತ್ರ ಜಾಸ್ತಿಯಾಗಿ ಕೊಡುತ್ತಿದ್ದಾರೆ ಮತ್ತೆ ಡಿ.ಸಿ.ಸಿ. ಬ್ಯಾಂಕುಗಳು ಪ್ರೈಮರಿ ಬ್ಯಾಂಕುಗಳಿಗೆ ಕೊಡು ವಾಗ ಶೇಕಡಾ ಆರೂವರೆಯಂತೆ ತಂದು ಶೇಕಡಾ ಏಳರಂತೆ ಸಾಲ ಕೊಡುತ್ತಾರೆ. ಇದರಲ್ಲಿ ಅವರು ಎರಡು ರೂಪಾಯಿಗಳಷ್ಟು ಎಂದು ಇಟ್ಟುಕೊಂಡಿದ್ದಾರೆ. ಪ್ರೈಮರಿ ಬ್ಯಾಂಕುಗಳವರು ಇನ್‌ವೆಸ್ಟು ಮಾಡುವಾಗ ಶೇಕಡಾ ಎಂಟೂವರೆಯಿಂದ ಒಂಬತ್ತರವರೆಗೆ ಎಂದರೆ ಶೇಕಡಾ ಒಂದೂವರೆಯಿಂದ ಎರಡರವರಿಗೆ ಅಪೆಕ್ಸ್ ಬ್ಯಾಂಕುಗಳವರು ಹಂಚಬೇಕೆಂದು ಮಾಡಿದ್ದಾರೆ. ರಿಸರ್ವ್ ಬ್ಯಾಂಕಿನಂತೆ ಪ್ರತಿಯೊಂದು ಜಿಲ್ಲೆಯಲ್ಲಿಯೂ ವ್ಯವಹಾರ ಮಾಡುವ ಬ್ಯಾಂಕುಗಳು ಇವೊತ್ತು ಡಿಸ್ಟ್ರಿಕ್ಟು ಬ್ಯಾಂಕುಗಳು ಎಂದು ಇದ್ದರೂ ಇದರ ಆಡಳಿತ ಯಾವ ರೀತಿ ಇದೆ ಮತ್ತು ಯಾವ ಒಂದು ನಿಯಮಗಳನ್ನು ಹಾಕುತ್ತದೆಯೋ ಆ ನಿಯಮಗಳಿಗೆ ಜಿಲ್ಲಾ ಬ್ಯಾಂಕುಗಳು ಒಳಗಾಗುವುದಕ್ಕೆ ಸಾಧ್ಯವಿಲ್ಲ. ಈ ಕಾರಣದಿಂದ ಈ ಬ್ಯಾಂಕುಗಳು ಇನ್ನೂ ಉಳಿದಿಲ್ಲ. ಇದರಿಂದ

ನೇರವಾಗಿ ಡಿಸ್ಟ್ರಿಕ್ಟು ಬ್ಯಾಂಕುಗಳಿಂದ ಜನಕ್ಕೆ ಸೌಲಭ್ಯಗಳು ದೊರೆಯುತ್ತಿಲ್ಲ. ಅಪೆಕ್ಸ್ ಬ್ಯಾಂಕು ಕೂಡ ರಿಸರ್ವ್ ಬ್ಯಾಂಕು ಮಾದರಿಯಲ್ಲಿ ಆ ಪ್ಯಾಟರ್ನ ಅನುಸರಿಸಿಕೊಂಡು ಹೋಗಬೇಕೆಂದು ಮಾಡಿದ್ದರೂ ಇವೊತ್ತು ಸುಮಾರು ಹನ್ನೊಂದು ಕೋಟಿಯಷ್ಟು ಹಣವನ್ನು ಸಾಲವಾಗಿ ಹಂಚಲು ಸಾಧ್ಯವಾಯಿತು. 26 ಕೋಟಿಯಷ್ಟು ಹಣ ಸಾಲವಾಗಿ ಕೊಡಬೇಕೆಂದು ಇದ್ದರೂ ಅದನ್ನು ಕೊಡಲಾಗಲಿಲ್ಲ. ಹೀಗೆ 26 ಕೋಟಿಯಷ್ಟು ಹಣ ಒದಗಿಸಿಕೊಡತಕ್ಕ ಒಂದು ಬ್ಯಾಂಕು ಎನ್ನುವುದನ್ನು ಇನ್ನೂ ನಿರ್ಮಾಣ ಮಾಡಲಿಕ್ಕೆ ಆಗಲಿಲ್ಲ. ಮೂರನೆ ಯೋಜನೆಯಲ್ಲಿ ಇದನ್ನು ಮಾಡಲು ವ್ಯವಸ್ಥೆ ಮಾಡಿದ್ದರೆ ಆಗ ನಾನು ಇದರಿಂದ ಉತ್ತಮವಾಗುತ್ತಿತ್ತು ಎಂದು ಹೇಳುವುದಕ್ಕೆ ಆಗುತ್ತಿತ್ತು. ಅನೇಕ ಜಿಲ್ಲಾ ಬ್ಯಾಂಕುಗಳು ಅಪೆಕ್ಸ್ ಬ್ಯಾಂಕು ಮಾದರಿಯಲ್ಲಿ ಕೆಲಸ ಮಾಡ ಬೇಕೆಂದು ಇವೆ. ಕೆಲವಾರು ಡಿಸ್ಟ್ರಿಕ್ಟು ಬ್ಯಾಂಕುಗಳು ರಿಸರ್ವ್ ಬ್ಯಾಂಕುಗಳ ಆಶ್ರಯವಿಲ್ಲದೆ ಅವರು ವ್ಯವಹಾರ ಮಾಡುವ ಶಕ್ತಿಯನ್ನು ಬೆಳೆಸಿಕೊಂಡು ಬಂದಿವೆ ಎಂದು ಇಲ್ಲಿ ಅಭಿಮಾನದಿಂದ ಹೇಳುತ್ತೇನೆ. ಹೀಗೆ ಒಂದೊಂದು ಜಿಲ್ಲೆಯಲ್ಲೂ ಕೂಡ ಒಂದು ಬ್ಯಾಂಕು ರೈತನಿಗೆ ಬೇಕಾದ ಹಣ ಒದಗಿಸಿಕೊಡುವ ಶಕ್ತಿ ಪಡೆದರೆ ಮತ್ತು ಆ ಬ್ಯಾಂಕುಗಳಿಂದ ರೈತನ ಕಷ್ಟ ಪರಿಹಾರವಾದರೆ ಅದರಿಂದ ಎಷ್ಟೋ ಅನುಕೂಲವಾಗುತ್ತದೆ. ಇದು ಸಾಮಾನ್ಯವಾದ ಕೆಲಸವಲ್ಲ. ಸ್ವಲ್ಪಮಟ್ಟಿಗೆ ಯಶಸ್ವಿಯಾಗಿ ಈ ಬ್ಯಾಂಕುಗಳು ಕೆಲಸ ಮಾಡುತ್ತಿವೆ. ನನಗಾದರೂ ಇದು ಬಹಳ ಸಂತೋಷ ವಾಗಿದೆ. ಈ ವ್ಯವಹಾರದಲ್ಲಿ ನಾವು ಒದಗಿಸತಕ್ಕದ್ದು ಏನು ಎಂದರೆ It has not touched the fringe. I am not satisfied. 26 ಕೋಟಿಯಷ್ಟು ಎಂದು ಇರುವುದನ್ನು 260 ಕೋಟಿಯಷ್ಟು ಒದಗಿಸಿ ಕೊಡಬೇಕೆಂದು ಹೇಳಿದರೆ ಅದು ಸಾಧ್ಯವಾಗುವುದಿಲ್ಲ. ಕ್ರೆಡಿಟ್ಟು ಏನು ಒದಗಿಸುತ್ತೇವೆ ಅದರಂತೆ ಬೆಂಗಳೂರಿನಲ್ಲಿರುವ ಡಿ.ಸಿ.ಸಿ. ಬ್ಯಾಂಕಿನವರು ವಿಚಾರ ಮಾಡಿ ಸೆಂಟ್ರಲ್ ಬ್ಯಾಂಕಿನಂತೆ ಸಾಕಷ್ಟು ಪ್ರಮಾಣದಲ್ಲಿ ಹಣ ಕೊಡುವುದಕ್ಕಾಗಲಿಲ್ಲ. ಇಲ್ಲಿರತಕ್ಕ ಮಾನ್ಯ ಸದಸ್ಯರು ಗಳಲ್ಲಿ ನಾನು ವಿನಂತಿ ಮಾಡುವುದು ಬೆಂಗಳೂರು ಡಿಸ್ಟ್ರಿಕ್ಟು ಬ್ಯಾಂಕಿನ ವ್ಯವಹಾರಗಳನ್ನು ಹೆಚ್ಚು ಮಾಡಿದರೆ ಇನ್ನೂ ಹಣದ ಪ್ರಮಾಣವನ್ನು ಹೆಚ್ಚು ಮಾಡಲು ಸಾಧ್ಯವಿದೆ ಮತ್ತು ಹಾಗೆ ಕೊಡುವುದಕ್ಕೆ ಸಾಧ್ಯವಿದೆ. ಈ ಕಡೆ ಗಮನ ಕೊಡಿ. ರೈತರ ಆವಶ್ಯಕತೆ ಬಹಳ ಇದೆ. ಈಗ ಹಳ್ಳಿಗಳಲ್ಲಿ ಬಾವಿಗಳನ್ನು ತೆಗೆಸಬೇಕು ಮತ್ತು ಇಂತಹ ಕೆಲಸಗಳು ವಿಪರೀತವಾಗಿ ಹೆಚ್ಚಿದೆ. ಇಲ್ಲಿ ಇಂಟೆನ್‌ಸೀವ್ ಕಲ್ಟಿವೇಷನ್ ಆಗಬೇಕಾಗಿದೆ. ಇದಕ್ಕಾಗಿ ಹಣದ ಸೌಲಭ್ಯಗಳು ಹೆಚ್ಚಾಗಿರುತ್ತವೆ.

ಒದಗಿಸಿರುವ ಹಣ 1964-65ರಲ್ಲಿ 16 ಲಕ್ಷ 75 ಸಾವಿರ, 1965-66ರಲ್ಲಿ 11 ಲಕ್ಷ 8 ಸಾವಿರ ರೂಪಾಯಿ. ಎಂ. ಟಿ. ಲೋನು 32.93 ಲಕ್ಷ ರೂಪಾಯಿ. ಬ್ಯಾಂಕಿನವರು ನಾನ್ ಅಗ್ರಿಕಲ್ಚರಲ್ ಸೆಕ್ಟರ್‌ನಲ್ಲಿ 19 ಲಕ್ಷದ 20 ಸಾವಿರ ರೂಪಾಯಿ ಕೊಟ್ಟಿದ್ದಾರೆ. ಎಂ. ಟಿ. ಲೋನು 28 ಲಕ್ಷದ 71 ಸಾವಿರ ರೂಪಾಯಿಗಳನ್ನು ಕೊಡಲಾಗಿದೆ. ಕ್ಯಾಷ್ ಕ್ರೆಡಿಟ್ ಲೋನ್ ಬ್ಯಾಂಕಿಗೆ 8 ಲಕ್ಷ, ಅಗ್ರಿಕಲ್ಚರಲ್ ಕ್ರೆಡಿಟ್ ಸೊಸೈಟಿಗೆ 11 ಲಕ್ಷ, ಕನ್‌ಸ್ಯೂಮರ್ ಸೊಸೈಟಿಗೆ 71 ಲಕ್ಷ ಇಂಡಸ್ಟ್ರಿಯಲ್ ಬ್ಯಾಂಕಿಗೆ 9 ಲಕ್ಷ, ಮಾರ್ಕೆಟಿಂಗ್‌ಗೆ 30 ಲಕ್ಷ, ಡೆಸಿಮಲ್ ಪಾಯಿಂಟ್ ಬಿಟ್ಟು ಈ ಲೆಕ್ಕ ಹೇಳುತ್ತಾ ಇದ್ದೇನೆ.

ಶ್ರೀ ಅಣ್ಣಾ ರಾವ್ ಗಣಮುಖಿ (ಅಫ್‌ಜಲ್‌ಪುರ).—ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಇಂಟ ರೆಸ್ಟ್ ಕಡಿಮೆ ಮಾಡಬೇಕೆಂಬ ಪ್ರಸ್ತಾಪ ಬಂತು ಎಲ್ಲ ಚೀಫ್ ಮಿನಿಸ್ಟರುಗಳೂ ಅದನ್ನು ವಿಚಾರ ಮಾಡಬೇಕು ಎಂಬ ನಿರ್ಣಯ ತೆಗೆದುಕೊಂಡಿದ್ದಾರೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಆ ವಿಚಾರವನ್ನೂ ಪ್ರಸ್ತಾಪ ಮಾಡುತ್ತೇನೆ. ಇವತ್ತು ಬೆಂಗಳೂರು ಡಿಸ್ಟ್ರಿಕ್ಟ್ ಬ್ಯಾಂಕ್ ಒಂದರ ವ್ಯವಹಾರ ನೋಡುವುದಾದರೆ ಅವರು ನಾನ್ ಅಗ್ರಿಕಲ್ಚರಲ್ ದೃಷ್ಟಿಯಿಂದ ಹೆಚ್ಚಾಗಿ ಕೊಡುತ್ತಾ ಇದ್ದಾರೆ ಮತ್ತು ಅಂತಹ ಶಕ್ತಿ ಇರತಕ್ಕ ಬ್ಯಾಂಕಿಗೆ ಅಗ್ರಿ ಕಲ್ಚರಲ್ ಫೈನಾನ್ಸ್ ಕೊಡುವುದಿಲ್ಲ ಎಂದು ಹೇಳಿ ರಿಸರ್ವ್ ಬ್ಯಾಂಕಿನವರು ತೀರ್ಮಾನ ಮಾಡಿದ್ದಾರೆ. ಬೆಂಗಳೂರು ಡಿಸ್ಟ್ರಿಕ್ಟ್ ಬ್ಯಾಂಕಿನವರು ಅಲ್ಪ ಪ್ರಮಾಣದಲ್ಲಿ ವ್ಯವಸಾಯಗಾರರಿಗೆ ಸಾಲ ಕೊಡುತ್ತಾ ಇದ್ದರೂ ಕೂಡ ರಿಸರ್ವ್ ಬ್ಯಾಂಕಿನ ಸಹಾಯವಿಲ್ಲದೇ ಸಾಲ ಕೊಡತಕ್ಕ ಶಕ್ತಿ, ಅಂತಹ ಒಂದು ಸ್ಥಿತಿಗೆ, ಅದು ಬಂದಿದೆ. ಅದಕ್ಕೆ ಕಾರಣವೇನೆಂದರೆ, ಬ್ಯಾಂಕಿನ ವ್ಯವಹಾರ ಬೆಳೆದು ಜನರಿಂದ ಡಿಪಾಜಿಟ್ ಹೆಚ್ಚು ಆಕರ್ಷಣೆ ಮಾಡತಕ್ಕ ಶಕ್ತಿಯನ್ನು ಅದು ಹೊಂದಿದೆ. ಆ ರೀತಿ ಹೊರಗಿನ ಸಹಾಯ ವಿಲ್ಲದೇ ಅದು ರೈತನಿಗೆ ಬೇಕಾದ ಹಣವನ್ನು ಒದಗಿಸಿಕೊಡತಕ್ಕ ಶಕ್ತಿ ಹೊಂದಬೇಕೆಂಬುದೇ ನಮ್ಮ ಒಂದು ಉದ್ದೇಶ. ಅಣ್ಣಾ ರಾವ್ ಗಣಮುಖಿಯವರು ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಆದಂತಹ ಚರ್ಚೆಯ ವಿಷಯ ಹೇಳಿದರು. ಸ್ವಾಮಿ, ನಾನೂ ಕೂಡ ಅಲ್ಲಿದ್ದೆ. ಸಾಮಾನ್ಯವಾಗಿ ಈ 3 ಟೈರ್ ವ್ಯವಸ್ಥೆ ಹೇಗೆ ನಡೆಯಬೇಕು, ಯಾವ ರೀತಿ ನಡೆಯಬೇಕು, ಇದರ ಅವಶ್ಯಕತೆ ಏನು ಎಂಬುದನ್ನು ಸಾಕಾದಷ್ಟು ಅಧ್ಯಯನ ಮಾಡದೇ ಹೇಳಿದಂತಹ ಮಾತುಗಳು ಅವು, ಡಿಸ್ಟ್ರಿಕ್ಟ್ ಬ್ಯಾಂಕು ಷೆಡ್ಯೂಲ್

(ಶ್ರೀ ಕೆ. ಪುಟ್ಟಸ್ವಾಮಿ)

ಬ್ಯಾಂಕಿನ ಹಾಗೆ ಬಂದವರಿಗೆ ಸಾಲ ಕೊಟ್ಟು ಮುಗಿಸುವುದು ಅಲ್ಲ. ವಿಲೇಜ್ ವರ್ಕರ್ಸ್ ಇದ್ದಾರೆ, ಆಫೀಸರ್ಸ್ ಇದ್ದಾರೆ, ರೈತರಿಗೆ ಬ್ಯಾಂಕಿನ ಒಂದು ಅಭ್ಯಾಸ ಬರುವುದಕ್ಕೆ ಪ್ರಚಾರ ಮಾಡುತ್ತಾರೆ, ಅವರಿಗೆ ಕೊಡತಕ್ಕ ಮಾರ್ಜಿನ್ ಒಂದೂವರೆ ಎರಡು ಪರ್ಸೆಂಟ್ ಆಗುತ್ತದೆ. ಈ ಪ್ರಕಾರ ಬ್ಯಾಂಕ್ ವ್ಯವಹಾರ ನಡೆಸಬೇಕಾದರೆ ಯಾವ ರೀತಿ ಮಾಡಬೇಕು ? ಷೆಡ್ಯೂಲ್ ಬ್ಯಾಂಕಿನಂತೆ ಕಮರ್ಷಿಯಲ್ ಇಂಟರೆಸ್ಟ್‌ನಿಂದ ಅವರು ಮಾಡುತ್ತಾ ಇಲ್ಲ. ಇಲ್ಲಿನ ಹಣ ವ್ಯವಸಾಯಗಾರರಿಗೆ ಹೆಚ್ಚಾಗಿ ಉಪಯೋಗವಾಗುತ್ತದೆ. ರೈತನಿಗೆ ಸಕಾಲದಲ್ಲಿ ಹಣ ಕೊಡಬೇಕೆಂಬ ಉದ್ದೇಶ ಇದರಲ್ಲಿ ಇದೆ ಎಂಬುದನ್ನು ಮರೆಯಬಾರದು. ಇದು ಇವತ್ತು ವಿಲೇಜ್ ಲೆವಲ್‌ನಲ್ಲಿ ಇರತಕ್ಕ ಸಂಸ್ಥೆ ಅನೇಕ ಮಾನ್ಯ ಸದಸ್ಯರು ಗ್ರಾಮಾಂತರದಲ್ಲಿರತಕ್ಕ ಸಹಕಾರ ಸಂಘಗಳು ಏನಿವೆ ಅವಕ್ಕೆ ಒಬ್ಬ ಕಾರ್ಯದರ್ಶಿಯನ್ನು ನೇಮಕ ಮಾಡಿಕೊಳ್ಳತಕ್ಕ ಶಕ್ತಿ ಇಲ್ಲ ಎಂದು ಹೇಳಿದರು. ಆ ಶಕ್ತಿಯನ್ನು ಒದಗಿಸಿಕೊಡಿ ಎಂದು ಹೇಳಿದರು. ಅದಕ್ಕೆ ಸರ್ಕಾರ ಏನು ಮಾಡಿದೆ ಎಂಬುದನ್ನೂ ಕೂಡ ಹೇಳುತ್ತೇನೆ. ಅದಕ್ಕೋಸ್ಕರವೇ ಯಾವ ಲಾಭವೂ ಇಲ್ಲದೇ ಮಾರ್ಜಿನ್ ಇಲ್ಲದೇ ಕಾರ್ಯ ಮಾಡು ಎಂದರೆ ಕಷ್ಟ. ಮತ್ತು ನಿರಂತರವಾಗಿ ಸರ್ಕಾರ ಸ್ಪೂನ್ ಫೀಡ್ ಮಾಡುವುದಕ್ಕೆ ಸಾಧ್ಯವಿಲ್ಲ. ಈ ಒಂದು ವ್ಯವಸ್ಥೆ ಸಮರ್ಪಕವಾಗಿ ನಡೆದರೆ ಇಂದಲ್ಲ ನಾಳೆ, ನಾಳೆ ಅಲ್ಲ ನಾಡಿದ್ದು ಇವು ಸ್ವತಂತ್ರ ಸಂಸ್ಥೆಗಳಾಗಿ ಯಾರ ಹಂಗೂ ಇಲ್ಲದೇ ಕೊನೆಗೆ ಸರ್ಕಾರದ ಹಂಗೂ ಇಲ್ಲದೆ ನಡೆಯತಕ್ಕ ಸಂಸ್ಥೆಗಳಾಗಬೇಕೆಂಬದೇ ನಮ್ಮ ಉದ್ದೇಶ. ಆ ಉದ್ದೇಶದಿಂದ ಪ್ರಯತ್ನ ಮಾಡುತ್ತಾ ಇದ್ದೇವೆ. ಕೆಳಮಟ್ಟದಲ್ಲಿರತಕ್ಕ ಸಹಕಾರಿ ಸಂಘಗಳಿಗೆ ಶಕ್ತಿ ಬರುವಂತೆ ಮಾಡಲು ಏನು ಮಾಡುತ್ತಾ ಇದ್ದೀರಿ ಎಂದು ಅಣ್ಣಾರಾವ್ ಗಣಮುಖಿಯವರು ಕೇಳಿದರು. ಸರ್ಕಾರದವರು ಡಿಸ್ಟ್ರಿಕ್ಟ್ ಬ್ಯಾಂಕಿನ ಕಡೆಗೆ ನೋಡುತ್ತಾರೆಯೋ ಹೊರತು ಗ್ರಾಮಾಂತರ ಪ್ರದೇಶಗಳ ಸಹಕಾರ ಸಂಘಗಳ ಕಡೆಗೆ ನೋಡುತ್ತಾ ಇಲ್ಲ ಅಂತ ಅಲ್ಲ. ಡಿಸ್ಟ್ರಿಕ್ಟ್ ಬ್ಯಾಂಕು ಹಳ್ಳಿಯ ಒಂದು ಬೆಳವಣಿಗೆ ಮಾಡುತ್ತಾ ಇರತಕ್ಕ ಸಮಯದಲ್ಲಿ ಈ ರೀತಿ ಅವಕ್ಕೆ ಹೆಚ್ಚಿನ ಗಮನ ಕೊಡುವುದು ಅವಶ್ಯಕ ಎಂಬುದನ್ನು ಮರೆಯಬಾರದು. ಅಲ್ಲದೆ ಗ್ರಾಮಾಂತರ ಮಟ್ಟದಲ್ಲಿ ಸಹಕಾರ ಸಂಘಗಳ ಅವಶ್ಯಕತೆಯನ್ನು ಮರೆಯಬಾರದು ಎಂಬ ಒಂದು ನೀತಿಯನ್ನು ಅನುಸರಿಸುತ್ತಾ ಇದ್ದೇವೆ ಎಂಬುದಕ್ಕೆ ಕೆಲವು ಅಂಕಿಅಂಶಗಳನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ.

Subsidy towards managerial cost for service Co-operative Societies :

1961-62ರಲ್ಲಿ 9 ಲಕ್ಷ ... 1962-63ರಲ್ಲಿ 8 ಲಕ್ಷ
1963-64ರಲ್ಲಿ 7 ಲಕ್ಷ ... 1964-65ರಲ್ಲಿ 4 ಲಕ್ಷದ 21 ಸಾವಿರ.

outright grant for bad debts for village societies :—

1962-63ರಲ್ಲಿ 5 ಲಕ್ಷ 72 ಸಾವಿರ 1963-64ರಲ್ಲಿ 3 ಲಕ್ಷ 68 ಸಾವಿರ
1964-65ರಲ್ಲಿ 2 ಲಕ್ಷ 60 ಸಾವಿರ 1965-66ರಲ್ಲಿ 5 ಲಕ್ಷ 54 ಸಾವಿರ

Share capital for service co-operatives :—

1954-65ರಲ್ಲಿ 5 ಲಕ್ಷ
1965-66ರಲ್ಲಿ 8 ಲಕ್ಷ

outrigh grant for bad debt reserve from Central Bank :

1962-63ರಲ್ಲಿ 1 ಲಕ್ಷ 10 ಸಾವಿರ, 1963-64 ರಲ್ಲಿ 1 ಲಕ್ಷ 3 ಸಾವಿರ
1964-65ರಲ್ಲಿ 2 ಲಕ್ಷ 18 ಸಾವಿರ, 1965-66ರಲ್ಲಿ 1 ಲಕ್ಷ 1 ಸಾವಿರ

ಈ ಅಂಕಿಅಂಶಗಳನ್ನು ನೋಡಿದರೆ ಶ್ರೀಮಾನ್ ಗಣಮುಖಿಯವರಿಗೆ ತಿಳಿಯುತ್ತದೆ, ಸರ್ಕಾರದವರು ವಿಲೇಜ್ ಲೆವಲ್‌ನಲ್ಲಿರತಕ್ಕ ಸಹಕಾರ ಸಂಘಗಳನ್ನು ಬೆಳವಣಿಗೆ ಮಾಡುವುದಕ್ಕೆ ಮ್ಯಾನೇಜೀರಿಯಲ್ ಕಾಸ್ಟ್, ಷೇರ್ ಕ್ಯಾಪಿಟಲ್ ಮತ್ತು ಬ್ಯಾಡ್ ಡೆಟ್ಸ್ ರಿಸರ್ವ್ ಇವನ್ನೆಲ್ಲಾ ಕೊಡುತ್ತಾ ಇದ್ದೇವೆ ಎಂಬುದು. ಈ ವಿಚಾರದಲ್ಲಿ ಇನ್ನೂ ಹೆಚ್ಚು ಸಹಾನುಭೂತಿಯನ್ನು ತಾಳುತ್ತೇವೆ. ಇದಕ್ಕೆ ಇಂಡಿಯಾ ಸರ್ಕಾರದವರು ಮತ್ತು ರಿಸರ್ವ್ ಬ್ಯಾಂಕಿನವರು ಯಥೇಚ್ಛವಾಗಿ ಸಹಾಯ ಮಾಡುತ್ತಾ ಇದ್ದಾರೆ, ಬರಲಿರುವ ವರ್ಷಗಳಲ್ಲಿ ಇನ್ನೂ ಹೆಚ್ಚಿನ ಹಣ ಸಹಾಯ ಮಾಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ರೈತನ ಕಸಬು ಲಾಭದಾಯಕವಾದ ಕಸಬಾಗಬೇಕಾದರೆ ಅವನಿಗೆ ಅವಶ್ಯಕವಾದಂತಹ ವೇಳೆಯಲ್ಲಿ ಸಮಯಕ್ಕೆ ಸರಿಯಾಗಿ ಕ್ರೆಡಿಟ್ ಸೌಲಭ್ಯ ಒದಗಿದ ಹೊರತು ಸಾಧ್ಯವಿಲ್ಲ. ಇವತ್ತು ಗ್ರಾಮಾಂತರ ಮಟ್ಟದಲ್ಲಿರತಕ್ಕ ಸಹಕಾರ ಸಂಘಗಳು ಬರೀ ಸಾಲ ಕೊಡ

ತಕ್ಕ ಸಂಸ್ಥೆಗಳಾಗಬಾರದು ಎಂಬುದೇ ನಮ್ಮ ಉದ್ದೇಶ. ಶ್ರೀಮಾನ್ ಗಣಮುಖಿಯವರು ಕ್ರೆಡಿಟ್ ಮೇಲೆ ಎಂಫಿಸಿಸ್ ಇವೆ ಎಂದು ಹೇಳತಕ್ಕ ಅಭಿಪ್ರಾಯವನ್ನು ವ್ಯಕ್ತಪಡಿಸಿದರು ಅದು ಸರಿಯಲ್ಲ. ರೈತ ಒಂದು ಕಾಳು ಬೆಳೆಯುತಕ್ಕ ಕಡೆ ಎರಡು ಕಾಳು ಬೆಳೆಯುತಕ್ಕ ಶಕ್ತಿ ಆತನಿಗೆ ಒದಗಿಸಿ ಕೊಡಬೇಕು ಎಂಬುದೇ ಇವತ್ತು ಇದರ ಉದ್ದೇಶವಾಗಿದೆ. ಅದಕ್ಕೆ ಗ್ರಾಮಾಂತರ ಮಟ್ಟದಲ್ಲಿ ಈ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಲಾಗಿದೆ. ರೈತನಿಗೆ ಅವಶ್ಯಕವಾದಂತಹ ಗೊಬ್ಬರ, ಒಳ್ಳೆಯ ಬೀಜ, ಉಪಕರಣಗಳು ಮತ್ತು ರೈತ ಬೆಳೆದಂತಹ ಸಾಮಗ್ರಿಗಳು ಮಾರಾಟವಾಗ ಬೇಕಾದರೆ ಅದಕ್ಕೆ ಸರಿಯಾದಂತಹ ಒಂದು ವ್ಯವಸ್ಥೆ ಈ ಎಲ್ಲಾ ಕಾರ್ಯವನ್ನೂ ಮಾಡತಕ್ಕ ಒಂದು ಸಂಸ್ಥೆ ಈ ಸಹಕಾರ ಸಂಸ್ಥೆ ತಾಲ್ಲೂಕು ಮಟ್ಟದಲ್ಲಿ ಇದ್ದರೆ ಮಾಡುವುದಕ್ಕಾಗುವುದಿಲ್ಲ, ಜಿಲ್ಲಾ ಮಟ್ಟದಲ್ಲಿ ಇದ್ದರಂತೂ ಸಾಧ್ಯವೇ ಇಲ್ಲ ಆದ್ದರಿಂದ ಅನಿವಾರ್ಯವಾಗಿ ಇದು ಗ್ರಾಮಾಂತರ ಮಟ್ಟದಲ್ಲೇ ಇರಬೇಕಾಗಿದೆ. ಒಂದು ವಿಚಾರವನ್ನು ಮಾತ್ರ ಸ್ವಲ್ಪ ಸ್ಪಷ್ಟಪಡಿಸುವುದಕ್ಕೆ ಅಪೇಕ್ಷೆ ಪಡುತ್ತೇನೆ. ಲಾರ್ಜ್ ಸ್ಕೇಲ್ ಸೊಸೈಟಿಗಳು ಯಶಸ್ವಿಯಾಗಿ ನಡೆಯುತ್ತಾ ಇಲ್ಲ ಎಂದು ಶ್ರೀಮಾನ್ ಕೆ. ವಿ. ಬೈರೇಗೌಡರು ಹೇಳಿದರು ಅದು ಸ್ವಲ್ಪ ಮಟ್ಟಿಗೆ ನಿಜ. ಕಾರಣವೇನೆಂದರೆ, ಗ್ರಾಮಾಂತರ ಮಟ್ಟದಲ್ಲಿ ಇರುವ ಸಹಕಾರ ಸಂಘಗಳಲ್ಲಿ ಎಲ್ಲಿ ಕಾರ್ಯಕರ್ತರು ಇದ್ದಾರೆ ಅಲ್ಲಿ ಸರಿಯಾಗಿ ನಡೆದಿದೆ. ಎಲ್ಲಿ ಅವರು ಇಲ್ಲ ಅಲ್ಲಿ ಸರಿಯಾಗಿ ನಡೆದಿಲ್ಲ. ಕೆಲಸ ಸ್ವಲ್ಪ ಕುಂಠಿತವಾಗಿದೆ. ಇವತ್ತು ತೊಡಗಿರತಕ್ಕ ಈ ಉದ್ಯಮಕ್ಕೆ ಬೇಕಾದ ಪರ್ಸನಲ್ ಗ್ರಾಮಾಂತರ ಮಟ್ಟದಲ್ಲಿ ಕ್ರಿಯೇಟ್ ಮಾಡಬೇಕು, ಅದಕ್ಕೆ ಬೇಕಾದ ಜನರನ್ನು ಇಟ್ಟು, ಅವರಿಗೆ ತರಬೇತು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇಲ್ಲದೇ ಹೋದರೆ ಎಲ್ಲಿಯ ವರೆಗೆ ಹೀಗೆ ಹೋಗುವುದಕ್ಕೆ ಆಗುತ್ತದೆ? ಈಜು ವುದಕ್ಕೆ ಬಂದ ಮೇಲೆ ನೀರಿಗೆ ಬೀಳುತ್ತೇನೆ ಎಂದರೆ ನೀರಿಗೆ ಬಿದ್ದರೆ ತಾನೆ ಈಜುಬರುವುದು? ಆ ರೀತಿ ಆಗುತ್ತದೆ. ಸರ್ಕಾರಕ್ಕೆ ನಷ್ಟವಾದರೂ ಚಿಂತೆ ಇಲ್ಲ, ಮಿಸ್‌ಅಪ್ರೋಪ್ರಿಯೇಟ್ ಆಯಿತು, ಮಿಸ್ ಮ್ಯಾನೇಜ್‌ಮೆಂಟ್ ಆಯಿತು ಎಂದು ಹೇಳಿ ದೂರು ಬಂದರೂ ಚಿಂತೆ ಇಲ್ಲ, ಸರ್ಕಾರದವರು ನೇರವಾಗಿ ರೈತರ ಕಡೆಗೆ ಗಮನ ಕೊಟ್ಟು ಗ್ರಾಮಾಂತರದಲ್ಲಿರತಕ್ಕ ರೈತರಿಗೆ ಅವಕಾಶ ಕೊಟ್ಟು ಅವರು ತಮ್ಮ ಕಾರ್ಯವನ್ನು ತಾವೇ ಮಾಡಿಕೊಳ್ಳತಕ್ಕ ಶಕ್ತಿಯನ್ನು ಬೆಳೆಸುವುದಕ್ಕೆ ಸಹಾಯ ಮಾಡಬೇಕೆಂಬುದೇ ಸರ್ಕಾರದ ಉದ್ದೇಶವಾಗಿದೆ ಎಂಬುದನ್ನು ಈ ಸಂದರ್ಭದಲ್ಲಿ ತಮಗೆ ತಿಳಿಸುತ್ತೇನೆ. ಈ ದೃಷ್ಟಿಯಿಂದ ನಾನಾದರೂ ನಿರೀಕ್ಷೆ ಮಾಡುತ್ತೇನೆ, ಶ್ರೀಮಾನ್ ಅಣ್ಣಾರಾವ್ ಗಣಮುಖಿಯವರು ಮಾಡಿದಂಥ ಆರೋಪಣೆಗಳಿಗೆ ಯಥಾ ಶಕ್ತಿ ನನ್ನ ಕೈಲಾದ ಮಟ್ಟಿಗೆ ಸಮಜಾಯಿಷಿ ಕೊಟ್ಟಿದ್ದೇನೆ.

12-30 P.M.

ಇನ್ನು ಕ್ರೆಡಿಟ್ ಕಾರ್ಪೋರೇಷನ್ ವಿಚಾರ ಹೇಳುವುದಾದರೆ ಬದಲಾದಂಥ ವ್ಯವಸ್ಥೆ ಮಾನ್ಯ ಸದಸ್ಯರ ಭಾವನೆಯಲ್ಲಿದ್ದುದು ಸರಿಯಲ್ಲ. ಕ್ರೆಡಿಟ್ ಕಾರ್ಪೋರೇಷನ್ ಮೈಸೂರು ರಾಜ್ಯಕ್ಕೆ ಅನ್ವಯವಾಗುವುದಿಲ್ಲ. ಇದು ಗುಡ್ಡಗಾಡು ಪ್ರದೇಶ ಮಲೆನಾಡು ಪ್ರದೇಶ ಅಂದರೆ ಯಾವ ಪ್ರದೇಶದಲ್ಲಿ ಸಹಕಾರ ವ್ಯವಸ್ಥೆ ಬೆಳೆದಿಲ್ಲ ಆ ಭಾಗಕ್ಕೋಸ್ಕರವಾಗಿ ಇದೆ ಯಾವ ಪ್ರದೇಶದಲ್ಲಿ ಬೆಳವಣಿಗೆಯಾಗಿಲ್ಲವೋ ಅಂಥ ಪ್ರದೇಶದಲ್ಲಿಯ ರೈತರಿಗೆ ಬೇಕಾದ ಕ್ರೆಡಿಟ್ ಫ್ಯಾಸಿಲಿಟೀಜ್ ಒದಗಿಸಿ ಕೊಡಬೇಕೆಂಬುದು ಈ ಕ್ರೆಡಿಟ್ ಕಾರ್ಪೋರೇಷನ್ ಸ್ಕೀಂ ರೂಪಿಸಿದವರ ಮನಸ್ಸಿನಲ್ಲಿ ಇದ್ದುದು.

ಇನ್ನು ಬಾವಿಗಳ ಯೋಜನೆ ಬಗ್ಗೆ ಸಂಕ್ಷೇಪವಾಗಿ ಪ್ರಸ್ತಾಪ ಮಾಡುತ್ತೇನೆ. ಸದಸ್ಯರಿಗೆ ಸಮಾಧಾನವಾಗುವ ರೀತಿಯಲ್ಲಿ ಉತ್ತರ ಹಿಂದೆ ಹೇಳಿದ್ದೇನೆ ಎಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ರಾಜ್ಯದಲ್ಲಿ ಈ ಬಾವಿಗಳ ಯೋಜನೆ ಪ್ರಾರಂಭವಾದ ಮೂರು ನಾಲ್ಕು ತಿಂಗಳ ಅವಧಿಯಲ್ಲಿ 3,000 ಬಾವಿಗಳಿಗೆ ಹಣ ಒದಗಿಸಿದೆ. ಕೆಲವು ಭಾಗದ ಸದಸ್ಯರು ಇದಕ್ಕೆ ಇನ್ನೂ ಹೆಚ್ಚು ಗಮನ ಕೊಡಬೇಕು ಎಂದು ಬಯಸುತ್ತಾರೆ. ಅದು ಸ್ವಾಭಾವಿಕವಾದುದು. ಬೆಂಗಳೂರು ವಿಭಾಗದಲ್ಲಿ ಬಾವಿ ತೆಗೆಯುವುದಕ್ಕೆ ಒಳ್ಳೇ ಅವಕಾಶವಿರುವ ಜಾಗ ಇದೆ. ಆದುದರಿಂದ ಇಲ್ಲಿ ಹೆಚ್ಚು ಬಾವಿಗಳ ಅಪೇಕ್ಷೆಪಡುತ್ತಾರೆ. 3,000 ಬಾವಿಗಳ ಪೈಕಿ 1,500 ಬಾವಿಗಳಿಗೆ ಬೆಂಗಳೂರಿನ ನಾಲ್ಕು ಜಿಲ್ಲೆಯಲ್ಲಿ ಅವಕಾಶ ಕೊಟ್ಟಿದೆ. ಇದಕ್ಕೆ ಹಣ ಒದಗಿಸಿದೆ. ಗುಲಬರ್ಗಾ ಮತ್ತು ವಿಜಾಪೂರ ಭಾಗದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಇವು ಆಗಿವೆ. 750 ಬಾವಿಗಳ ಪೈಕಿ 650 ಬಾವಿಗಳ ಕೆಲಸ ಆಗಿದೆ. ಆದರಲ್ಲಿಯೂ ಬೆಳಗಾಂವ ಡಿವಿಜನ್ನಿನಲ್ಲಿ ಹೆಚ್ಚು ಸಂಖ್ಯೆಯಲ್ಲಿ ಬಾವಿಗಳನ್ನು ತೆಗೆದಿದ್ದಾರೆ. ಮೈಸೂರು ಜಿಲ್ಲೆಯಲ್ಲಿ 600 ಬಾವಿಗಳನ್ನು ತೆಗೆದಿದ್ದಾರೆ. ಇದರಲ್ಲಿ ಇರತಕ್ಕ ತೊಂದರೆ ನಿವಾರಣೆ ಮಾಡಿದ್ದಾರೆ.

ಇನ್ನು ಪ್ರೈಮರಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ವಿಚಾರ ವಿವರವಾಗಿ ಹೇಳುವುದಕ್ಕೆ ಕಾಲಾವಕಾಶವಿಲ್ಲ. ಸಂಕ್ಷೇಪವಾಗಿ ಹೇಳುತ್ತೇನೆ. ಇದರಲ್ಲಿ ರೈತನಿಗೆ

(ಶ್ರೀ ಕೆ. ಪುಟ್ಟಸ್ವಾಮಿ)

5,000 ರೂಪಾಯಿ ಲೋನು ಕೇಳಿದ ಕೂಡಲೆ ಚೆಕ್ ಕೊಡುವುದಕ್ಕೆ ವ್ಯವಸ್ಥೆ ಮಾಡಿದೆ. ತಡವಿಲ್ಲದೆ ಐದು ನಿಮಿಷದಲ್ಲಿ ಹಣ ಕೊಡಬಹುದು. ಎಡಗೈಯಲ್ಲಿ ಅರ್ಜಿ ಹಿಡಿದು ಬಲಗೈಯಲ್ಲಿ ಚೆಕ್ ತೆಗೆದು ಕೊಳ್ಳಬಹುದು. ಈ ಸ್ಕೀಂ ಮೆರಿಟ್ ವಿಚಾರ ಒಂದು ಮಾತು ಹೇಳುತ್ತೇನೆ. ನಾಲ್ಕೈದು ವರ್ಷಗಳಲ್ಲಿ ಕೊಟ್ಟಿರತಕ್ಕಂಥ ಹಣ ನಾಲ್ಕೂವರೆ ಕೋಟಿ ರೂಪಾಯಿಯಾಗುತ್ತದೆ. 1967ನೇ ಮಾರ್ಚ್ ಆಖೈರವರೆಗೆ ಐದು ಕೋಟಿ ರೂಪಾಯಿ ಹಣಕೊಡುವ ವ್ಯವಸ್ಥೆ ಮಾಡಿದೆ. ಹತ್ತು ಹನ್ನೊಂದು ಸಾವಿರ ಬಾವಿಗಳನ್ನು ತೆಗೆಯುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಇದು ಬಹಳ ಯಶಸ್ವಿ ಯಾಗಿ ನಡೆದಿದೆ ಎಂದು ತಿಳಿಸಲು ಅಪೇಕ್ಷಿಸುತ್ತೇನೆ.

ಇನ್ನು ಸ್ಪೆಷಲ್ ಸ್ಕೀಮ್ಸ್ ಬಗ್ಗೆ ಹೇಳುತ್ತೇನೆ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮೂಲಕ ತುಂಗಭದ್ರಾ ಅಚ್ಚುಕಟ್ಟಿನಲ್ಲಿ ಆರು ಕೋಟಿ ರೂಪಾಯಿ ಕೊಡತಕ್ಕ ವ್ಯವಸ್ಥೆಮಾಡಿದೆ. ಭದ್ರಾ ಕಚ್ಚುಕಟ್ಟಿನಲ್ಲಿ ಭೂಮಿ ಹದ ಮಾಡುವುದಕ್ಕಾಗಿ 3 ಕೋಟಿ ರೂಪಾಯಿ ಕೊಡುವ ವ್ಯವಸ್ಥೆ ಮಾಡಿದೆ. ಅಡಿಕೆಗಾಗಿ ಒಂದು ಕೋಟಿ ಕೊಡಬೇಕೆಂದಿದೆ. ತೆಂಗು ಮುಂತಾದ ಬೇರೆ ಸ್ಪೆಷಲ್ ಸ್ಕೀಂ ಕಡೆಗೆ ಸಹ ಗಮನ ಕೊಡುತ್ತೇವೆ. ಇದಲ್ಲದೆ ಹರಿಜನರಿಗಾಗಿ ಮನೆಗಳನ್ನು ಕಟ್ಟುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಇದಕ್ಕಾಗಿ ಮೂರುವರೆ ಕೋಟಿ ರೂಪಾಯಿ ಒದಗಿಸಿಕೊಡುತ್ತೇವೆ. ಷೆಡ್ಯೂಲ್ ಕ್ಯಾಸ್ಟ್ ಫೆಡರೇಷನ್ ಅಸ್ತಿತ್ವಕ್ಕೆ ಬಂದಿದೆ. ಮುಂದಿನ ಏಪ್ರಿಲ್ ತಿಂಗಳಿನಿಂದ ಹರಿಜನರ ಗೃಹವಸತಿ ನಿರ್ಮಾಣಕ್ಕಾಗಿ ಹಣ ಒದಗಿಸುವುದಕ್ಕೆ ಸೂಕ್ತ ವ್ಯವಸ್ಥೆ ಮಾಡಿದೆ ಎಂದು ತಿಳಿಸಲು ಸಂತೋಷಪಡುತ್ತೇನೆ.

ಇನ್ನು ಪ್ರೊಸೆಸಿಂಗ್ ವಿಚಾರದಲ್ಲಿ ಪ್ರಶ್ನೆ ಕೇಳಿದ್ದಾರೆ. ಇದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಅಪೇಕ್ಷಿಸುವುದಿಲ್ಲ. ಆಯಿಲ್ ಇಂಡಸ್ಟ್ರೀ, ಕಾಟನ್ ಪ್ರೆಸ್ಸಿಂಗ್ ಅಂಡ್ ಜಿನ್ನಿಂಗ್ ರೈಸ್ ಮಿಲ್ ಇಂಡಸ್ಟ್ರೀ ಇವುಗಳಿಗೆ ಬೇಕಾಗುವ ಹಣ ಒದಗಿಸಿಕೊಡುತ್ತಾ ಇದ್ದೇವೆ. ಈ ಕಾರ್ಯಗಳು ನಡೆಯುತ್ತಾ ಇವೆ. ಸದ್ಯಕ್ಕೆ 3 ಶುಗರ್ ಫ್ಯಾಕ್ಟರೀಜ್ ಕೆಲಸಮಾಡುತ್ತಾ ಇವೆ. ಇನ್ನೊಂದರಲ್ಲಿ ಪ್ರೊಡಕ್ಷನ್ ಪ್ರಾರಂಭವಾಗುವುದರಲ್ಲಿದೆ. ಬೇರೆ ಶುಗರ್ ಫ್ಯಾಕ್ಟರಿ ನಿರ್ಮಾಣ ಕೆಲಸ ಆರಂಭ ವಾಗಿದೆ.

ಕಂಸ್ಯೂಮರ್ಸ್ ಬ್ಲಾಕುಗಳಿಗೆ ಒದಗಿಸತಕ್ಕಂಥ ಸೊಸೈಟಿಗಳನ್ನು ಕಳೆದ ಎರಡು ಮೂರು ವರ್ಷಗಳಲ್ಲಿ 13 ಸ್ಥಳಗಳಲ್ಲಿ ಸ್ಟೋರ್ಸ್ ಮಾಡಿವೆ. ಈ ಕಾರ್ಯ ವ್ಯಾಪ್ತಿ ಕೆಲವು ಪಟ್ಟಣಗಳಲ್ಲಿ ಮಾತ್ರ ಕೊಡಲಾಗಿದೆ. ಹೊಸಪೇಟೆಯಲ್ಲಿ ಎರಡು ಸ್ಟೋರ್ಸ್ ಮಾಡಿದೆ. ನಾಲ್ಕನೇ ಪಂಚ ವಾರ್ಷಿಕ ಯೋಜನೆ ಆರಂಭವಾದ ಮೇಲೆ ಮೈಸೂರು ರಾಜ್ಯದಾದ್ಯಂತ ಕಾರ್ಯವ್ಯಾಪ್ತಿ ವಿಸ್ತಾರ ವಾಗುತ್ತದೆ. ಪ್ರತಿಯೊಂದು ಡಿಸ್ಟ್ರಿಕ್ಟ್ ಸ್ಥಳದಲ್ಲಿ ಇರುವ ಸ್ಟೋರ್ಸ್ ಜಿಲ್ಲಾ ವ್ಯಾಪ್ತಿ ಇರತಕ್ಕಂಥ ಸಂಸ್ಥೆಯಾಗುತ್ತದೆ. ಪ್ರೈಮರಿ ಕಂಸ್ಯೂಮರ್ಸ್ ಸಲುವಾಗಿ ಈ ವ್ಯವಸ್ಥೆ ಮಾಡಲಾಗಿದೆ. ನಾಲ್ಕನೆ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ಸುಮಾರು ಶೇಕಡ 20ರಷ್ಟು ಭಾಗ ಜನ ಈ ಕಂಸ್ಯೂಮರ್ಸ್ ಕೋಆಪರೇಟೀವ್ ಸೊಸೈಟಿ ವ್ಯಾಪ್ತಿಗೆ ಒಳಗಾಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಪ್ರಯತ್ನ ನಡೆದಿದೆ. ಇದು ಚೆನ್ನಾಗಿ ನಡೆಯುತ್ತಿದೆ ಎಂದು ಹೇಳಲು ಸಂತೋಷವಾಗುತ್ತದೆ. ಕಂಸ್ಯೂಮರ್ಸ್ ಫೆಡರೇಷನ್ ಏತಕ್ಕೆ ಬೇಕು ಎಂದು ಕೇಳಿದರು. ಕಂಸ್ಯೂಮರ್ಸ್ ಫೆಡರೇಷನ್ನು ಕಳೆದ ಒಂದು ವರ್ಷದ ಅವಧಿಯಲ್ಲಿ ಬಹಳ ಉಪಯುಕ್ತವಾದ ಕೆಲಸ ಮಾಡಿದೆ. ಮೈಸೂರು ಸಂಸ್ಥಾನದಲ್ಲಿ ಜೋಳ ಸಂಗ್ರಹಣೆಗಾಗಿ, ಪಂಜಾಬಿನಿಂದ ಕಡಲೆ ತರಿಸುವುದಕ್ಕಾಗಿ, ಒರಿಸ್ಸಾದಿಂದ ರಾಗಿ ತರಿಸುವುದಕ್ಕಾಗಿ, ಮದ್ರಾಸಿನಿಂದ ಜೋಳ ತರಿಸುವುದಕ್ಕಾಗಿ ಇದು ಬಹಳ ಚೆನ್ನಾಗಿ ಕೆಲಸ ಮಾಡಿದೆ. ಈ ಸಂಸ್ಥೆ ಇರದಿದ್ದರೆ ಸಮರ್ಪಕವಾಗಿ ಕೆಲಸ ಮಾಡಲು ಆಗುತ್ತಿರಲಿಲ್ಲ. ಜಾಯಿಂಟ್ ಕೋ-ಆಪರೇಟಿವ್ ಫಾರ್ಮಿಂಗ್ ಸೊಸೈಟಿ ವಿಚಾರದಲ್ಲಿ ಹೇಳುತ್ತೇನೆ. ಚಾಮರಾಜ ನಗರದಲ್ಲಿರುವ ಒಂದು ಸೊಸೈಟಿಗೆ 40 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದು ಎಲ್ಲಿಗೆ ಹೋಯಿತು ಎಂದು ಕೆಲವರು ಕೇಳಿದರು.

ಶ್ರೀ ಕೆ. ಲಕ್ಕಪ್ಪ.—ಕುಣಿಗಲ್ ಸೊಸೈಟಿಯ ವಿಚಾರವೇನಾಯಿತು ?

ಶ್ರೀ ಕೆ. ಪುಟ್ಟಸ್ವಾಮಿ.—ಶ್ರೀಮಾನ್ ಲಕ್ಕಪ್ಪನವರು ಈ ವಿಚಾರ ಕೇಳುತ್ತಾರೆ ಎಂದು ತಿಳಿದುಕೊಂಡು ಕುಣಿಗಲ್ ಸೊಸೈಟಿಯ ವಿಚಾರದ ಒಂದು ದೊಡ್ಡ ನೋಟನ್ನು ತಂದಿದ್ದೇನೆ. ಕುಣಿಗಲ್‌ನಲ್ಲಿ 18 ಸೊಸೈಟಿಗಳು ಇವೆ. ಕಳೆದ ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ಒಂದೇ ದಿನದಲ್ಲಿ ಇವುಗಳು ರಿಜಿಸ್ಟರ್ ಆಗಿವೆ. ಅವುಗಳಿಗೆ ಹಣ ಕೊಟ್ಟಿಲ್ಲವೆಂದು ನೀವು ಹೇಳುತ್ತೀರಿ, ನೀವು ಮಾಡುವ ಕಾರ್ಯ ಸರಿಯಿದ್ದರೆ ಖಂಡಿತ ಹಣದ ಸಹಾಯವನ್ನು ಮಾಡುತ್ತೇವೆ. ಒಂದು

ವಿಚಾರದಲ್ಲಿ ಸ್ವಲ್ಪ ಸಹಾನುಭೂತಿ, ಸಹೃದಯತೆ ಇರಬೇಕು. ಈ ಜಾಯಿಂಟ್ ಕೋ-ಆಪರೇಟಿವ್ ಫಾರ್ಮಿಂಗ್ ಸೊಸೈಟಿಗೆ ಬರತಕ್ಕಂಥ ಜನರು ಯಾರೆಂದರೆ ಮಧ್ಯಮ ವರ್ಗದವರು. ಬಹಳ ಕಡಿಮೆ ಭೂಮಿ ಇರತಕ್ಕಂಥವರು ತಮ್ಮ ಭೂಮಿಯನ್ನೆಲ್ಲಾ ಒಟ್ಟಾರೆ ಸೇರಿಸಿ ಸರ್ಕಾರದವರು ಕೊಡುವ ಎಲ್ಲಾ ಸೌಕರ್ಯ, ಸೌಲಭ್ಯಗಳನ್ನೂ ಉಪಯೋಗಿಸಿಕೊಂಡು ತಮ್ಮ ಜೀವನ ಮಾಡಬೇಕು ಎನ್ನುವ ದೃಷ್ಟಿಯಿಂದ ಬರುತ್ತಾರೆ. ಅವರ ವಿಚಾರದಲ್ಲಿ ಸಹಾನುಭೂತಿ ಬೇಕು. ಅವರಿಗೆ ಲಕ್ಷ ಲಕ್ಷ ರೂಪಾಯಿಗಳನ್ನು ಕೊಡುತ್ತಿಲ್ಲ. ಒಂದು ಕೋಆಪರೇಟಿವ್ ಸೊಸೈಟಿಗೆ ಕೊಡುವುದು ಕೇವಲ 12,200 ರೂಪಾಯಿಗಳು. ಇದರಲ್ಲಿ 1,200 ರೂಪಾಯಿಗಳನ್ನು ಮೇನೇಜೀರಿಯಲ್ ಕಾಸ್ಟ್‌ಗಾಗಿ ಕೊಡುತ್ತೇವೆ. ಗೋಡೌನ್ ಕಟ್ಟಿಕೊಳ್ಳುವುದಕ್ಕೆ, ಎತ್ತುಗಳನ್ನು ಕೊಳ್ಳುವುದಕ್ಕೆ 4-5 ಸಾವಿರ ರೂಪಾಯಿಗಳನ್ನು ಕೊಡುತ್ತೇವೆ, ಉಳಿದ ಹಣವನ್ನು ಸಾಲದ ರೂಪದಲ್ಲಿ ಕೊಡುತ್ತೇವೆ. ಈ ಒಂದು ವ್ಯವಸ್ಥೆಯಲ್ಲಿ ಈ ವರ್ಗದವರು ಯಾವ ರೀತಿ ನಾವು ಕೊಟ್ಟ ಹಣವನ್ನು ಉಪಯೋಗಿಸಿ ಕೊಳ್ಳುತ್ತಾರೆ ಎಂದು ಹೇಳೋಣ. ನಾವು ಕೊಟ್ಟ ಹಣವನ್ನು ದುರುಪಯೋಗ ಮಾಡಿಕೊಳ್ಳುವ ಜನ ಬೇರೆ ಇರುತ್ತಾರೆ. ಇಂಥವರ ವಿಚಾರ ಪ್ರಸ್ತಾಪ ಮಾಡುವುದು ಬೇಡ. ಆದರೆ ಈ ಬಡ ಜನರು ಒಂದು ಎಕರೆ, ಎರಡು ಎಕರೆ ಇಟ್ಟುಕೊಂಡಿರುವುದರಿಂದ ನಾವು ಕೊಟ್ಟ ಹಣವನ್ನು ದುರುಪಯೋಗ ಮಾಡಿಕೊಳ್ಳುವುದಿಲ್ಲ. ಆ ಒಂದು ಶಕ್ತಿ ಇವರಿಗೆ ಇರುವುದಿಲ್ಲ. ಇಂಥವರಿಗೆ ಏನಾದರೂ ನಾವು ಕೊಟ್ಟ ಹಣ ದುರುಪಯೋಗ ಮಾಡಿಕೊಳ್ಳುವ ಶಕ್ತಿ ಬಂದರೆ ನಾವು ಮತ್ತು ನೀವು ಇಲ್ಲಿರುವುದಕ್ಕೆ ಸಾಧ್ಯವಿಲ್ಲವೆಂದು ನಾನು ಆಶ್ವಾಸನೆ ಕೊಡುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ವರ್ಗವಾಗಿದ್ದ ಒಬ್ಬ ಅಧಿಕಾರಿ ಬೇರೆ ಕಡೆ ಹೋಗದೆ ತುಮಕೂರಿನಲ್ಲೇ ಇದ್ದಾನೆ.

ಶ್ರೀ ಕೆ. ಪುಟ್ಟಸ್ವಾಮಿ.—ಮಾರಿ ಕಣ್ಣಿಗೆ ಎಲ್ಲರೂ ಹೋತನೆ ಎನ್ನುವ ರೀತಿ ಯಾರೋ ಒಬ್ಬರು ಅಧಿಕಾರಿ ಸರಿಯಾಗಿ ಕೆಲಸ ಮಾಡದೆ ಇದ್ದುದರಿಂದ ಬೇರೆ ಕಡೆ ವರ್ಗ ಮಾಡಿರಬಹುದು. ಆ ಅಧಿಕಾರಿ ಏನಾದರೂ ತಪ್ಪು ಮಾಡಿದ್ದರೆ ಮೇಲಿನ ಅಧಿಕಾರಿ ವಿಚಾರಣೆ ಮಾಡಿಯೇ ಮಾಡುತ್ತಾರೆ. ಆ ಅಧಿಕಾರಿ ತುಮಕೂರಿನಲ್ಲಿರುವುದು ತೊಂದರೆ ಇದ್ದರೆ ಬೆಂಗಳೂರಿಗೆ ಬೇಕಾದರೆ ಬರಲಿ ಎಂದು ಹೇಳೋಣ. ಜಾಯಿಂಟ್ ಕೋ-ಆಪರೇಟಿವ್ ಫಾರ್ಮಿಂಗ್ ಸೊಸೈಟಿಗಳು ಯಾವ ರೀತಿಯಿಂದ ಕೆಲಸ ಮಾಡುತ್ತಿವೆ ಎಂದು ನೋಡಬೇಕು. ಈ ಸೊಸೈಟಿಗಳು ಸರ್ಕಾರದ ಅನುಮತಿ ಪಡೆದು ಸ್ಕೀಮ್‌ಗಳನ್ನು ಮಾಡಬೇಕಾಗುತ್ತದೆ. Rehabilitation of landless agriculturist ಅವರಿಗೆ ಭೂಮಿ ಇರುವುದಿಲ್ಲ. ಭೂಮಿ ಇಲ್ಲದೆ ಇರತಕ್ಕಂಥ ರೈತರಿಗೆ ಭೂಮಿಯನ್ನು ಒದಗಿಸಿಕೊಟ್ಟು ಅವರು ಸರಿಯಾಗಿ ವ್ಯವಸಾಯ ಮಾಡುವುದಕ್ಕೆ ಬೇಕಾದ ಅನುಕೂಲಗಳನ್ನು ಮಾಡಿಕೊಡಬೇಕು. ಈ ರೀತಿಯ ಒಂದು ಪ್ರಯತ್ನ ನಡೆದಿದೆ. ಪ್ರಾರಂಭದಲ್ಲಿ ಎಲ್ಲಿಯಾದರೂ ದೋಷಗಳು ಇದ್ದರೆ, ಮುಗ್ಗರಿಸಿದರೆ, ತಪ್ಪುಗಳನ್ನು ಮಾಡಿದರೆ, ಸ್ವಲ್ಪವಾದರೂ ಔದಾರ್ಯವನ್ನು ಈ ವರ್ಗದ ಜನರಿಗೆ ತೋರಿಸಬೇಕು. ಈ ಒಂದು ವಿಷಯವನ್ನು ಸದಸ್ಯರುಗಳು ಮನಸ್ಸಿನಲ್ಲಿಟ್ಟುಕೊಂಡು ಮಾತನಾಡಬೇಕೇ ವಿನಾ ಬರೀ ಟೀಕೆ ಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ರುಜು ಮಾಡುವವರು ರೈತರು, ಹಣ ತಿಂದು ಹಾಕುವವರು ಬೇರೆ ಜನ.

ಶ್ರೀ ಕೆ. ಪುಟ್ಟಸ್ವಾಮಿ.—ಆ ರೈತರಿಗೆ ಅಂಥ ಬುದ್ಧಿ ಇದ್ದಿದ್ದರೆ ನಮ್ಮನ್ನು ಯಾರನ್ನೂ ಇಲ್ಲಿಗೆ ಪ್ರತಿನಿಧಿಗಳನ್ನಾಗಿ ಮಾಡಿ ಕಳಿಸುತ್ತಿರಲಿಲ್ಲ. ಚುನಾವಣೆ ಕಾಲದಲ್ಲಿ ಹಳ್ಳಿಗೆ ಹೋಗಿ ರೈತರನ್ನು ಕೇಳಿ ಅವರು ಏನು ಹೇಳುತ್ತಾರೆ ಎಂದು ಗೊತ್ತಾಗುತ್ತದೆ. ಜಾಯಿಂಟ್ ಕೋ-ಆಪರೇಟಿವ್ ಫಾರ್ಮಿಂಗ್ ಸೊಸೈಟಿಯ ವಿಚಾರದಲ್ಲಿ ರೈತರು ಏನು ಹೇಳುತ್ತಾರೆ ಎಂದು ಮಾನ್ಯ ಸದಸ್ಯರುಗಳು ತಿಳಿದುಕೊಳ್ಳಬೇಕು. ಈ ವಿಚಾರದಲ್ಲಿ ಅನೇಕ ಸಭಾ ನಿಯಮಗಳ ಶೃಂಖಲೆಗಳಿಂದ ನಾನು ಬಂಧಿತನಾಗಿರುವುದರಿಂದ ಸೂಕ್ತವಾದ ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ ಎಂದು ಒಪ್ಪುತ್ತೇನೆ. ಇದಕ್ಕೆ ಸರಿಯಾದ ಉತ್ತರವನ್ನು ಬಯಲು ಪ್ರದೇಶದಲ್ಲಿ ರೈತರುಗಳು ಕೊಡುತ್ತಾರೆ, 225 ಎಕರೆ ಜಮೀನನ್ನು ತುಂಗಭದ್ರಾ ಏರಿಯಾದಲ್ಲಿ ಎಕರೆಗೆ 500 ರೂಪಾಯಿಗಳಂತೆ ಕೊಂಡುಕೊಂಡು ಅವರಿಗೆ ಕೊಟ್ಟಿದ್ದೇವೆ.

1,000 ರೂಪಾಯಿಗಳವರೆಗೆ ಸಾಲ ಕೊಟ್ಟಿದ್ದೇವೆ. ಎತ್ತುಗಳನ್ನು ಕೊಟ್ಟಿದ್ದೇವೆ. ಅವರಿಗೆ ಬೇಕಾದ ರೀತಿಯಲ್ಲಿ ಮನೆಗಳನ್ನು ಕಟ್ಟಿಕೊಂಡು ಇರುವುದಕ್ಕೆ ಅಸ್ಪದ ಕೊಟ್ಟಿದ್ದೇವೆ. ಯಾವ ಒಂದು ವರ್ಗದ ಜನರು ನಮ್ಮ ಕಣ್ಣಿಗೆ ಇದುವರೆಗೆ ಬೀಳುತ್ತಿರಲಿಲ್ಲವೋ ಅವರಿಗೆ ಎಲ್ಲಾ ರೀತಿಯ ಅನುಕೂಲಗಳನ್ನೂ ಮಾಡಿಕೊಡುತ್ತಿದ್ದೇವೆ. ಮೈಸೂರು ದೇಶದಲ್ಲಿ ನಾವು ಆರ್ಗನೈಸ್ ಮಾಡುವ

(ಶ್ರೀ ಕೆ. ಪುಟ್ಟಸ್ವಾಮಿ)

ಜಾಯಿಂಟ್ ಕೋ-ಆಪರೇಟಿವ್ ಫಾರ್ಮಿಂಗ್ ಸೊಸೈಟಿಯಲ್ಲಿ ಶೇಕಡ 80ರಿಂದ 90ರವರೆಗೆ ಹರಿಜನರು ಲಾಭ ಪಡೆಯುತ್ತಿದ್ದಾರೆ ಎಂದು ಹೇಳುವುದಕ್ಕೆ ಹೆಮ್ಮೆಪಡುತ್ತೇನೆ. ಕೇವಲ ಭೂಮಿಯನ್ನು ಕೊಡುತ್ತಿದ್ದೇವೆ, ಸ್ವಲ್ಪ ಹಣ ಸಹಾಯ ಮಾಡುತ್ತಿದ್ದೇವೆ, ಇವರನ್ನು ಒಂದು ಕಡೆ ಸೆಟಲ್ ಮಾಡುವುದಕ್ಕೆ ಇನ್ನೂ ಸಾಧ್ಯವಾಗಲಿಲ್ಲವಲ್ಲಾ ಎಂದು ದುಃಖವಾಗುತ್ತದೆ. ಕೆಲವು ಸೊಸೈಟಿಗಳನ್ನು ನೋಡುವುದಕ್ಕೆ ಹೋದಾಗ 8—10 ಮೈಲಿ ದೂರದಿಂದ ರೈತರು ಬಂದು ತಮ್ಮ ಕಷ್ಟಸುಖಗಳನ್ನು ಹೇಳಿಕೊಂಡರು. ನಾವು ಕೊಡುವ ಭೂಮಿ ಅವನ ಮನೆಗೆ 8—10 ಮೈಲಿಗಳ ದೂರದಲ್ಲಿ ಇರುತ್ತದೆ. ನಾವು ಜಮೀನು ಕೊಟ್ಟಮೇಲೆ, ಅವನು ಮನೆಯನ್ನು ಬಿಟ್ಟು ನಾವು ಕೊಟ್ಟ ಜಮೀನಿನಲ್ಲೇ ಮನೆಯನ್ನು ಕಟ್ಟಿಕೊಂಡು ಕಷ್ಟಪಟ್ಟು ದುಡಿಯುತ್ತಿದ್ದಾರೆ. ಅವನಿಗೆ ಶಕ್ತಿ ಇದೆಯೇ ಹೊರತು, ಹಣದ ವಿಚಾರದಲ್ಲಿ ಬಹಳ ದುರ್ಬಲನಾಗಿದ್ದಾನೆ. ಅವನಿಗೆ ಹಣ ಖರ್ಚು ಮಾಡುವ ಶಕ್ತಿ ಇಲ್ಲ. ನನ್ನ ದೇಹದಲ್ಲಿರುವ ಶಕ್ತಿಯನ್ನು ದೇಶದ ಅಭ್ಯುದಯಕ್ಕಾಗಿ ಉಪಯೋಗಿಸಿಕೊಳ್ಳಿ ಎಂದು ಹೇಳುತ್ತಾನೆ. ಶ್ರೀಮಾನ್ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ನೇಮಕವಾಗಿದ್ದಂತಹ ಸಮಿತಿಯ ಶಿಫಾರಿಸಿನಮೇಲೆ ಈ ರೈತರಿಗೆ ಹಣ ಸಹಾಯವನ್ನು ಕೊಡುತ್ತಿದ್ದೇವೆ. ಈ ಲ್ಯಾಂಡ್ ಲೆಸ್ ಅಗ್ರಿಕಲ್ಚರಿಸ್ಟನ್ನು ರೀಹ್ಯಾಬಿಲಿಟೇಟ್ ಮಾಡುವುದಕ್ಕೆ ಸಂಬಂಧಪಟ್ಟ ಜಾಯಿಂಟ್ ಕೋ-ಆಪರೇಟಿವ್ ಫಾರ್ಮಿಂಗ್ ಸೊಸೈಟಿಗಳಿಗೆ ಕೊಡುವುದಕ್ಕೋಸ್ಕರ ಒಂದು ಕೋಟಿ 85 ಲಕ್ಷ ರೂಪಾಯಿಗಳ ಒಂದು ಸ್ಕೀಮನ್ನು ಮಾಡಿದ್ದೇವೆ. ಇದನ್ನು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಕಳಿಸಿದ್ದೇವೆ. ಕೇಂದ್ರ ಸರ್ಕಾರದವರು ಈ ಹಣವನ್ನು ಒದಗಿಸುತ್ತಾರೆಂದು ತಿಳಿದಿದ್ದೇವೆ. ಜಾಯಿಂಟ್ ಕೋ-ಆಪರೇಟಿವ್ ಫಾರ್ಮಿಂಗ್ ಸೊಸೈಟಿಗಳನ್ನು ಮಾಡಿದ್ದರಿಂದ ಬಹಳ ಜನರು ಇದರ ಮೂಲಕ ಸಹಾಯ ಪಡೆದು ಅನುಕೂಲ ಪಡೆದಿದ್ದಾರೆ ಎಂಬುದು ಗೊತ್ತಾಗುತ್ತದೆ. ಈ ಜನರಿಗೆ ಯಾವ ಜಾಗದಲ್ಲಿ ಜಮೀನನ್ನು ಕೊಟ್ಟಿದ್ದೇವೆಯೋ, ಆ ಜಾಗದಲ್ಲಿ ಇವರು ಮನೆಗಳನ್ನು ಕಟ್ಟಿಕೊಂಡು, ಕೊಟ್ಟಿರುವ ಜಮೀನನ್ನು ವ್ಯವಸಾಯಕ್ಕೆ ಉಪಯೋಗಿಸಿಕೊಂಡು, ಅದರಲ್ಲಿ ಲಾಭ ಪಡೆದು ಅವರ ಜೀವನವನ್ನು ಸುಗುಮವಾಗಿ ನಡೆಸಿಕೊಂಡು ಹೋಗುವಂತಹ ಕಾಲಕ್ಕೆ ನೀವಾದರೂ ಪ್ರಶಂಸೆ ಮಾಡುತ್ತೀರಿ.

ತಾವು ಬಹಳ ಉದಾರತೆಯಿಂದ ಇಷ್ಟು ಕಾಲ ಕೊಟ್ಟಿದ್ದಕ್ಕೆ ಕೃತಜ್ಞನಾಗಿದ್ದೇನೆ. ಮಾನ್ಯ ಸದಸ್ಯರಿಗೆ ಈಗ ಊಟದ ವೇಳೆಯಾಗಿದೆ, ಮಧ್ಯಾನ್ಹ ಪುನಃ ಬರಬೇಕಾಗಿದೆ; ಮಾನ್ಯ ಸದಸ್ಯರುಗಳು ಬಹಳ ಸಹನೆಯಿಂದ ನಾನು ಹೇಳಿದ್ದನ್ನು ಕೇಳಿದ್ದಕ್ಕೆ ಬಹಳ ಕೃತಜ್ಞನಾಗಿದ್ದೇನೆ. ಇಷ್ಟು ವಿಚಾರ ಹೇಳಿದಮೇಲೆ ನಾನಾದರೂ ನಿರೀಕ್ಷಣೆಮಾಡಿದ್ದೇನೆ, ಯಾವ ಸದಸ್ಯರೂ ಕೂಡ ಈ ಬೇಡಿಕೆಯ ಹಣ ಕೊಡುವುದಕ್ಕೆ ಯಾವ ವಿಧವಾದಂತಹ ತಕರಾರು ಮಾಡುವುದಿಲ್ಲ ಎಂದು.

Mr. SPEAKER.—The question is:

"That the respective sums not exceeding the amounts mentioned in the Demand Nos. 4, 26, 39 and 23 be granted to Government to defray the charges which will come in course of payment during the financial year for the period ending with 31st day of March 1967.

The motion was adopted.

As directed by the Speaker the motion for demands for grants adopted by the House are reproduced below :—

DEMAND No. 4.—Motor Vehicles Acts-Administration.

11. Taxes on Vehicles.

"That a sum not exceeding Rs. 18,43,000 be granted to the Government to defray the charges which will come in course of payment during the financial year for the period ending 31st day of March 1967, in respect of 'Taxes on Vehicles'."

DEMAND No. 26.—Labour and Employment.

38. Labour and Employment

"That a sum not exceeding Rs. 1,25,68,000 be granted to the Government to defray the charges which will come in course of payment during the financial year for the period ending 31st day of March 1967, in respect of 'Labour and Employment'."

DEMAND No. 39.—Miscellaneous.

71. Miscellaneous.

"That a sum not exceeding Rs. 5,24,34,000 be granted to the Government to defary the charges which will come in course of payment during the financial year for the period ending 31st day of March 1967, in respect of 'Miscellaneous'."

DEMAND No. 23.—Co-operation.

34. Co-operation.

"That a sum not exceeding Rs. 1,73,73,000 be granted to the Government to defray the charges which will come in course of payment during the financial year for the period ending 31st day of March 1967, in respect of 'Co-operation'."

MR. SPEAKER.—The House will now rise and meet at 2–30 P.M.

The House adjourned for Recess at Fifty Minutes past Twelve of the Clock and re-assembled at Forty-five Minutes Past Two of the Clock.

[MR. SPEAKER in the Chair]

DEMANDS FOR GRANTS

DEMAND No. 18

MR. SPEAKER.—The Hon'ble Minister for Health will kindly move the Demand No. 18.

†SRI K. NAGAPPA ALVA (Minister for Health).—Sir, on the recommendation of the Governor of Mysore, I beg to move :

"That a sum not exceeding Rs. 10,03,99,000 be granted to the Government to defray the charges which will come in course of payment during the financial year for the period ending 31st day of March 1967, in respect of 'Medical and Public Health'."

Mr. SPEAKER.—Motion moved :

"That a sum not exceeding Rs. 10,03,99,000 be granted to the Government to defray the charges which will come in course of payment during the financial year for the period ending 31st day of March 1967, in respect of 'Medical and Public Health'." ‡

If the Hon'ble Minister wants tell anything he may do so.

†**Sri K. NAGAPPA ALVA.**—Sir, Under the development programme for the III Plan, 44 schemes were proposed to be implemented and for which a total plan outlay of Rs. 432.850 lakhs was proposed. As against this outlay, an allotment of Rs. 364.00 lakhs was provided and Rs. 441.980 lakhs is the likely total expenditure that will be incurred for the whole plan period. From the figures given above it will be seen that under Revenue the expenditure has been Rs. 149.203 against an allotment of Rs. 152.875 and under capital 292.777 against an allotment of Rs. 211.125. There has been an excess expenditure of about 39 per cent over and above the allotment made under capital, which has been provided annually by re-appropriation in the P.W.D. Budget. So far as financial movement is concerned, there has been no short fall in the overall expenditure. To-day we have spent on many schemes. We have not only achieved our targets in many of the schemes and programmes, but we have gone beyond that. In some of the important schemes and the National Programmes including the diseases mainly the communicable diseases, we have achieved very great success. Small-pox eradication programme has been completed and the maintainance and the follow up programme is going on and the achievement in eradicating Malaria has been commended. With regard to the control of other diseases like Plague and Cholera, we have been able to do much. But the economic standard of the people has to go up and for that again the basis for economic progress is the standard of health. For standard of health, standard of living, economic standard is directly proportional to the health standard. The expectation of life has gone up considerably, and now the birth-rate has been coming down to certain extent. The death-rate has gone down from 45 to 16. From this, it is very clear that because of the health facilities reaching the people, especially the young men, the expectation of life has gone up; and naturally the population has increased. Population control is very, very necessary. Population control is effected through family planning; and the kingpin for all the welfare programmes has been this family planning programme ; and the achievements have been great. I am going to say some of the details while I reply. Now, I am saying these things in the beginning stages itself because what money we got was not at all enough and the money we wanted for this year was cut. And that cut has, to a certain extent, impeded the progrest that we want to achieve.

‡moved on the recommendation of the Governor

Hence, my appeal to the House, as many Hon'ble Members have already expressed in the previous years, is that the money that has been allotted is not enough for this Department. With more money, we will be able to achieve greater things. There are many achievements to our credit; about which also, I am going to say in the end. Hence, I am sure there will be unanimous acceptance of this House for this Demand.

†ಶ್ರೀ ಸಿದ್ದಯ್ಯ ಕಾಶೀಮಠ.—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ಆರೋಗ್ಯ ಮಂತ್ರಿಗಳು ವೈದ್ಯಕೀಯ ಮತ್ತು ಜನಾರೋಗ್ಯ ರಕ್ಷಣೆ ಇಲಾಖೆ ಬಗ್ಗೆ 10,03,99,000 ರೂಪಾಯಿ ಬೇಡಿಕೆಗೆ ಒಪ್ಪಿಗೆ ಪಡೆಯಲು ಸಭೆಯ ಮುಂದೆ ಇಟ್ಟಿದ್ದಾರೆ. ನಾನಾದರೂ ಕೂಡ ಒಂದೆರಡು ಸಲಹೆಗಳನ್ನು ವೈದ್ಯಕೀಯ ಮತ್ತು ಜನಾರೋಗ್ಯ ರಕ್ಷಣೆ ಇಲಾಖೆಯ ಬಗ್ಗೆ ಕೊಡುವುದಕ್ಕೆ ಅಪೇಕ್ಷೆ ಪಡುತ್ತೇನೆ. ನಮ್ಮ ರಾಜ್ಯದ ಜನ ಸಂಖ್ಯೆಯ ಪ್ರಮಾಣ ನೋಡಿದರೆ ಸರಕಾರ ವೈದ್ಯಕೀಯ ಮತ್ತು ಜನಾರೋಗ್ಯ ರಕ್ಷಣೆ ಇಲಾಖೆಗೆ ಒದಗಿಸಿರತಕ್ಕಂಥ ಹಣ ಅಷ್ಟೊಂದು ತೃಪ್ತಿಕರವಾಗಿಲ್ಲ ಎಂದು ಹೇಳುತ್ತೇನೆ. ನಮ್ಮ ದೇಶದಲ್ಲಿ ಈ ಹಿಂದೆ ಕಾಲರ, ಪ್ಲೇಗ್, ಮಲೇರಿಯಾ ಮುಂತಾದ ರೋಗಗಳು ಬಂದಾಗ್ಗ ಅವುಗಳನ್ನು ಹೋಗಲಾಡಿಸಲು ಸರಕಾರ ಪ್ರಯತ್ನ ಪಟ್ಟಿದ್ದಾರೆ. ಈ ವರ್ಷ ಬಜೆಟ್ಟಿನಲ್ಲಿ ನ್ಯಾಷನಲ್ ಮಲೇರಿಯಾ ಇರ್‍ಯಾಡಿಕೇಷನ್ ಪ್ರೋಗ್ರಾಂ ಸ್ಕೀಂ ಬಗ್ಗೆ 15 ಲಕ್ಷ ರೂಪಾಯಿ ಇಟ್ಟಿದ್ದಾರೆ. ಇತ್ತೀಚೆಗೆ ಈ ರೋಗಗಳು ಅಷ್ಟೊಂದು ತೀವ್ರಗತಿಯಲ್ಲಿ ಇರದೇ ಅವು ಕಡಿಮೆಯಾಗಿವೆ. ಆದರೆ ಕಳೆದ ಎರಡು ಮೂರು ವರ್ಷಗಳಲ್ಲಿ ಹೆಚ್ಚೆಚ್ಚು ಕಂಡು ಬರುತ್ತಿರುವುದು ಹಾರ್ಟ್ ಅಟಾಕ್, ಕ್ಯಾನ್ಸರ್, ಲೆಪ್ರಸಿ ಈ ರೋಗಿಗಳ ಸಂಖ್ಯೆ ಹೆಚ್ಚಾಗಿದೆ. ಈ ರೋಗಗಳ ಬಗ್ಗೆ ಸರಿಯಾದ ಶುಶ್ರೂಷೆ ಯಿಲ್ಲದೆ ಪ್ರಾಣ ಹಾನಿಯಾಗುವುದು ಕಂಡು ಬರುತ್ತಿವೆ. ಹೃದಯ ರೋಗದ ಬಗ್ಗೆ ಕ್ಯಾನ್ಸರ್ ಬಗ್ಗೆ ಮತ್ತು ಲೆಪ್ರಸಿ ಬಗ್ಗೆ ಯಾವ ಯಾವ ಭಾಗದಲ್ಲಿ ಎಷ್ಟು ಪ್ರಮಾಣದಲ್ಲಿ ರೋಗಿಗಳಿದ್ದಾರೆ ಯಾವ ಯಾವ ಟ್ರೀಟ್‌ಮೆಂಟ್ ಕೊಡುವುದಕ್ಕೆ ಏನೇನು ಅನುಕೂಲತೆ ಮಾಡಿ ಕೊಡಲಾಗುವುದು ಎಂದು ಕೇಳುತ್ತೇವೆ. ಕೆಲವು ಕಡೆ ಹವಾ ಗುಣದಿಂದ ಈ ರೋಗಗಳು ಗುಣಮುಖವಾಗಿವೆ. ಮಲೇರಿಯಾ ರೋಗವನ್ನು ಈಗಾಗಲೇ ನಿರ್ಮೂಲನ ಮಾಡುವುದು ಸಾಧ್ಯವಾಗಿದೆ. ಮಂಗಳೂರು ಭಾಗದಲ್ಲಿ ಆನೇ ಕಾಲು ಎಂಬ ರೋಗ ಹೆಚ್ಚಾಗಿದೆ. ಇತ್ತೀಚೆಗೆ ಹಾರ್ಟ ಅಟ್ಯಾಕ್ ಕೇಸ್‌ಗಳು ಹೆಚ್ಚು ಕಂಡು ಬರುತ್ತಿವೆ. ರಾಯಚೂರು ಡಿಸ್ಟ್ರಿಕ್ಟನಲ್ಲಿ ಲೆಪ್ರಸಿ ರೋಗ ಸಾಕಷ್ಟು ಇದೆ. ಧಾರವಾಡ ಜಿಲ್ಲೆಯಲ್ಲಿ ಕೂಡ ಈ ರೋಗ ತಲೆದೋರುತ್ತಿದೆ. ಇದು ಒಂದು ಅಂಟು ರೋಗ ಆಗಿರುವುದರಿಂದ ಬಹಳ ಹಾನಿಕಾರಕವಾಗಿದೆ. ಆದುದರಿಂದ ಈ ರೋಗ ನಿವಾರಣೆಗೆ ಆದ್ಯತೆ ಕೊಡಬೇಕೆಂದು ಹೇಳುತ್ತೇನೆ ಲೆಪ್ರಸಿ ಮತ್ತು ಕುಷ್ಟ ರೋಗಗಳಿಗೆ ಟ್ರೀಟ್‌ಮೆಂಟ್ ಕೊಡತಕ್ಕಂಥ ದೊಡ್ಡ ಆಸ್ಪತ್ರೆ ಬೆಂಗಳೂರಿನಲ್ಲಿ ಇದೆ. ಇಲ್ಲಿ ಕೂಡ ಇರತಕ್ಕ ಬೆಡ್ಸ್ ಸಂಖ್ಯೆ ಕಡಿಮೆಯಾಗಿದೆ. ಆದುದರಿಂದ ಅಲ್ಲಲ್ಲಿ ಸೆಂಟರ್ಸ್ ತೆಗೆದು ಸರಿಯಾದ ರೀತಿಯಲ್ಲಿ ಟ್ರಿಟ್‌ಮೆಂಟ್ ಕೊಡುವ ವ್ಯವಸ್ಥೆ ಮಾಡಿ, ಈ ರೋಗ ಪ್ರಸಾರವಾಗದ ಹಾಗೆ ಮಾಡಿ ಒಳ್ಳೇ ರೀತಿಯ ಟ್ರೀಟ್‌ಮೆಂಟ್ ಕೊಟ್ಟು ರೋಗ ಕಡಿಮೆಯಾಗುವ ರೀತಿಯಲ್ಲಿ ಪ್ರಯತ್ನ ಮಾಡಬೇಕು ಎಂದು ಹೇಳುವುತ್ತೇನೆ. ಲೆಪ್ರಸಿಯ ಬಗ್ಗೆ ಟ್ರೀಟ್ ಮಾಡತಕ್ಕಂಥಾದ್ದಕ್ಕೆ ಪ್ರತ್ಯೇಕವಾದ ಒಂದು ಯಾನಿಟ್ ಮಾಡಿ ಇದನ್ನು ಪ್ರತ್ಯೇಕವಾಗಿ ಟ್ರೀಟ್ ಮಾಡುವುದು ಯೋಗ್ಯ. ಈ ರೋಗಿಗಳನ್ನು ದೂರ ಇಟ್ಟು ನಿವಾರಣೋಪಾಯ ಕೈಕೊಳ್ಳಬೇಕು. ಯಾಕಂದರೆ ಇದು ಅಂಟು ರೋಗವಾಗಿದೆ. ಮುಂದೆ ಈ ರೋಗ ಹರಡದಂತೆ ಮಾಡಬೇಕು. ಧಾರವಾಡ ಜಿಲ್ಲೆಯ ರೋಣ ತಾಲ್ಲೂಕಿನಲ್ಲಿ ಒಂದು ಆಸ್ಪತ್ರೆ ತೆರೆದಿದ್ದೀರಿ. ಆದರೆ ಇದುವರೆಗೆ ಆ ಆಸ್ಪತ್ರೆಯಲ್ಲಿ ಡಾಕ್ಟರು ಇಲ್ಲ. ಅಲ್ಲಿ ಕಂಪೌಂಡರ್‌ನಿಂದ ಕೆಲಸ ನಡೆದಿದೆ- ಆಸ್ಪತ್ರೆಯಲ್ಲಿ ಡಾಕ್ಟರ್ ಇಲ್ಲದೇ ರೋಗ ನಿವಾರಣೆ ಯಾಗುವುದಕ್ಕೆ ಸಾಧ್ಯವೇ ಎಂದು ಕೇಳಬೇಕಾಗುತ್ತದೆ. ಇವತ್ತಿನ ದಿವಸ ಗಜೇಂದ್ರಗಡದಲ್ಲಿ ಅದಷ್ಟು ಮಟ್ಟಿಗೆ ಹೆಚ್ಚಿನ ವ್ಯವಸ್ಥೆ ಮಾಡಿ ಈ ರೋಗ ನಿವಾರಣೆ ಮಾಡುವುದಕ್ಕೆ ಕ್ರಮ ಕೈಕೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನು ಹಾರ್ಟ್ ಅಟ್ಯಾಕ್ಸ್ ಬಗ್ಗೆ ಹೇಳುವುದಾದರೆ ನಮ್ಮಲ್ಲಿ ಹಾರ್ಟ್ ಎಕ್ಸ್‌ಪರ್ಟ್ಸ್ ಬಹಳ ಕಡಿಮೆ ಇದ್ದಾರೆ. ಆದುದರಿಂದ ಇರತಕ್ಕಂಥ ಒಳ್ಳೇ ಡಾಕ್ಟರರನ್ನು ಡೆಪ್ಯೂಟ್ ಮಾಡಿ ಹಾರ್ಟ ಸ್ಪೆಶಾಲಿಸ್ಟ ಆಗುವಂತೆ ಉಚ್ಚ ಶಿಕ್ಷಣ ಮತ್ತು ತರಬೇತಿ ಕೊಡಿಸುವ ವ್ಯವಸ್ಥೆ ಮಾಡಬೇಕು. ಮತ್ತು ಹೆಚ್ಚು ಸೆಂಟರ್ಸ್ ತೆಗೆಯಬೇಕು. ಬೆಂಗಳೂರು ನಗರದಲ್ಲಿ ಎಕ್ಸ್‌ಪರ್ಟ್ಸ್ ಇದ್ದಾರೆ. ಬೇರೆ ಕಡೆ ಎಕ್ಸ್‌ಪರ್ಟ್ಸ್ ಇಲ್ಲ. ಕೆಲವು ಕಡೆ ಡಾಕ್ಟರ್ಸ್ ಇದ್ದರೂ ಕೂಡ ಆಸ್ಪತ್ರೆಯಲ್ಲಿ ಇದಕ್ಕಾಗಿ ಬೇಕಾಗುವ ಸಲಕರಣೆಗಳಿಲ್ಲದೆ ಇರುವುದರಿಂದ ತೊಂದರೆಯಾಗುತ್ತದೆ ಹೆಚ್ಚು ಜನ ಈ ರೋಗಕ್ಕೆ ತುತ್ತಾಗಿದ್ದಾರೆ.

(ಶ್ರೀ ಸಿದ್ದಯ್ಯ ಕಾಶೀಮಠ್)

ಇದಕ್ಕೆ ಬೇಕಾಗುವ ಔಷಧೋಪಚಾರದ ವ್ಯವಸ್ಥೆ ಮತ್ತು ಸಲಕರಣೆಗಳು ಇರಬೇಕಾದುದು ಅಗತ್ಯ. ಯಾವ ಹೊತ್ತಿನಲ್ಲಾದರೂ ಈ ರೋಗ ಬರುತ್ತದೆ. ಈ ರೋಗದ ಬಗ್ಗೆ ಜನರಲ್ಲಿ ಬಹಳ ಹೆದರಿಕೆ ಉಂಟಾಗಿದೆ. ಆದುದರಿಂದ ಅಲ್ಲಲ್ಲಿ ಇರತಕ್ಕ ದೊಡ್ಡ ಆಸ್ಪತ್ರೆಗಳಲ್ಲಿ ಜಿಲ್ಲೆಗೆ ಒಬ್ಬ ಎಕ್ಸಪರ್ಟ ಇಡಲು ಸರಕಾರ ಪ್ರಯತ್ನ ಮಾಡಬೇಕು.

ಇನ್ನು ಕ್ಯಾನ್ಸರ್ ರೋಗದ ಬಗ್ಗೆ ಬೆಂಗಳೂರಿನಲ್ಲಿ ಮಾತ್ರ ಒಂದು ಆಸ್ಪತ್ರೆ ಇದೆ. ಹುಬ್ಬಳ್ಳಿ ಗುಲಬುರ್ಗಾ ಮೊದಲಾದ ಪಟ್ಟಣಗಳಿಂದ ಇಲ್ಲಿಗೆ ಬರಬೇಕಾಗುತ್ತದೆ. ರಾಜ್ಯದ ಮೂಲೆ ಮೂಲೆ ಯಿಂದ ಬೆಂಗಳೂರಿಗೆ ಬಂದು ಟ್ರೀಟ್‌ಮೆಂಟ್ ತೆಗೆದುಕೊಳ್ಳಬೇಕಾಗುತ್ತವೆ. ಹುಬ್ಬಳ್ಳಿಯಲ್ಲಿ ದೊಡ್ಡ ಆಸ್ಪತ್ರೆ ಕೆ. ಎಂ. ಸಿ. ಇದೆ, ಅಲ್ಲಿ ಎಕ್ಸಪರ್ಟ್ಸ್ ಇದ್ದಾರೆ. ಅಲ್ಲಿ ಸಲಕರಣೆಗಳನ್ನು ಒದಗಿಸಿ ಕೊಡಬೇಕು. ನಾಲ್ಕೂ ಡಿವಿಜನ್ನಿನಲ್ಲಿ ಪ್ರತಿಯೊಂದು ಕಡೆ ಕ್ಯಾನ್ಸರ್ ರೋಗದ ಬಗ್ಗೆ ಟ್ರೀಟ್‌ಮೆಂಟ್ ಕೊಡುವ ವ್ಯವಸ್ಥೆ ಮಾಡಿ ಅದಕ್ಕೆ ಬೇಕಾಗುವ ಎಲ್ಲ ಸಲಕರಣೆ ಒದಗಿಸಿಕೊಡಬೇಕು ಎಂದು ಹೇಳು ತ್ತೇನೆ. ಬೆಂಗಳೂರಿನಲ್ಲಿ ಸರಿಯಾದ ಒಂದು ವ್ಯವಸ್ಥೆ ಇಲ್ಲದೇ ಇರುವುದರಿಂದ ಸರಿಯಾದ ಟ್ರೀಟ್ ಮೆಂಟ್ ಸಿಕ್ಕದೆ ರೋಗಿಗಳು ಸಾಯುತ್ತಾರೆ. ಈ ಕಾರಣದ ಮೂಲಕ ರೋಗಿಗಳು ಬೇರೆ ಕಡೆ ಹೋಗಿ ಇಲ್ಲವೆ ಮುಂಬಯಿಗೆ ಹೋಗಿ ಟ್ರೀಟ್‌ಮೆಂಟ್ ತೆಗೆದುಕೊಳ್ಳಬೇಕಾದ ಪ್ರಮೇಯ ಬಂದಿದೆ. ಆದುದರಿಂದ ಇದರ ಬಗ್ಗೆ ಆರೋಗ್ಯ ಸಚಿವರು ನಿಗಾವಹಿಸಬೇಕು ಎಂದು ಸಲಹೆ ಮಾಡುತ್ತೇನೆ.

ಈ ಮೂರು ರೋಗಗಳು ಅಂದರೆ ಹಾರ್ಟ್ ಅಟ್ಯಾಕ್, ಲೆಪ್ರಸಿ ಮತ್ತು ಕ್ಯಾನ್ಸರ್ ಈ ಮೂರು ರೋಗ ನಿವಾರಣೋಪಾಯಕ್ಕೆ ಹೆಚ್ಚು ಹಣ ಈ ಬಜೆಟ್ಟಿನಲ್ಲಿ ಒದಗಿಸಿ ಕೊಟ್ಟಿಲ್ಲ. ಈಗಲಾದರೂ ಸಲಕರಣೆ ಒದಗಿಸಿ ಕೊಟ್ಟು ಎಕ್ಸ್‌ಪರ್ಟ್ಸ್ ಆಗುವುದಕ್ಕಾಗಿ ಡಾಕ್ಟರರನ್ನು ಡೆಪ್ಯೂಟ್ ಮಾಡಿ ಈ ರೋಗನಿವಾರಣೋಪಾಯ ಕೈಕೊಳ್ಳಲು ಸಲಹೆ ಮಾಡುತ್ತೇನೆ.

ಇನ್ನು ಟಿ. ಬಿ. ಒಂದು ದೊಡ್ಡ ಅಂಟು ರೋಗ. ಇದಕ್ಕೆ ತಕ್ಕ ಶುಶ್ರೂಷೆ ನಮ್ಮ ರಾಜ್ಯದಲ್ಲಿ ದೊರೆಯುತ್ತಿಲ್ಲ. ಇದ್ದ ಆಸ್ಪತ್ರೆಗಳಲ್ಲಿ ಸಲಕರಣೆಗಳಿಲ್ಲ. ಯೋಗ್ಯ ಉಪಚಾರ ಇಲ್ಲ. ಡಾಕ್ಟರ್ಸ್ ಇಲ್ಲದ ಮೂಲಕ ರೋಗಿಗಳು ನಿರಾಶೆ ಹೊಂದುವ ಪ್ರಮೇಯ ಬಂದಿದೆ. ಇದನ್ನು ಅನೇಕ ಸಲ ಹೇಳಿದೆ. ಈ ಬಾಬಿಗೆ ಖರ್ಚು ಮಾಡತಕ್ಕಂಥ ಹಣ ಸರಿಯಾದ ರೀತಿಯಲ್ಲಿ ಉಪಯೋಗವಾಗ ಬೇಕು. ಟಿ. ಬಿ. ಎಕ್ಸಪರ್ಟ್ಸ್‌ರಿಗೆ ಬೇಕಾಗುವ ಸಲಕರಣೆಗಳನ್ನು ಕೊಟ್ಟು ಹುಬ್ಬಳ್ಳಿಯಲ್ಲಿ ಬೆಂಗಳೂರಿನಲ್ಲಿ ಇದರ ಬಗ್ಗೆ ಒಂದು ಹೆಚ್ಚಿನ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

3-00 P. M.

ಇನ್ನೊಂದು ಪ್ರಾಮುಖ್ಯವಾದ ವಿಷಯ. ಇವತ್ತಿನ ದಿವಸ ಗದಗ್ ಬಳಿ ಮಾಲಸಮುದ್ರದಲ್ಲಿರುವ ಮಹಾತ್ಮ ಗಾಂಧಿ ಕ್ಷಯರೋಗದ ಆಸ್ಪತ್ರೆಯನ್ನು ಖಾಸಗೀಯವರು ನಡೆಸುತ್ತಾ ಇದ್ದಾರೆ. ಅಲ್ಲಿ ಕಟ್ಟಡವಿದೆ, ಡಾಕ್ಟರುಗಳು ಇದ್ದಾರೆ ದೀಪದ ವ್ಯವಸ್ಥೆ ಇದೆ, ನೀರಿನ ಸೌಕರ್ಯ ಸಹ ಇದೆ. ಇಷ್ಟೆಲ್ಲಾ ಇದ್ದರೂ ಕೂಡ ಅದರ ಮೇಂಟೆನ್‌ನ್ಸ್ ಮಾಡುವುದು ಖಾಸಗಿಯವರಿಗೆ ಬಹಳ ಕಷ್ಟ ವಾಗುತ್ತದೆ. ಅಲ್ಲಿ ಯಾವ ತೊಂದರೆಯೂ ಸಹ ಇಲ್ಲದೆ, ನೂರಾರು ಜನಗಳಿಗೆ ಉಪಕಾರವಾಗ ಬೇಕಾದರೆ ಅದು ಟಿ. ಬಿ. ಪೇಷೆಂಟ್ಸ್ ವಿಶೇಷವಾಗಿರುವ ಕಾರಣ ಅದನ್ನು ಖಾಸಗೀಯವರಿಂದ ಸರ್ಕಾರ ಪಡೆದುಕೊಂಡು ಅದನ್ನು ಇನ್ನೂ ಸರಿಯಾದ ರೀತಿಯಲ್ಲಿಡುವುದಾದರೆ ಅಲ್ಲಿನ ಜನಗಳಿಗೆ ಹೆಚ್ಚು ಅನುಕೂಲವಾಗುತ್ತದೆ. ನಾನು ತಿಳಿದುಕೊಂಡಿರುವ ಹಾಗೆ ಈ ಆಸ್ಪತ್ರೆಯ ಆಡಳಿತ ವರ್ಗದವರು ಸರ್ಕಾರದವರನ್ನು ಈ ವಿಚಾರವಾಗಿ ಕೇಳಿಕೊಂಡಿದ್ದಾರೆಂದು ನಾನು ಭಾವಿಸುತ್ತೇನೆ. ಅವರಿಂದ ಇನ್ನು ಮುಂದೆ ನಡೆಸಲಾಗುವುದಿಲ್ಲ. ಸರ್ಕಾರದವರೇ ಇದರ ಆಡಳಿತವನ್ನು ನಡೆಸ ಬೇಕೆಂದೂ, ಆಗ ಅದರಿಂದ ಜನಗಳಿಗೆ ಸದುಪಯೋಗವಾಗುತ್ತದೆಂದು ಅಲ್ಲಿರತಕ್ಕ ಟಿ. ಬಿ. ಪೇಷಂಟ್ಸೇ ಕೇಳಿರಬೇಕೊದು ನಾನು ತಿಳಿಯುತ್ತೇನೆ. ಆದ್ದರಿಂದ ಸರ್ಕಾರದವರು ಅಲ್ಲಿರತಕ್ಕ ಕಟ್ಟಡಗಳನ್ನು ಪುಕ್ಕಟೆಯಾಗಿ ಪಡೆದುಕೊಂಡು ಕೇವಲ ಅದರ ಆಡಳಿತವನ್ನು ನಡೆಸುವುದಕ್ಕೆ ತೀವ್ರ ವಾಗಿ ಒಂದು ಠರಾವು ಮಾಡಿ ಅದರ ಮೇಂಟೆನ್‌ನ್ಸ್ ಸರ್ಕಾರದವರೇ ವಹಿಸಿಕೊಳ್ಳಬೇಕೆಂಬುದಾಗಿ ನಾನು ಹೇಳುತ್ತೇನೆ.

ಇನ್ನು ಡಾಕ್ಟರುಗಳ ಬಗ್ಗೆ ಹೇಳುವುದಾದರೆ, ಈಗ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನೇನೊ ಈ ರಾಜ್ಯದ ತುಂಬಾ ತೆರೆದಿದ್ದಾರೆ. ಸರ್ಕಾರದವರೇ ಒಪ್ಪಿರುವ ಹಾಗೆ ಡಾಕ್ಟರುಗಳ ಕೊರತೆ ಬಹಳವಾಗಿದೆ. ಈ ಆರೋಗ್ಯ ಕೇಂದ್ರಗಳಲ್ಲಿ ಅನೇಕ ಕಡೆಗಳಲ್ಲಿ ಕಾಂಪೌಂಡರುಗಳು ಇಲ್ಲದೇ ಇರುವ ಪ್ರಮೇಯಗಳು ಬಹಳ ಇವೆ. ಆದರೆ ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನರಿಗೆ ಆರೋಗ್ಯ ಸೌಲಭ್ಯಗಳ ಬಗ್ಗೆ ಅನುಕೂಲಗಳನ್ನು ಕಲ್ಪಿಸುವುದರಲ್ಲಿ ಸರ್ಕಾರದವರು ಯಾವ ರೀತಿಯಲ್ಲಿ ವ್ಯವಸ್ಥೆಮಾಡಬೇಕೆಂಬುದು ಮುಖ್ಯ. ಡಾಕ್ಟರುಗಳು ಅಲ್ಲಿ ಹೋಗಿ ಕೆಲಸ

ಮಾಡುವಾಗ ಏನೇನು ಸೌಲತ್ತುಗಳನ್ನು ಅಲ್ಲಿನ ಜನರಿಗೆ ಒದಗಿಸಬೇಕೆಂಬುದನ್ನು ವಿಚಾರ ಮಾಡಿದರೆ ಬಹಳ ಚೆನ್ನಾಗಿರುತ್ತದೆ. ಅವರಿಗೆ ಎಲ್ಲಾ ರೀತಿಯಲ್ಲಿ ಸೌಕರ್ಯಗಳನ್ನು. ಕೊಟ್ಟರೆ ಹಳ್ಳಿಯ ಜನರಿಗೆ ಒಂದು ಆಕರ್ಷಣೆವುಂಟಾಗುತ್ತದೆ. ಈ ಬಗ್ಗೆ ಸರ್ಕಾರದವರು ವಿಚಾರ ವಿನಿಮಯಮಾಡಬೇಕು. ಗ್ರಾಮಾಂತರ ಪ್ರದೇಶಗಳಿಗೆ ಹೋಗತಕ್ಕ ಡಾಕ್ಟರುಗಳಿಗೆ ಕೊಡುವ ಅಲೋಯನ್ಸ್ 25ರಿಂದ 50 ರೂಪಾಯಿಗಳಾಗಿರುವುದರಿಂದ ಅದನ್ನು ಇವತ್ತು 100 ರೂಪಾಯಿಗಳಿಗೆ ಜಾಸ್ತಿಮಾಡಿದರೆ ಬಹಳ ಒಳ್ಳೆಯದು. ಅವರು ಹೆಚ್ಚಿಗೆ ಸೇವೆ ಮಾಡುತ್ತಿರುವ ಕಾಲದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಖರ್ಚುಮಾಡುವ ಹಣ ಸದ್ವಿನಿಯೋಗವಾಗುವ ಹಾಗೆ ಮಾಡಬೇಕು. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿರತಕ್ಕ ಡಾಕ್ಟರುಗಳಿಗೆ ಸರಿಯಾದ ಅಲೊಯನ್ಸನ್ನು ಕೊಟ್ಟು ಅವರು ಕೇಳತಕ್ಕ ಜಾಗಗಳಿಗೆ ವರ್ಗಮಾಡಬೇಕು. ಬಹಳ ದೂರ ಅವರ ವರ್ಗಗಳನ್ನು ಮಾಡಬಾರದು. ಉದಾಹರಣೆಗೆ ಹೇಳುವುದಾದರೆ ಕೋಲಾರದಲ್ಲಿರತಕ್ಕವರನ್ನು ಗುಲ್ಬರ್ಗಾಕ್ಕೆ ಹಾಕಬಾರದು. ಅವರಿಗೆ ಈ ರೀತಿಮಾಡುವುದರಿಂದ ಬುದ್ಧಿ ಕೆಡುತ್ತದೆ. ಮೆಂಟಲ್ ಪವರ್ ಕಡಿಮೆಯಾಗಿಹೋಗುತ್ತದೆ. ವಿಪರೀತ ತೊಂದರೆ ಪಟ್ಟುಕೊಂಡು ಔಷಧೋಪಚಾರವನ್ನು ಮಾಡಬೇಕಾಗುತ್ತದೆ. ಅವರಿಗೆ ಬೇಡವಾದಂತಹ ಸ್ಥಳವನ್ನು ಒದಗಿಸಿಕೊಟ್ಟರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಅದರಿಂದ ಒಂದು ದೊಡ್ಡ ಹಾನಿ ತಟ್ಟುತ್ತದೆ. ಈ ವಿಚಾರದಲ್ಲಿ ಸರ್ಕಾರದವರು ಕಟ್ಟುನಿಟ್ಟಾದ ನಿಯಮಗಳನ್ನು ಹಾಕಿ ಯಾರಮೇಲೆ ಏನೂ ಅಲಿಗೇಷನ್ಸ್ ಇರುವುದಿಲ್ಲವೋ ಅಂತಹ ಡಾಕ್ಟರುಗಳನ್ನು ಈ ಪ್ರಾಥಮಿಕ ಆರೋಗ್ಯಕೇಂದ್ರಗಳಲ್ಲಿ ಇಡಬೇಕು. ಅಗಾಗ್ಗೆ ಅವರ ವರ್ಗಾವರ್ಗಿಗಳನ್ನು ಮಾಡುವ ಹಾಗೆ ಇರಬಾರದು. ಅವರಿಗೆ ಸಾಧ್ಯವಾದರೆ ಅವರೇ ಒಪ್ಪಿಕೊಂಡು ಇರಬಹುದು.

ಇನ್ನು ಡಾಕ್ಟರುಗಳ ಸಂಬಳಸಾರಿಗೆ ವಿಷಯ. ಡಾಕ್ಟರುಗಳಿಗೆ ಕೊಡತಕ್ಕ ವೇತನ ಬಹಳ ಕಡಮೆ. ಅವರಿಗೆ ಒಂದು ಆಕರ್ಷಣೀಯವಾದ ಸಂಬಳ ಸಾರಿಗೆ ಕೊಟ್ಟರೆ ಬಹಳ ಚೆನ್ನಾಗಿರುತ್ತದೆ. ಆಗ ಬೇರೆ ರಾಜ್ಯಗಳವರು ನಮ್ಮಲ್ಲಿಗೆ ಬರುತ್ತಾರೆ. ಅವರು ಆರೋಗ್ಯ ಸೇವೆ ಮಾಡಬಹುದು, ಎಂಬುದಾಗಿ ಅವರ ಒಂದು ವರದಿಯಲ್ಲಿಯೇ ಹೇಳಿದ್ದಾರೆ. ಈಗಾಗಲೇ ಸಾಕಷ್ಟು ಡಾಕ್ಟರುಗಳನ್ನು ಪರದೇಶಗಳಲ್ಲಿ ಹೋಗಿ ಹೆಚ್ಚಿನ ಶಿಕ್ಷಣ ಪಡೆಯಲು ಕಳುಹಿಸುತ್ತಿದ್ದೇವೆ. ಅದರಲ್ಲಿ ಎಕ್ಸ್‌ಪರ್ಟ್ಸ್ ಆಗಿ ಬರಲು ಡೆಪ್ಯೂಟ್ ಮಾಡುತ್ತಿದ್ದೇವೆಂದು ಹೇಳಿದರು. ಇವರು ಆ ರೀತಿ ಪರದೇಶಕ್ಕೆ ಕಳುಹಿಸಿದಂತಹವರ ಪೈಕಿ ಎಷ್ಟು ಮಂದಿ ವಾಪಸ್ಸು ಬಂದಿದ್ದಾರೆ? ಒಂದುವೇಳೆ ವಾಪಸ್ಸು ಬಾರದೇ ಇರತಕ್ಕವರ ಮೇಲೆ ಇವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ? ಇವತ್ತು ಯಾವನು ಪರದೇಶಕ್ಕೆ ಹೋಗುತ್ತೇನೆಂದು ಹೇಳುತ್ತಾನೋ ಅಂತಹವನನ್ನು ಇವರು ಕಳುಹಿಸಲಿಲ್ಲ. ಯಾರು ಸಚಿವರಾಗಿರಬೇಕೆಂದು ಹೇಳುತ್ತಾರೋ ಅಂತಹವರನ್ನು ಕಳುಹಿಸುತ್ತಾರೆ. ಪರದೇಶಗಳಿಗೆ ಹೋದಂಥ ಡಾಕ್ಟರುಗಳು ಬಾರದೇ ಇರುವ ಪ್ರಮೇಯಗಳು ಬಹಳವಾಗಿರುವಾಗ ಸರ್ಕಾರದವರು ಕಳುಹಿಸುವಂತಹ ಪ್ರದೇಶಗಳಿಗೆ ಡಾಕ್ಟರುಗಳು ಹೋಗದೇ ಇದ್ದರೆ ಅಂತಹವರ ಮೇಲೆ ಸರ್ಕಾರದವರು ಕಟ್ಟುನಿಟ್ಟಾಗಿ ತಕ್ಕ ಕ್ರಮವನ್ನು ಯಾವರೀತಿಯಲ್ಲಿ ತೆಗೆದುಕೊಂಡಿದ್ದಾರೆಂಬುದನ್ನು ಮುಂದೆ ತಿಳಿಸಬೇಕೆಂದು ನಾನು ಹೇಳುತ್ತೇನೆ.

ಇನ್ನು ಹುಬ್ಬಳ್ಳಿಯಲ್ಲಿ ಒಂದು ದೊಡ್ಡದಾದ ಕರ್ಣಾಟಕ ಮೆಡಿಕಲ್ ಆಸ್ಪತ್ರೆಯನ್ನು ತೆರೆದಿದ್ದಾರೆ. ಅಲ್ಲಿರತಕ್ಕ ಎಕ್ವಿಪ್‌ಮೆಂಟ್ಸ್ ಸರಿಯಾಗಿವೆ, ಬೆಡ್ಸ್ ಸರಿಯಾಗಿವೆ. ಆದರೆ ಡಾಕ್ಟರುಗಳು ಕಡಮೆ ಇದ್ದಾರೆ. ಅಲ್ಲಿರತಕ್ಕ ಅದ್ವಾನವೆಂದರೆ ಡಾಕ್ಟರುಗಳಿಗೆ ವರ್ಕ್‌ಲೋಡ್ ಜಾಸ್ತಿಯಾಗಿದೆ. ಅದ್ದರಿಂದ ಕೂಡಲೇ ಡಾಕ್ಟರುಗಳ ಸಂಖ್ಯೆಯನ್ನು ಹೆಚ್ಚು ಮಾಡಬೇಕು ಅಲ್ಲಿ ಅಪರೇಷನ್ನಿಗೆ ಬೇಕಾದಂಥ ಸಲಕರಣೆಗಳನ್ನು ಬಹಳ ಕಡಮೆಯಾಗಿ ಕೊಡುತ್ತಿದ್ದಾರೆ. ಇನ್ನೊಂದು ಸಣ್ಣ ವಿಚಾರ. ಡಾಕ್ಟರುಗಳಿಗೆ ಈ ಅಪರೇಷನ್ ಥಿಯೇಟರ್‌ನಲ್ಲಿ ಕೆಲಸಮಾಡುವಾಗ ಕೈಗೆ ಹಾಕಿಕೊಳ್ಳತಕ್ಕ ಚೀಲಗಳು ಇಲ್ಲದೇ ಇರುವುದನ್ನು ನಾನು ಕಂಡಿದ್ದೇನೆ. ಅದು ಒಂದು ಸಣ್ಣ ಸಂಗತಿಯಾದರೂ ಕೂಡ ಡಾಕ್ಟರುಗಳಿಗೆ ಅವು ಪ್ರಾಮುಖ್ಯವಾಗಿ ಬೇಕಾಗಿವೆ. ಅಪರೇಷನ್ ಮಾಡುವಾಗ ಅವು ಇಲ್ಲದೇ ಹೋದರೆ ಡಾಕ್ಟರುಗಳಿಗೆ ಬಹಳ ತೊಂದರೆಯಾಗುತ್ತದೆ ಅದ್ದರಿಂದ ಈ ವಿಚಾರದ ಬಗ್ಗೆ ತಕ್ಕ ಕ್ರಮವನ್ನು ಸರ್ಕಾರದವರು ಕೂಡಲೇ ಕೈಗೊಳ್ಳಬೇಕು.

ಇನ್ನು ಆಸ್ಪತ್ರೆಗಳಿಗೆ ಬೆಡ್ ಷೀಟುಗಳನ್ನು ಕೊಡುವ ವಿಷಯದಲ್ಲಿ ಹೇಳುವುದಾದರೆ, ಅನೇಕ ಆಸ್ಪತ್ರೆಗಳಲ್ಲಿ ಬೆಡ್‌ಷೀಟುಗಳಿಗೆ ಖಾದಿ ಬಟ್ಟೆಗಳನ್ನು ಹಾಕುತ್ತಾರೆ. ನಯವಾಗಿರತಕ್ಕ ಬೆಡ್ ಷೀಟುಗಳನ್ನು ಹಾಕಿದರೆ ಒಳ್ಳೆಯ ರೀತಿಯಲ್ಲಿ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಖಾದಿಬಟ್ಟೆ ಬಹಳ ಒರಟಾಗಿರುತ್ತದೆ. ಅದರಿಂದ ರೋಗಿಗಳಿಗೆ ಹುಣ್ಣು ಆಗುವ ಪರಿಸ್ಥಿತಿ ಬರುತ್ತದೆ. ಮತ್ತು ಅದು ಹೆಚ್ಚು ಬೆಲೆಯಾದುವಾಗಿರುತ್ತದೆ. ಅದ್ದರಿಂದ ಖಾದಿ ಬೆಡ್ ಷೀಟುಗಳ ಬದಲಾಗಿ ನಯವಾದ ಬಟ್ಟೆಗಳನ್ನು ಅಲ್ಲಿ ಒದಗಿಸಬೇಕು. ಒಟ್ಟಿನಲ್ಲಿ ಖಾದಿ ಬಟ್ಟೆಗಳನ್ನು ಕೂಡಲೇ ತೆಗೆದುಹಾಕಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಖಾದಿ ಬಟ್ಟೆಯನ್ನು ಬೆಡ್ ಷೀಟಿಗಾಗಿ ಉಪಯೋಗಿಸಿದರೆ ಮಾನ್ಯ ಸದಸ್ಯರು ಗಾಯವಾಗುತ್ತದೆಂದು ಹೇಳಿದ್ದು ಸರಿಯಲ್ಲ. ಅದನ್ನು ಬದಲಾಯಿಸಿ ಸಾದಾ ಬೆಡ್ ಷೀಟ್ ಬಟ್ಟೆಗಳನ್ನು ಹಾಕಿ ಎಂದು ಮಾನ್ಯ ಸದಸ್ಯರು ಹೇಗೆ ಹೇಳುತ್ತಾರೋ ನನಗೆ ಗೊತ್ತಿಲ್ಲ.

ಶ್ರೀ ಸಿದ್ಧಯ್ಯ ಕಾಶೀಮಠ್.—ಇನ್ನು ಔಷಧಿಗಳ ವಿಷಯವಾಗಿ ಹೇಳುವುದಾದರೆ, ಈಗ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಕೊಡುವ ಔಷಧಿಗಳು ಏನೇನೂ ಸಾಲದು. ಕೇವಲ ಎರಡು ಮೂರು ತಿಂಗಳುಗಳಿಗೇ ಮುಗಿಯುತ್ತದೆ. ಈ ವಿಚಾರದಲ್ಲಿ ಎಲ್ಲಾ ಆಸ್ಪತ್ರೆಗಳಿಂದ ದೂರುಗಳು ಬಂದರೂ ಮೇಲಿಂದಮೇಲೆ ರೊಕ್ಕ ಇಲ್ಲವೆಂದು ಸರ್ಕಾರದವರು ಹೇಳುತ್ತಾರೆ. ಯಾವುದೇ ರೀತಿಯಿಂದಾದರೂ ಮನುಷ್ಯನಿಗೆ ಮುಖ್ಯವಾಗಿ ಬೇಕಾಗಿರತಕ್ಕ ಆರೋಗ್ಯವನ್ನು ಕಾಪಾಡಲು ಸರ್ಕಾರದವರು ಹೆಚ್ಚಿನ ರೀತಿಯಲ್ಲಿ ಆಸ್ಪತ್ರೆಗಳಿಗೆ ಔಷಧಿಗಳನ್ನು ಹಂಚಬೇಕು. ಇನ್ನು ಆಸ್ಪತ್ರೆಯಲ್ಲಿ ಕೊಡತಕ್ಕ ಆಹಾರ ಪ್ರಮಾಣವನ್ನು ನೋಡಿದರೆ ಇವತ್ತಿನದಿವಸ ರೋಗಿಗಳಾದವರು ಗುಣ ಹೊಂದಲಿಕ್ಕೆ ಹಾಗೂ ಚೈತನ್ಯ ಪಡೆಯುವುದಕ್ಕೆ ತಕ್ಕಷ್ಟು ಆಹಾರವನ್ನು ಕೊಡುತ್ತಿಲ್ಲ. ಆದ್ದರಿಂದ ಆದಷ್ಟುಮಟ್ಟಿಗೆ ಆಹಾರದ ಪ್ರಮಾಣವನ್ನು ಹೆಚ್ಚುಮಾಡಬೇಕು.

ಇನ್ನೊಂದು ವಿಷಯ. ಈ ರಾಜ್ಯದಲ್ಲಿ ಇತ್ತೀಚೆಗೆ ಜನಸಂಖ್ಯೆ ಹೆಚ್ಚಾಗುತ್ತಾ ಬಂದಿರುವುದರಿಂದ ಕುಟುಂಬ ಯೋಜನೆಯ ಬಗ್ಗೆ ಸರ್ಕಾರದವರು ಒಂದು ಲೂಪ್ ನ ಕ್ರಮವನ್ನು ತಂದಿದ್ದಾರೆ. ಡಾಕ್ಟರುಗಳು ಮತ್ತು ಜನರು ಅದರ ಬಗ್ಗೆ ಆಸಕ್ತಿ ವಹಿಸದೆ ಇರುವುದಕ್ಕೆ ಕಾರಣ ಅದರ ಬಗ್ಗೆ ಸರಿಯಾದ ಪ್ರಚಾರ ಆಗುತ್ತಾ ಇಲ್ಲ. ಆದ್ದರಿಂದ ಸರ್ಕಾರದವರು ವಾರ್ತಾ ಇಲಾಖೆ ಮುಖಾಂತರ, ಅಥವಾ ಫಿಲಂಗಳ ಮುಖಾಂತರ ಅಥವಾ ಪತ್ರಿಕೆಗಳ ಮೂಲಕ ಈ ಬಗ್ಗೆ ಹೆಚ್ಚಿನ ಪ್ರಚಾರ ಕಾರ್ಯ ಮಾಡಿ ಆದಷ್ಟು ಜನರಿಗೆ ಅದರಲ್ಲಿ ಆಸಕ್ತಿ ಹುಟ್ಟಿಸುವ ಹಾಗೆ ಮಾಡಿ ಅವರ ಅಪೇಕ್ಷೆಯಂತೆ ಅನುಕೂಲಗಳನ್ನು ಕೊಟ್ಟರೆ ಆಗ ಈ ಕುಟುಂಬ ಯೋಜನೆ ಯಶಸ್ವಿಯಾಗುವುದಕ್ಕೆ ಸಾಧ್ಯವಾಗುತ್ತದೆ. ಕುಟುಂಬ ಯೋಜನೆಗೆ ಸಂಬಂಧಪಟ್ಟಂತೆ ಕೆಲವೇ ಆಸ್ಪತ್ರೆಗಳಲ್ಲಿ ಮಾತ್ರ ಅದರ ಬಗ್ಗೆ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಮಲೇರಿಯಾ ಎರಾಡಿಕೇಷನ್‌ಗೋಸ್ಕರ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್ ಅವರು ಯಾವರೀತಿ ಮೊಬೈಲ್ ವ್ಯಾನುಗಳನ್ನು ಇಟ್ಟುಕೊಂಡು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಚಾರ ಮಾಡುತ್ತಾರೋ ಅದೇ ರೀತಿಯಲ್ಲಿ ಕುಟುಂಬ ಯೋಜನೆಗೆ ಸಂಬಂಧಪಟ್ಟ ವಿಚಾರಗಳನ್ನು ಆಯಾ ಹಳ್ಳಿಗಳಿಗೆ ಮೊಬೈಲ್ ವ್ಯಾನುಗಳಲ್ಲಿ ಹೋಗಿ ಪ್ರಚಾರ ಮಾಡಿ ಆ ಯೋಜನೆ ಕಾರ್ಯ ಯಶಸ್ವಿಯಾಗಿ ಜಾರಿಗೆ ಬರುವಂತೆ ಪ್ರಯತ್ನ ಮಾಡಬೇಕೆಂದು ನಾನು ಈ ಸಮಯದಲ್ಲಿ ಹೇಳುತ್ತೇನೆ.

ಇನ್ನು ನಾನು ತಿಳಿದುಕೊಂಡಿರುವ ಹಾಗೆ ನಮ್ಮ ರಾಜ್ಯದಲ್ಲಿ ಖಾಸಗೀ ಆಸ್ಪತ್ರೆಗಳಿಗೆ ಸಾಕಷ್ಟು ಸಹಾಯವನ್ನು ಸರ್ಕಾರದವರು ಕೊಡುತ್ತಿಲ್ಲ. ಸಹಕಾರದಿಂದ ನಡೆಯತಕ್ಕ ಖಾಸಗೀ ಆಸ್ಪತ್ರೆಗಳಿಗೆ ಆದಷ್ಟು ರೀತಿಯಲ್ಲಿ ಸರ್ಕಾರ ಪ್ರೋತ್ಸಾಹ ಕೊಡಬೇಕು. ನಾನು ತಿಳಿದುಕೊಂಡಿರುವ ಹಾಗೆ ಹುಬ್ಬಳ್ಳಿಯಲ್ಲಿ ಒಂದು ಕೋ ಅಪರೇಟಿವ್ ಆಸ್ಪತ್ರೆ ಇದೆ. ಅಲ್ಲಿ ಬಡವರಿಗೆ ಯಾವ ರೀತಿಯ ಅನುಕೂಲತೆ ಬರುತ್ತಾ ಇಲ್ಲ. ಅದನ್ನು ಸರ್ಕಾರದವರೇ ವಹಿಸಿಕೊಂಡು ಎಲ್ಲಾ ಸೌಲಭ್ಯಗಳನ್ನೂ ಕೊಡಬೇಕು.

ಅದಕ್ಕಾಗಿ ಸರ್ಕಾರದವರು ಇವೊತ್ತಿನ ದಿವಸ ಪುಕ್ಕಟೆಯಾಗಿ ಔಷಧಿಯನ್ನು ಸಾಕಷ್ಟು ರೀತಿಯಲ್ಲಿ ಆಸ್ಪತ್ರೆಗೆ ಪುರವಟೆ ಮಾಡಿಕೊಟ್ಟರೆ ಅದರ ಮುಖಾಂತರ ಮುಂದೆ ಬಡಜನಗಳಿಗೆ ಅದರಿಂದ ಉಪಯೋಗವಾಗುತ್ತದೆ. ಅಷ್ಟೇ ಅಲ್ಲ ಆ ಆಸ್ಪತ್ರೆಯಲ್ಲಿ ಕ್ಯಾನ್ಸರ್‌ರೋಗದ ಎಕ್ಸ್‌ಪರ್ಟ್ ಡಾಕ್ಟರು ಇರುವುದರಿಂದ ಆ ರೋಗಕ್ಕೆ ಸಂಬಂಧಪಟ್ಟ ಸಲಕರಣೆಗಳನ್ನು ಸರ್ಕಾರದವರು ಪುಕ್ಕಟೆಯಾಗಿ ಒದಗಿಸಿಕೊಟ್ಟರೆ ಅವರು ಅದರ ಬಗ್ಗೆ ಹೆಚ್ಚಿನ ರೀತಿಯಲ್ಲಿ ಜನರಿಗೆ ಟ್ರೀಟ್‌ಮೆಂಟ್ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಹುಬ್ಬಳ್ಳಿಯ ಸುತ್ತ ಮುತ್ತ ಇರತಕ್ಕ ಹಳ್ಳಿಗಳಲ್ಲಿ ಇರತಕ್ಕ ಜನಗಳು ಸಾಕಷ್ಟು ರೀತಿಯಲ್ಲಿ ಕೋ ಆಪರೇಟೀವ್ ಸೊಸೈಟಿಯ ಆಸ್ಪತ್ರೆಗೆ ಬರುತ್ತಾರೆ. ಅಲ್ಲಿ ಯಾವಾಗಲೂ ವಿಪರೀತ ಜನಸಂದಣಿ ಇರುತ್ತದೆ. ಅಲ್ಲಿ ಜನಸಂದಣಿಯಾವ ರೀತಿಯಲ್ಲಿ ಇರುತ್ತದೆ ಎನ್ನುವುದನ್ನು ಮಾನ್ಯ ಆರೋಗ್ಯ ಮಂತ್ರಿಗಳು ಮತ್ತು ಮುಖ್ಯ ಮಂತ್ರಿಗಳು ಕೂಡ ಅಲ್ಲಿಗೆ ಭೇಟಿಕೊಟ್ಟು ನೋಡಿ ಬಂದಿದ್ದಾರೆ. ಅಲ್ಲಿ ಚಿಕಿತ್ಸೆ ಪಡೆಯುವ ರೋಗಿಗಳ ಸಂಖ್ಯೆಯನ್ನು ನೋಡಿ ತೃಪ್ತಿಪಟ್ಟುಕೊಂಡು ಬಂದಿದ್ದಾರೆ. ಅಲ್ಲಿ ರೋಗಿಗಳಿಗೆ ಯಾವ ರೀತಿ ಟ್ರೀಟ್‌ಮೆಂಟ್ ಕೊಡುತ್ತಿದ್ದಾರೆ ಎನ್ನುವುದನ್ನೂ ಸಹ ಮಾನ್ಯ ಮಂತ್ರಿಗಳು ಕಣ್ಣಾರೆ ನೋಡಿ ಬಂದಿದ್ದಾರೆಂದು ನಾನು ಕೇಳಿದ್ದೇನೆ. ಈ ಅಂಶಗಳನ್ನೆಲ್ಲ ಸರ್ಕಾರದವರು ಗಮನದಲ್ಲಿಟ್ಟುಕೊಂಡು ಆ ಆಸ್ಪತ್ರೆಗೆ ಹೆಚ್ಚಿನ ರೀತಿಯ ಸಹಾಯವನ್ನು ಒದಗಿಸಿ ಕೊಟ್ಟರೆ ಬಡವರಿಗೆ ಅನುಕೂಲವಾಗುತ್ತದೆ. ಆದ್ದರಿಂದ ಆದಷ್ಟು ಜಾಗ್ರತೆ ಅಲ್ಲಿಗೆ ಬೇಕಾದ ಅನುಕೂಲತೆಗಳನ್ನು ಒದಗಿಸಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ ಆರೋಗ್ಯ ಕೇಂದ್ರಗಳಿಗೆ ಬೇಕಾದ ಎಕ್ವಿಪ್‌ಮೆಂಟ್‌ಗಳನ್ನು ಒದಗಿಸಿ ಕೊಡಬೇಕು. ಇವೊತ್ತಿನ ದಿವಸ ಆಸ್ಪತ್ರೆಗಳಲ್ಲಿ ನರ್ಸುಗಳಿಲ್ಲ, ಮಿಡ್‌ವೈಫ್ಸ್‌ಗಳಿಲ್ಲ, ಕಾಂಪೌಂಡರ್ ಇಲ್ಲ, ಔಷಧಿ ಇಲ್ಲ, ಡಾಕ್ಟರು ಇಲ್ಲ ಎನ್ನುವಂತಹ ಯಾವ ದೂರುಗಳೂ ಸಹ ಬರದಂತೆ ಆದಷ್ಟು ಮಟ್ಟಿಗೆ ಎಲ್ಲರನ್ನೂ ಸಹ ನೇಮಕ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಸರಿಯಾದಂತಹ ಔಷಧೋಪಚಾರವನ್ನು ಒದಗಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಮತ್ತು ಅದಕ್ಕೆ ಬೇಕಾದ ಕ್ರಮವನ್ನು ಕೈಗೊಳ್ಳುವುದು ಅವಶ್ಯಕ. ಇನ್ನು ಸರ್ಕಾರದವರು ಹಾರ್ಟ್ ಅಟ್ಯಾಕ್ ಮತ್ತು ಲೆಪ್ರಸಿ ರೋಗಗಳ ಬಗ್ಗೆ ಜಾಗರೂಕತೆಯನ್ನು ವಹಿಸಬೇಕೆಂದು ನಾನು ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

Smt. VIJAYA RAGHAVENDRA RAO (Chitapur).—I support the Demands that are before the House today. In doing so, I would like to make a few observations restricting myself to Ayurveda specially.

Ayurveda as we all know, has attracted the attention of the Government and the public since a quarter of a century. And I am thankful to the Government for developing ayurveda to the extent that it exists today in our State. But in my opinion I think that Ayurveda cannot subsist and thrive under the joint efforts of a combined administration of it with that of general medicine and public health department. Because as we all know, the latter is purely on the basis of allopathy and ayurveda fundamentally differs from allopathy. Till recently medical services and public health were two separate departments, but they were combined because they formed the two major sections or wings of one particular system of medical science. Ayurveda is not that. Ayurveda is quite different from the medical services and public health. And the amalgamation of these two departments, *i.e.*, medical service and public health is a proof positive for a demand of a separate establishment of Ayurveda. I hope that Government will kindly consider this and it may try to establish a separate department for Ayurveda, so that the Government may give sufficient scope for Ayurveda to develop to its real status and worth.

I feel that one efficient ayurvedist should be there at the helm of affairs and he must be able to give his whole-time attention to the development of ayurveda. We can get qualified hands and it will be possible for the Government to have an ayurvedist as head of that department.

I would like to suggest one thing Sir. At present an *ex-officio* director has to divert very little of his time for the development of ayurveda. Most of his time is utilised towards the development of other medical sciences. And the surgeon at the district level is also placed in a somewhat similar if not worse plight, especially in taluks all ayurveda dispensaries are always under the control of the Chief Executive Officer. But the District Surgeon is empowered to exercise technical supervision of these institutions. Not only this sir, Ayurveda Department has become so wide and unwieldy, that we are now having about 555 dispensaries in the whole State. Then there are 2 Government hospitals-one in Bangalore and one at Mysore; we have a Government Central pharmacy at Jayanagar. Besides this, there is the State Council on Indian Medicine which advises the Government in registration of

(SMT. VIJAYA RAGHAVENDER RAO)

ayurveda practitioners and education of Ayurveda ; a Board of studies which conducts examinations in ayurveda ; a Board of Research, which advised the Government in the matters relating to research. With all this in hand, even the educational system of Ayurveda is also changing so fast. In the year 1962 the State Council on Indian Medicine advised the Government to implement the B.A,M.S. course which was sent by the Government of India. But because Government was thinking on the lines of Suddha ayurveda, it could not implement that. Again in the year 1964, Government implemented Suddha Ayurveda course. This shows that there is no proper set up of working in this Department. I feel therefore that it is better for the Government to think on the lines of establishing a separate Department for Ayurveda.

As regards service rules, there are no regular service rules for the doctors in Ayurveda. I hope that the Government will kindly frame the service rules in the light of the medical service rules and it may also take into consideration the rules that are already existing in the Hyderabad Bombay and Madras areas.

The medical graduates who have passed the M.S. and F.R.C.S. are working as II grade officers. I hope the Government will promote them as grade I officers.

The Central Social welfare Board is conducting condensed courses of training. The trainees here will usually be deserted women, destitutes and widows. Then they pass out the SSLC examination, they are fit to appear before the family planning interview and nurses training interview. I hope the Government will give first priority, prior attention and preference to these people who pass the condensed course for the nurses training and also for the family planning training.

As regards the Gulbarga Maternity Hospital, previously even before the Re-organisation of the State, even in the erstwhile Hyderabad Karnatak, or till 1960 it was treated as one of the Separate hospitals and it had a separate budget also. But now since 1961 or 1962 it is combined with the civil hospital at Gulbarga. It is treated not as a separate hospital but as part of the civil hospital or as a wing-a maternity wing of the main civil hospital, and this has led to so many difficulties. As Mr. Siddiah Kasinath was saying, we are not able to get wipers, good bed-sheets, medicine APC powders and vitamin tablets. It is quite difficult to get them. I therefore request the Government to consider this suggestion and I would like them to frame a separate budget as it was already existing previously, for the Gulbarga Maternity Hospital.

With these few words I thank the Chair and support the Demands that are before the House.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಅಧ್ಯಕ್ಷರೇ, ನಮ್ಮ ಆರ್ಥಿಕ ಸಚಿವರು ಮಂಡಿಸಿರುವಂಥ ಬೇಡಿಕೆಗಳನ್ನು ವಿರೋಧಿಸುತ್ತ ಒಂದೆರಡು ಮಾತುಗಳನ್ನು ಹೇಳಲು ಬಯಸುತ್ತೇನೆ. ಅವರು ಮೊದಲೇ ಹೇಳಿದ್ದಾರೆ, ನನಗೆ ಹೆಚ್ಚು ದುಡ್ಡು ಇದ್ದಿದ್ದರೆ ಹೆಚ್ಚು ಕೆಲಸ ಮಾಡುತ್ತಿದ್ದೆ ಎಂದು. ಇದು

ಸತ್ಯವಾದ ಮಾತು. ಇವತ್ತು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ನೋಡಿದರೆ ನಾವು ಎಷ್ಟು ಹಣವನ್ನು ಜನಸಂಖ್ಯೆಯ ಪ್ರಮಾಣವನ್ನು ಅನುಸರಿಸಿ ಒದಗಿಸುತ್ತಿದ್ದೇವೆಯೋ ಅದರ ನೂರರಷ್ಟು ಹಣವನ್ನು ಒದಗಿಸುತ್ತಾರೆ. ಮತ್ತು ಜನಗಳ ಆರೋಗ್ಯ ರಕ್ಷಣೆಯನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಸರ್ಕಾರದವರು ಸಾಕಾದಷ್ಟು ಧನ ಸಹಾಯವನ್ನು ಮಾಡದೆ ಸುಮ್ಮನೆ ವೈದ್ಯಕೀಯ ಸಚಿವರನ್ನು ವೈದ್ಯಕೀಯ ಮಟ್ಟವನ್ನು ಅಥವಾ ವೈದ್ಯಕೀಯ ಉಪಚಾರಗಳನ್ನು ಜಾಸ್ತಿ ಮಾಡಬೇಕು ಎಂದರೆ ಅದು ಸಾಧ್ಯವಿಲ್ಲ.

ಗ್ರಾಮಾಂತರ ಪ್ರದೇಶಗಳಲ್ಲಿರುವ ಆಸ್ಪತ್ರೆಗಳಿಗೆ ಹಣವನ್ನು ಕೊಡುವುದರಲ್ಲಿ ಭೇದಭಾವವನ್ನು ತೋರಿಸುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳ ಜನಸಂಖ್ಯೆ ಎಷ್ಟಿದೆ ಮತ್ತು ಪಟ್ಟಣಗಳ ಜನ ಸಂಖ್ಯೆ ಎಷ್ಟಿದೆ ಎನ್ನುವುದನ್ನು ನೋಡಿದರೆ ಗ್ರಾಮಾಂತರ ಪ್ರದೇಶದಲ್ಲಿ ಕೊಡುತ್ತಿರುವ ವೈದ್ಯ ಕೀಯ ಸೌಲಭ್ಯ ಏನೇನೂ ಸಾಲದು ಎಂದು ಹೇಳಬಹುದು. ನಾವು ಮುಂದುವರಿದ ದೇಶಗಳ ಗ್ರಾಮಾಂತರ ಪ್ರದೇಶದಲ್ಲಿರುವ ಆಸ್ಪತ್ರೆಗಳನ್ನು ನೋಡಿದರೆ ಅಲ್ಲಿರುವ ಸೌಕರ್ಯಗಳು ನಮ್ಮ ಜಿಲ್ಲಾ ಆಸ್ಪತ್ರೆಗಳಲ್ಲಿ ಕೂಡ ಇಲ್ಲ ಎಂದು ಹೇಳಬಹುದು. ಸರ್ಕಾರದವರು ಗ್ರಾಮಾಂತರದ ಪ್ರಜೆಗಳನ್ನು ಉಪೇಕ್ಷೆ ಮಾಡುತ್ತ ಹೋದರೆ ನಮ್ಮ ದೇಶದ ಗತಿ ಏನಾಗುತ್ತದೆ ಎನ್ನುವುದನ್ನು ಆಲೋಚನೆ ಮಾಡ ಬೇಕು. ಮಾನ್ಯ ಮಂತ್ರಿಗಳ ಗಮನಕ್ಕೆ ನಾನು ಒಂದೆರಡು ಉದಾಹರಣೆಗಳನ್ನು ತರುವುದಕ್ಕೆ ಇಷ್ಟ ಪಡುತ್ತೇನೆ. ಇವತ್ತು ನಾವು ಸೋವಿಯತ್ ರಷ್ಯ ದೇಶವನ್ನು ತೆಗೆದುಕೊಂಡರೆ, ನನ್ನಲ್ಲಿರುವುದು 1955 ನೆ ಇಸವಿಗೆ ಸಂಬಂಧಪಟ್ಟ ಪುಸ್ತಕ, ಅದರಲ್ಲಿ ಹೀಗೆ ಹೇಳಿದ್ದಾರೆ.

"It is a fact that in almost all the rural hospitals of the U.S.S.R., antibiotics, sulphonamides. vitamins endocrine preparations, Blood transfusions tissue theraphy, corrective exercises, electrical and light theraphy, and medicinal bath treatment are now applied."

"The district hospitals have become everywhere centres of specialised medical aid to the rural population. The various departments (internal diseases, surgery and others) are supervised by specialists who have undergone refresher courses at advanced training institutes, at medical institute clinics, and in hospitals of the large cities. The rural specialist is periodically sent to these institutions to gain knowledge and clinical experience."

"Significant charges have also taken place in the rural medical centres. All the local dispensaries have been reorgani. sed into hospitals equipped with the necessary apparaturs. The doctor of the local hospital works under the supervision of specialists from the district hospital, gains practical experience there and learns the art of clinical treatment."

ನಮ್ಮಲ್ಲಿ ಗ್ರಾಮಾಂತರ ಪ್ರದೇಶದಲ್ಲಿರುವ ಲೋಕಲ್ ಫಂಡ್ ಆಸ್ಪತ್ರೆಯಲ್ಲಿ ಒಬ್ಬ ಡಾಕ್ಟರಿದ್ದರೆ ಅವರಿಗೆ ಯಾವ ತರಹ ಅನುಭವವನ್ನೂ ಪಡೆಯುವುಕ್ಕೆ ಅವಕಾಶವನ್ನು ಕೊಡುವುದಿಲ್ಲ. ಅವರಿಗೆ ಸಾಕಾದಷ್ಟು ಉಪಕರಣಗಳು ಕೂಡ ಕೊಡುತ್ತಿಲ್ಲ. ಕೆಲವು ಆಸ್ಪತ್ರೆಗಳಲ್ಲಿ ಸರಿಯಾದ ಹಾಸಿಗೆ ಗಳಿರುವುದಿಲ್ಲ. ಹೋಬಳಿಯಲ್ಲಿರುವ ಆಸ್ಪತ್ರೆಯನ್ನು ತಗೆದುಕೊಂಡರೆ ಸಾಮಾನ್ಯವಾಗಿ ಅಲ್ಲಿ ಕಂಬೈನ್ಡ್ ಆಸ್ಪತ್ರೆ ಇರುವುದಿಲ್ಲ. ಲೋಕಲ್ ಫಂಡ್ ಆಸ್ಪತ್ರೆ ಅಥವಾ ಹೆಲ್ತ್ ಯೂನಿಟ್ ಇರುವ ಕಡೆ, 50 ಸಾವಿರ ಪ್ರಜಾ ಸಂಖ್ಯೆ ಇರುವ ಕಡೆ 10 ಹಾಸಿಗೆಗಳು ಕೂಡ ಇರುವುದಿಲ್ಲ. ಅಲ್ಲಿ ಮೆಟರ್ನಿಟಿ ಕೇಸುಗಳು ಬಂದರೆ ಹೇಗೆ, ಏನು ಮಾಡಬೇಕು ? ಅವರ ಉಪಚಾರಕ್ಕೆ ಯಾರಾದರೂ ಇರ ಬೇಕಾದರೆ ಏನು ಮಾಡಬೇಕು ? ಇದನ್ನೆಲ್ಲ ಮಾನ್ಯ ಮಂತ್ರಿಗಳು ಸ್ವಲ್ಪ ಯೋಚನೆ ಮಾಡಬೇಕು. ಹಳ್ಳಿಗಳಲ್ಲಿರುವ ಆಸ್ಪತ್ರೆಗಳನ್ನು ಅಪ್‌ಗ್ರೇಡ್ ಮಾಡಿ ಅವುಗಳಿಗೆ ಸಾಧ್ಯವಾದಷ್ಟು ಸೌಕರ್ಯಗಳನ್ನು ಕಲ್ಪಿಸಿಕೊಡದೆ ಹೋದರೆ ಖಂಡಿತವಾಗಿಯೂ ಹಳ್ಳಿಯ ಜನರಿಗೆ ಅಪಚಾರ ಮಾಡಿದ ಹಾಗೆ ಆಗುತ್ತದೆ ಎಂದು ತಿಳಿದುಕೊಂಡಿದ್ದೇನೆ. ಇನು ಮುಂದಾದರೂ ಹಳ್ಳಿಗಳ ಕಡೆ ಹೆಚ್ಚು ಗಮನ ಕೊಡ ಬೇಕೆಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ.

(ಶ್ರೀ ಹೆಚ್. ಆರ್. ಕೇಶವಮೂರ್ತಿ)

ವೈದ್ಯರುಗಳ ಸಂಖ್ಯೆಯನ್ನು ತೆಗೆದುಕೊಂಡರೆ ನಮ್ಮ ಮೈಸೂರು ರಾಜ್ಯದಲ್ಲಿ ಸಾಕಾದಷ್ಟು ಸಂಖ್ಯೆಯಲ್ಲಿ ವೈದ್ಯರನ್ನು ತರಪೇತಿ ಮಾಡುತ್ತಿಲ್ಲ ಎಂದು ಹೇಳಬೇಕಾಗುತ್ತದೆ. ವೈದ್ಯಕೀಯದಲ್ಲಿ ಪರಿಶ್ರಮ ಪಡೆಯಲು ಹೆಚ್ಚು ಹೆಚ್ಚು ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ಬೊಂಬಾಯಿ ರಾಜ್ಯದಲ್ಲಿ ಒಂದು ಮಿಲಿಯನ್ ಜನ ಸಂಖ್ಯೆಗೆ 238 ಜನ ಡಾಕ್ಟರಿದ್ದಾರೆ, ಅದೇ ಮೈಸೂರು ರಾಜ್ಯದಲ್ಲಿ 133 ಜನರಿದ್ದಾರೆ. ರಿಜಿಸ್ಟರ್ಡ್ ಮೆಡಿಕಲ್ ಪ್ರಾಕ್ಟೀಷನರ್ಸ್ ತೆಗೆದುಕೊಂಡರೆ ಮದ್ರಾಸಿನಲ್ಲಿ 11,613 ಜನ ಇದ್ದರೆ ಮೈಸೂರಿನಲ್ಲಿ 3,505 ಜನ ಇದ್ದಾರೆ. ಇದು 1960ನೆ ಇಸವಿಯ ಅಂಕಿಗಳು. ಈಚಿನ ವಿವರಗಳು ನನ್ನ ಹತ್ತಿರವಿಲ್ಲ. ಪ್ರತಿಯೊಂದು ವಿಚಾರದಲ್ಲಿಯೂ ಕೂಡ ವೈದ್ಯರು ನಮ್ಮ ರಾಜ್ಯದಲ್ಲಿ ಕಡಮೆ ಇದ್ದಾರೆ. ಕೊನೆಯ ಪಕ್ಷ ಮದ್ರಾಸ್ ಅಥವಾ ಆಂಧ್ರ ಅಥವಾ ಮಹಾರಾಷ್ಟ್ರ ಈ ರಾಜ್ಯಗಳ ಮಟ್ಟಕ್ಕಾದರೂ ಮೈಸೂರನ್ನು ತರುವುದಕ್ಕೆ ಪ್ರಯತ್ನ ಮಾಡಬೇಕು.

ನರ್ಸ್‌ಗಳ ವಿಚಾರ ತೆಗೆದುಕೊಂಡರೆ ನಮ್ಮ ದೇಶದಲ್ಲಿ ಸಾಮಾನ್ಯವಾಗಿ 43 ಸಾವಿರ ಜನ ಸಂಖ್ಯೆಗೆ ಒಬ್ಬ ನರ್ಸ್‌ನಂತೆ ಇದ್ದಾರೆ. ಬೇರೆ ದೇಶಗಳಿಗೆ ಹೋಲಿಸಿ ನೋಡಿದರೆ ಅಜಗಜಾಂತರ ವ್ಯತ್ಯಾಸವಿದೆ. ಬೋರ್ ಕಮಿಟಿ ರಿಪೋರ್ಟಿನಲ್ಲಿ 500 ಜನಗಳಿಗೆ ಒಬ್ಬ ನರ್ಸ್ ಇರಬೇಕು ಎಂದು ಹೇಳಿದ್ದಾರೆ. ಇದನ್ನು ಗಣನೆಗೆ ತೆಗೆದುಕೊಂಡು ಹೆಚ್ಚು ನರ್ಸ್‌ಗಳಿಗೆ ಟ್ರೈನಿಂಗ್ ಕೊಟ್ಟು ಅವರ ಸಂಖ್ಯೆಯನ್ನು ಜಾಸ್ತಿ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇದೆ ರೀತಿ ಮಿಡ್‌ವೈಫ್‌ಗಳ ಸಂಖ್ಯೆಯೂ ಸಾಲದು. ಇವರಿಗೂ ಸರಿಯಾದ ತರಪೇತಿಯನ್ನು ಕೊಡಬೇಕು. ಟ್ರೈನಿಂಗ್ ಕೊಡುವುದರಲ್ಲಿ ನರ್ಸ್‌ಗಳಿಗೆ ಮೂರು ವರ್ಷಗಳ ಕೋರ್ಸ್ ಇದೆ. ಮಿಡ್‌ವೈಫ್‌ಗಳಿಗೆ ಎರಡು ವರ್ಷದ ಕೋರ್ಸ್ ಇದೆ. ಇವರಿಗೂ ಎಫಿಷಿಯೆಂಟ್ ಟೀಚಿಂಗ್ ಕೊಟ್ಟು ಸರಿಯಾಗಿ ತರಪೇತು ಮಾಡುವ ವಿಷಯವನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಮಂಗಳೂರು ಮತ್ತು ಇತರ ಕಡೆ ಹೆಲ್ತ್ ಕಂಟ್ರೋಲ್ ಸರಿಯಾಗಿಲ್ಲ. ಸ್ವಲ್ಪ ದಿವಸದ ಹಿಂದೆ ನಾನು ಮಂಗಳೂರಿಗೆ ಹೋಗಿದ್ದೆ. ಬಂದರಿನ ಹತ್ತಿರ ಹೋಗುವುದಕ್ಕೆ ಆಗಲಿಲ್ಲ. ಇದು ಅನಾರೋಗ್ಯವಾದ ಸ್ಥಳವಾಗಿ ಪರಿವರ್ತನೆಯಾಗುತ್ತಿದೆ. ಇಲ್ಲಿ ಹೆಲ್ತ್ ಕಂಟ್ರೋಲ್ ಮೆಷರ್ಸ್ ಸರಿಯಾಗಿ ತೆಗೆದುಕೊಳ್ಳಬೇಕು. ಈಗ ಅನೇಕ ಕಡೆ ಬಂದರುಗಳ ನಿರ್ಮಾಣ ಮಾಡುತ್ತಿದ್ದಾರೆ. ಅಲ್ಲೆಲ್ಲ ಆರೋಗ್ಯವನ್ನು ಕಾಪಾಡುವುದರ ಕಡೆಗೆ ಹೆಚ್ಚು ಗಮನ ಕೊಡುವುದಕ್ಕೆ ಪ್ರಯತ್ನ ಮಾಡಬೇಕು.

ಮಲೇರಿಯಾ ರೋಗವನ್ನು ನಿರ್ಮೂಲ ಮಾಡಿದರೂ ಕೂಡ ಸೊಳ್ಳೆಗಳ ಕಾಟ ಇನ್ನೂ ಹೋಗಿಲ್ಲ. ಹಾಸನದಲ್ಲಿ ಸೊಳ್ಳೆಗಳ ಸಂಖ್ಯೆ ಜಾಸ್ತಿಯಾಗಿ ಅದರ ಕಾಟ ಹೇಳತೀರದು. ಡಿ.ಡಿ.ಟಿ. ಯನ್ನು ಎರಚಿದರೆ ಸೊಳ್ಳೆಗಳು ಸಾಯುವುದಿಲ್ಲ ಎಂದು ಹೇಳುತ್ತಾರೆ. ಸೊಳ್ಳೆ ಪರದೆ ಇಲ್ಲದೆ ಹಾಸನ ಪ್ರವಾಸಿ ಬಂಗಲೆಯಲ್ಲಿ ಒಂದು ರಾತ್ರಿ ಮಾನ್ಯ ಮಂತ್ರಿಗಳು ಮಲಗಿದರೆ ಅವರ ಅನುಭವಕ್ಕೇ ಬರುತ್ತದೆ. ನಮ್ಮ ರಾಜ್ಯದಲ್ಲಿ ಎಲ್ಲ ಕಡೆಯೂ ಸೊಳ್ಳೆಗಳನ್ನು ನಿರ್ನಾಮ ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

ತಿಗಣೆ ಮತ್ತು ಚಿಗಟ ಇವುಗಳ ಹಾವಳಿಯೂ ಜಾಸ್ತಿಯಾಗಿದೆ. ಇವು ಮನುಷ್ಯನ ರಕ್ತವನ್ನು ಹೀರಿ, ಅನಾರೋಗ್ಯವನ್ನುಂಟುಮಾಡಿ ಜನಗಳಿಗೆ ಬಹಳ ತೊಂದರೆ ಕೊಡುತ್ತಿದೆ. ಇವುಗಳ ನಿವಾರಣೆಗೆ ಸಹ ಆರೋಗ್ಯ ಸಚಿವರು ಗಮನ ಕೊಟ್ಟು ಮನುಷ್ಯನಿಗೆ ಸುಖ ದೊರೆಯುವಂತೆ ಮಾಡಬೇಕು.

ಜನಸಂಖ್ಯೆಯ ನಿಯಂತ್ರಣದ ವಿಷಯದಲ್ಲಿ ನಾನು ಮೊದಲಿನಿಂದಲೂ ತೀವ್ರವಾಗಿ ವಿರೋಧ ಮಾಡುತ್ತಿದ್ದೇನೆ. ಹೋದ ಸಲ ಈ ವಿಷಯ ನಾನು ಹೇಳಿದಾಗ ನನಗೆ ಛೀಮಾರಿ ಹಾಕಿದರು. ಆದರೂ ಕೂಡ ನನ್ನ ಅಭಿಪ್ರಾಯ ಬದಲಾಗಿಲ್ಲ. ಈ ಕುಟುಂಬ ನಿಯಂತ್ರಣ ಯೋಜನೆಯನ್ನು ದಯವಿಟ್ಟು ನಿಲ್ಲಿಸಬೇಕು. ಮನುಷ್ಯನನ್ನು ಕೃತಕವಾಗಿ ಉತ್ಪಾದನೆ ಮಾಡತಕ್ಕ ಶಕ್ತಿ ನಿಮಗೆ ಬರುವವರೆಗಾದರೂ ಈ ಕುಟುಂಬ ನಿಯಂತ್ರಣ ಕೆಲಸವನ್ನು ನಿಲ್ಲಿಸಬೇಕು. ಮನುಷ್ಯನನ್ನು ಕೊಯ್ಯುವುದಕ್ಕೆ ನೋಡುತ್ತಿದ್ದೀರಿ, ಅವನನ್ನು ಉತ್ಪತ್ತಿ ಮಾಡುವ ಶಕ್ತಿ ಇಲ್ಲ. ಮನುಷ್ಯನನ್ನು ಉತ್ಪತ್ತಿ ಮಾಡುವ ಶಕ್ತಿ ಬರುವವರೆಗೂ ನೀವು ಜನಸಂಖ್ಯೆಯ ನಿಯಂತ್ರಣವನ್ನು ಕೈ ಬಿಡಬೇಕು ಪ್ರಪಂಚದಲ್ಲಿ ನಮ್ಮ ಇಂಡಿಯಾ ದೇಶ ಬಿಟ್ಟು... ...

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಟೆಸ್ಟ್ ಟ್ಯೂಬ್.. ......

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಟೆಸ್ಟ್ ಟ್ಯೂಬ್ ಬೇಬೀಸ್ ಕ್ರಮ ಇನ್ನೂ ಯಶಸ್ವಿಯಾಗಿಲ್ಲ.

3-30 P.M.

ಆದ್ದರಿಂದ ಟೆಸ್ಟ್‌ಟ್ಯೂಬ್ ಬೇಬೀಸ್‌ನ್ನು ಯಶಸ್ವಿಯಾಗಿ ಜಾರಿಗೆ ತರುವುದಕ್ಕೆ ಅವಕಾಶವಾದಾಗ ಫ್ಯಾಮಿಲಿ ಪ್ಲಾನಿಂಗ್ ಮಾಡಿ ಪರವಾಗಿಲ್ಲ, ಇದನ್ನು ಇಡೀ ಪ್ರಪಂಚದಲ್ಲೇ ಜಾರಿಗೆ ತಂದಿಲ್ಲ. ಅವರೆಲ್ಲರೂ ಕೂಡ ಇಂಡಿಯಾ ದೇಶದ ಕಡೆಗೆ ನೋಡುತ್ತಾ ಇದ್ದಾರೆ. ಇವತ್ತಿನ ದಿವಸ ಪ್ರಪಂಚದಲ್ಲೆಲ್ಲಾ ಜನಸಂಖ್ಯೆ ಬೆಳೆಯುತ್ತಾ ಇದೆ. ಇಂಡಿಯಾ ದೇಶದವರು ಪ್ರಜಾಸಂಖ್ಯೆಯನ್ನು ಕಡಿಮೆ ಮಾಡಿಕೊಂಡರೆ ಬೇರೆಯವರನ್ನು ನಾವು ಎದುರಿಸುವುದಕ್ಕೆ ಸಾಧ್ಯವಾಗುತ್ತದೆಯೇ ? ಮುಂದೆ ನಮ್ಮ ಗತಿ ಏನು ಎಂಬುದನ್ನು ಈಗ ನಾವು ವಿಚಾರ ಮಾಡಬೇಕಾಗಿದೆ. ಹೀಗೆ ಸಾಯಿಸುವುದಕ್ಕೆ ಬದಲಾಗಿ ಶತ್ರುಗಳ ಫಿರಂಗಿಗೆ ಕೊಟ್ಟು ಜನರನ್ನು ಬೇಕಾದರೆ ಸಾಯಿಸಿ, ಯೋಧರನ್ನಾಗಿ ಮಾಡಿ ನಮ್ಮ ಶತ್ರುಗಳು ಯಾವಾಗಲೂ ನಮ್ಮ ಮುಂದೆ ಇದ್ದಾರೆ ಅವರ ಮೇಲೆ ಯುದ್ಧಮಾಡುವುದಕ್ಕೆ ಅವರನ್ನು ಉಪಯೋಗಿಸಿಕೊಳ್ಳಿ. ಈ ಫ್ಯಾಮಿಲಿ ಪ್ಲಾನಿಂಗ್ ಸೆಂಟರ್‌ಗಳನ್ನು ರೂರಲ್ ಏರಿಯಾದಲ್ಲೇ ಹೆಚ್ಚಾಗಿ ಮಾಡುತ್ತಾ ಇದ್ದೀರಿ, ಅರ್ಬನ್ ಏರಿಯಾದಲ್ಲಿ ಬಹಳ ಕಡಿಮೆ ಇದೆ. ಇಲ್ಲಿ 21 ಸೆಂಟರ್ಸ್ ಇದ್ದರೆ ಅಲ್ಲಿ 365 ಸೆಂಟರ್‌ಗಳು ಇವೆ. ಹಳ್ಳಿಯಲ್ಲಿರತಕ್ಕ ಜನ ಧೃಢಕಾಯರು ಅಂತಹವರ ಸಂಖ್ಯೆಯನ್ನು ಕಡಿಮೆ ಮಾಡಿ ಪಟ್ಟಣದಲ್ಲಿರತಕ್ಕವರ ಸಂಖ್ಯೆಯನ್ನು ಜಾಸ್ತಿ ಮಾಡಿದರೆ ನಾಳೆ ಚೈನಾದವರು ನಮ್ಮ ಮೇಲೆ ಯುದ್ಧ ಮಾಡುವುದಕ್ಕೆ ಬಂದರೆ ಏನು ಮಾಡುತ್ತೀರಿ ? ಆದ್ದರಿಂದ ಈ ಒಂದು ನೀತಿಯನ್ನು ಬಿಟ್ಟು ಬೇಕಾದರೆ ಅತಂಹ ಜನರನ್ನು ಯುದ್ಧಮಾಡುವುದಕ್ಕೆ ತೆಗೆದುಕೊಳ್ಳಿ, ಗುಂಡಿನ ಬಲಿಗೆ ಕೊಡಿ, ಧೀರರಾಗಿ ಸಾಯುತ್ತಾರೆ. ಹಾಗೆ ಮಾಡದಿದ್ದರೆ ಮುಂದಿನ ಪೀಳಿಗೆ ನೀವು ಈಗ ಮಾಡತಕ್ಕ ತಪ್ಪಿಗೆ ಖಡಾ ಖಂಡಿತವಾಗಿ ನಿಮ್ಮನ್ನು ಖಂಡಿಸುತ್ತದೆ ಎಂದು ಹೇಳಿ ಒಂದು ಹೆಚ್ಚರಿಕೆಯನ್ನು ಕೊಡುತ್ತೇನೆ. ಇವತ್ತಿನ ದಿವಸ ಮಳೆ ಹೋಯಿತು, ಕ್ಷಾಮ ಬಂತು ಆಹಾರ ಉತ್ಪಾದನೆ ಮಾಡುವುದಕ್ಕೆ ಸಾಧ್ಯವಾಯಿತೇನು ? ಇಲ್ಲ. ಅದನ್ನು ದೇವರು ಕೊಡುತ್ತಾನೆ. ಇದನ್ನೆಲ್ಲಾ ಯೋಚನೆ ಮಾಡಿ.

ಇನ್ನು ಹಳ್ಳಿಗಳಲ್ಲಿ ನೀರಿನ ಸರಬರಾಯಿಗೆ ಬಹಳ ತೊಂದರೆಯಾಗಿದೆ. ಹಳ್ಳಿಗಳಲ್ಲಿ ಪಬ್ಲಿಕ್ ಹೆಲ್ತ್ ಇಂಜನಿಯರಿಂಗ್ ಅವರು ರೂರಲ್ ವಾಟರ್ ಸಪ್ಲೈ ಕೆಲಸ ಮಾಡುತ್ತಾ ಇದ್ದಾರೆ. ನಮ್ಮ ದೇಶದ ಜನಸಂಖ್ಯೆಯ ದೃಷ್ಟಿಯಿಂದ ನೋಡುವುದಾದರೆ ಈಗ ಕೊಡುತ್ತಾ ಇರುವ ಸಹಾಯ ಏನೇನು ಸಾಲದು. ಹೆಲ್ತ್ ಮಿನಿಸ್ಟರ್ ಅವರು ಪಬ್ಲಿಕ್ ಹೆಲ್ತ್ ಇಂಜನಿಯರ್ ಅವರಿಗೆ ತಿಳಿಸಿ ಹೆಚ್ಚು ಹೆಚ್ಚು ಹಳ್ಳಿಗಳಿಗೆ ಪ್ರೊಟೆಕ್ಟೆಡ್ ವಾಟರ್ ಸಪ್ಲೈ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು.

ಎಲ್. ಎಂ. ಪಿ. ಕೋರ್ಸ್‌ನ್ನು ವಜಾ ಮಾಡಿದಿರಿ. ಎಂ. ಬಿ. ಬಿ. ಎಸ್. ಡಾಕ್ಟರುಗಳು ಹಳ್ಳಿಗಳ ಕಡೆಗೆ ಹೋಗುವುದಿಲ್ಲ. ಹೀಗಾಗಿ ತ್ರಿಶಂಕುಸ್ವರ್ಗವಾಗಿದೆ. ಇದನ್ನು ತಪ್ಪಿಸುವುದಕ್ಕೆ ದಯ ವಿಟ್ಟು ಎಲ್.ಎಂ.ಪಿ. ಕೋರ್ಸನ್ನು ಮತ್ತೆ ತೆರೆಯಿರಿ ಎಂದು ಹೇಳಿ ನಾನು ಒತ್ತಾಯ ಮಾಡುತ್ತೇನೆ. ಇನ್ನು ಮೆಡಿಕಲ್ ಸ್ಟ್ಯಾಂಡರ್ಡನ್ನು ಹೆಚ್ಚು ಮಾಡಲೇ ಬೇಕಾಗುತ್ತದೆ. ಪರದೇಶಗಳಲ್ಲಿ ನೋಡಿದರೆ ಆಶ್ಚರ್ಯವಾಗುತ್ತದೆ. ಖಾಯಿಲೆ ಆದವನನ್ನು ಕರೆದುಕೊಂಡು ಬರುವುದಕ್ಕೆ ಬೈ ಏರ್ ಟು ಹಾಸ್ಪೆಟಲ್ ಅಂತ ಹೇಳಿ ಮೊಬೈಲ್ ಪ್ಲೇನ್‌ಗಳನ್ನು ಅವರು ಇಟ್ಟಿದ್ದಾರೆ. ತಾವೂ ಕೂಡ ಮಾದರಿಯಾಗಿ ಅಂತ ಮೊಬೈಲ್ ಪ್ಲೇನ್‌ನ್ನು ಇಡಬೇಕು. ಗ್ರಾಮಾಂತ ಪ್ರದೇಶಗಳಿಂದ ಅಥವಾ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ಸ್‌ನಿಂದ ಖಾಯಿಲೆ ಯವರನ್ನು ವಿಕ್ಟೋರಿಯಾ ಅಥವ್ ಬೌರಿಂಗ್ ಆಸ್ಪತ್ರೆಗೆ ಕರೆದುಕೊಂಡು ಬರಲು ಅಂತಹ ಒಂದು ಸೌಕರ್ಯವನ್ನು ಮೈಸೂರು ದೇಶದಲ್ಲಿ ಮಾದರಿಯಾಗಿ ಆದರೂ ಮಾಡಿ, ಹೆಲ್ತ್ ಮಿನಿಸ್ಟರಾದ ತಮ್ಮ ಕಾಲದಲ್ಲಿ ಆ ಒಂದು ಏರ್ಪಾಡಾದರೂ ಆಗಲಿ ಎಂದು ಹೇಳಿ ನಾಲ್ಕು ಮಾತಗಳನ್ನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಜಿ. ಸಿ. ಭಾಗೀರತಮ್ಮ (ತುಮಕೂರು).—ಮಾನ್ಯ ಸಭಾಪತಿಯವರೇ, ನಮ್ಮ ಮುಂದೆ ಇರುವ ಈ ಬೇಡಿಕೆಗಳನ್ನು ಅನುಮೋದಿಸುತ್ತಾ ವೈದ್ಯಕೀಯ, ಜನಾರೋಗ್ಯ ರಕ್ಷಣೆಗೆ ಸಂಬಂಧಪಟ್ಟ ಕೆಲಸಗಳನ್ನು ಮತ್ತು ಕಟ್ಟಡಗಳನ್ನು ಮಾಡುವುದಕ್ಕೆ ಎಮರ್ಜೆನ್ಸಿಯನ್ನು ಅಪ್ಲೈ ಮಾಡದೆ ಕಟ್ಟಡಗಳಿಗೆ ಆದ್ಯತೆಯನ್ನು ಕೊಟ್ಟು ಕಟ್ಟಡಗಳನ್ನು ಕಟ್ಟಿಸಬೇಕೆಂದು ಸಲಹೆ ಮಾಡುತ್ತೇನೆ. ನರ್ಸ್‌ಸ್ ಟ್ರೈನಿಂಗ್ ನಡೆಸತಕ್ಕ ಆಸ್ಪತ್ರೆಗಳಲ್ಲಿ ಫುಲ್ ಟೈಂ ಪೀರಿಯಡ್‌ಗಳನ್ನು ಆಯಾಯಾ ಆಸ್ಪತ್ರೆ ಗಳಲ್ಲೇ ಕೊಡಬೇಕು. ಒಂದು ಒಂದೂವರೆ ವರ್ಷ ಟ್ರೈನಿಂಗ್ ಆದಮೇಲೆ ಅವರನ್ನು ಬೇರೆ ಆಸ್ಪತ್ರೆಗಳಿಗೆ ಕಳುಹಿಸುತ್ತಾ ಇದ್ದಾರೆ, ಹಾಗೆ ಮಾಡಬಾರದು ಎಂದು ಹೇಳುತ್ತೇನೆ. ಆಕ್ಸಲರಿ ಮಿಡ್ ವೈಫ್ ಟ್ರೈನಿಂಗ್ ಅಂತ ಹೇಳಿ ಪ್ರತಿಯೊಂದು ಜಿಲ್ಲಾ ಆಸ್ಪತ್ರೆಗಳಲ್ಲೂ ಏರ್ಪಾಡು ಮಾಡಬೇಕು. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಸಾಕಾದಷ್ಟು ಮಿಡ್ ವೈಫ್‌ಗಳು ಇಲ್ಲದೇ ಇರುವುದರಿಂದ ಡಿಸ್ಟ್ರಿಕ್ಟ್ ಆಸ್ಪತ್ರೆಗಳಲ್ಲಿರತಕ್ಕ ಮಿಡ್ ವೈಫ್‌ಗಳನ್ನು ರೂರಲ್ ಪಾರ್ಟ್ಸ್‌ಗೆ ಕಳುಹಿಸಿ

(ಶ್ರೀಮತಿ ಜಿ. ಪಿ. ಭಾಗೀರಥಮ್ಮ)

ಜನರಲ್ ಆಸ್ಪತ್ರೆಗಳಲ್ಲಿ ನರ್ಸ್‌ಸ್‌ಗಳ ಸಂಖ್ಯೆಯನ್ನು ಜಾಸ್ತಿ ಮಾಡಬೇಕೆಂದು ಹೇಳುತ್ತೇನೆ. ತುಮಕೂರು ಜನರಲ್ ಆಸ್ಪತ್ರೆಯಲ್ಲಿ ಸಾಕಾದಷ್ಟು ನರ್ಸ್‌ಸ್ ಇರುವುದಿಲ್ಲ. ಮಂಜೂರಾಗಿರತಕ್ಕ ಪೋಸ್ಟ್‌ಗಿಂತ ಇನ್ನೂ 10-12 ಜನ ಕಡಿಮೆ ಇದ್ದಾರೆ. ಆದ್ದರಿಂದ ಆದಷ್ಟು ಜಾಗ್ರತೆ ನರ್ಸ್‌ಸ್‌ಗಳನ್ನು ಅಲ್ಲಿಗೆ ಪೋಸ್ಟ್ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಪ್ರತಿಯೊಂದು ಜಿಲ್ಲಾ ಆಸ್ಪತ್ರೆಯಲ್ಲೂ ಕೂಡ ಕಾಂಪೌಂಡರುಗಳ ಟ್ರೈನಿಂಗ್‌ನ್ನು ಮುಂದುವರಿಸಿಕೊಂಡು ಬರಬೇಕು. ಕಾಂಪೌಂಡರುಗಳು ಸಾಕದಷ್ಟು ಜನ ಇರುವುದಿಲ್ಲ. ಫಾರ್ಮಸಿಯಲ್ಲಿ ಕೊಡತಕ್ಕ 5 ವರ್ಷದ ಅವಧಿಯನ್ನು ಮುಗಿಸಿಕೊಂಡು ಬರುವುದಕ್ಕೆ ಬಹಳ ನಿಧಾನವಾಗುತ್ತದೆ. ಅದಕ್ಕೆ ಬದಲಾಗಿ ಆಸ್ಪತ್ರೆಗಳಲ್ಲೇ ಕಾಂಪೌಂಡರುಗಳಿಗೆ ಟ್ರೈನಿಂಗ್ ಕೊಡಬಹುದು. ಅವರ ಅಭಾವವನ್ನು ನೀಗಿಸಬಹುದು. ತುಮಕೂರು ಜನರಲ್ ಆಸ್ಪತ್ರೆಯಲ್ಲಿ ಒಂದು ಐಸೋಲೇಷನ್ ವಾರ್ಡ್‌ನ್ನು ಕಟ್ಟಿಸಬೇಕೆಂದು ನಾನು ಹಿಂದಿನ ಬಡ್ಜೆಟ್ ಭಾಷಣದಲ್ಲಿ ಸೂಚನೆ ಮಾಡಿದ್ದೆ. ಅದನ್ನು ಕಟ್ಟಿಸುತ್ತೇವೆ ಎಂದು ಹೇಳಿದ್ದೀರಿ, ಈಗ ಹಣ ಕೂಡ ಮಂಜೂರಾಗಿದೆ. ಆದರೂ ಎಮರ್ಜೆನ್ಸಿ, ಆಗುವುದಿಲ್ಲ ಎಂದು ಹೇಳುತ್ತಾರೆ ಆ ರೀತಿ ಹೇಳಬೇಡಿ. ಅವಶ್ಯಕವಾಗಿ ಆಗಬೇಕಾದ ಈ ಐಸೂಲೇಷನ್ ವಾರ್ಡ್ ಕಟ್ಟುವುದಕ್ಕೆ ಹಣ ಒದಗಿಸಬೇಕೆಂದು ವಿನಂತಿ ಮಾಡುತ್ತೇನೆ.

ಬ್ಲಡ್ ಬ್ಯಾಂಕಿನ ಅವಶ್ಯಕತೆ ಪ್ರತಿಯೊಂದು ಜಿಲ್ಲಾ ಆಸ್ಪತ್ರೆಗಳಲ್ಲೂ ಕೂಡ ಇದೆ. ಅದಕೆ ಕಟ್ಟಡಗಳನ್ನೂ ಕೂಡ ಕಟ್ಟಿಸಿಕೊಡಬೇಕೆಂದು ಸೂಚನೆ ಮಾಡುತ್ತೇನೆ.

ತುಮಕೂರು ಜಿಲ್ಲಾ ಆಸ್ಪತ್ರೆಯಲ್ಲಿ ನರ್ಸಸ್ ಟ್ರೈನಿಂಗ್ ಸ್ಕೂಲು ಮತ್ತು ಹಾಸ್ಟೆಲ್ ಫಾರ್ ನರ್ಸ್‌ಸ್ ಈ ಎರಡು ಕಟ್ಟಡಗಳಿಗೂ ಹಣ ಮಂಜೂರಾಗಿದೆ. ಬಡ್ಜೆಟ್‌ನಲ್ಲೂ ಕೂಡ ಅದು ಸೇರಿದೆ. ಅದಕ್ಕೂ ಕೂಡ ಎಮರ್ಜೆನ್ಸಿ ಅಂತ ಹೇಳದೆ ಜಾಗ್ರತೆ ಹಣವನ್ನು ಒದಗಿಸಬೇಕು. ನರ್ಸಸ್ ಟ್ರೈನಿಂಗ್ ಮತ್ತು ಹಾಸ್ಟೆಲ್ ಇವೆರಡನ್ನೂ ಆಸ್ಪತ್ರೆಯ ವಾರ್ಡ್‌ಗಳಲ್ಲೇ ನಡೆಸುತ್ತ ಇದ್ದಾರೆ. ಇದರಿಂದ ರೋಗಿಗಳಿಗೆ ಸಾಕದಷ್ಟು ಜಾಗ ಇಲ್ಲದಂತಾಗಿದೆ. ಅತಿ ಶೀಘ್ರವಾಗಿ ನರ್ಸ್‌ಸ್ ಸ್ಕೂಲ್ ಮತ್ತು ಹಾಸ್ಟೆಲ್‌ಗೆ ಕಟ್ಟಡ ಒದಗಿಸಬೇಕೆಂದು ಹೇಳುತ್ತೇನೆ.

ಆಯುರ್ವೇದ ಆಸ್ಪತ್ರೆಗಳು ಸರಿಯಾದ ರೀತಿಯಲ್ಲಿ ನಡೆಯುತ್ತಾ ಇಲ್ಲ. ಆ ಡಿಸ್ಪೆನ್‌ಸರಿಗಳಲ್ಲಿ ಔಷಧಿ ಇರುವುದಿಲ್ಲ. ಮತ್ತು ಸರಿಯಾದ ಎಕ್ವಿಪ್‌ಮೆಂಟ್ ಇರುವುದಿಲ್ಲ, ಔಷಧಿಗಾಗಿ ಕೇವಲ 300 ರೂಪಾಯಿ. ಕೊಡುತ್ತಾ ಇದ್ದಾರೆ. ಇದ ಸಾಕೇ ? ಮತ್ತು ಅಲ್ಲಿ ಕೆಲಸ ಮಾಡತಕ್ಕ ಡಾಕ್ಟರುಗಳಿಗೆ ಮೂರು ತಿಂಗಳುಗಳಾದರೂ ಸಂಬಳ ಕೊಟ್ಟಿರುವುದಿಲ್ಲ. ಇಂತಹ ಚಿಂತಾಜನವಾದ ಸ್ಥಿತಿಯಲ್ಲಿರತಕ್ಕ ಆಸ್ಪತ್ರೆಗಳನ್ನು ಸರ್ಕಾರದವರು ಅಪ್‌ಗ್ರೇಡ್ ಮಾಡಬೇಕೆಂದು ಸೂಚನೆ ಮಾಡುತ್ತೇನೆ.

ತುಮಕೂರಿನಲ್ಲಿರತಕ್ಕ ಟಿ. ಬಿ. ಆಸ್ಪತ್ರೆಯನ್ನು ಜನರಲ್ ಆಸ್ಪತ್ರೆಗೆ ವರ್ಗಾಯಿಸಿದರೆ ಒಳ್ಳೆಯದು ಎಂದು ಕಾಣುತ್ತದೆ. ಅದು ಜನರಲ್ ಆಸ್ಪತ್ರೆಗೆ ಸುಮಾರು ಒಂದೂವರೆ ಮೈಲಿ ದೂರದಲ್ಲಿದೆ. ಅಲ್ಲಿ ಎಕ್ಸ್‌ರೇ ಡಿಪಾರ್ಟ್‌ಮೆಂಟಿನ ಸೌಲಭ್ಯ ಇದೆ. ಜನರಲ್ ಆಸ್ಪತ್ರೆಯಲ್ಲಿ ಇರುವುದಿಲ್ಲ. ಈಗ ಟಿ.ಬಿ. ಆಸ್ಪತ್ರೆ ಊರಿನಿಂದ ಹೊರಗಡೆ ಇರಬೇಕೆಂಬ ನಿಯಮ ಏನೂ ಇರುವುದಿಲ್ಲ. ಆದ್ದರಿಂದ ಅದನ್ನು ಜನರಲ್ ಆಸ್ಪತ್ರೆಯ ಆವರಣದಲ್ಲೇ ಇಟ್ಟರೆ ಎಕ್ಸ್‌ರೇ ಡಿಪಾರ್ಟ್‌ಮೆಂಟಿನ ಅನುಕೂಲ ಕೂಡ ಜನರಲ್ ಆಸ್ಪತ್ರೆಗೆ ದೊರಕುವಂತೆ ಆಗುತ್ತದೆ. ಆದ್ದರಿಂದ ಜನರಲ್ ಆಸ್ಪತ್ರೆಯ ಪಕ್ಕದಲ್ಲೇ ಟಿ.ಬಿ. ಆಸ್ಪತ್ರೆಯನ್ನು ಮಾಡಬೇಕು ಮತ್ತು ಈಗ ಟಿ.ಬಿ. ಆಸ್ಪತ್ರೆ ಇರುವ ಜಾಗದಲ್ಲಿ ಅದನ್ನು ಡಾಕ್ಟರುಗಳಿಗೆ ಕ್ವಾರ್ಟರ್ಸ್ ಆಗಿ ಪರಿವರ್ತನೆ ಮಾಡಬೇಕು ಎಂದು ಸೂಚನೆ ಮಾಡುತ್ತೇನೆ.

ಸ್ವಾಮಿ, ನಮ್ಮ ತುಮಕೂರಿನಲ್ಲಿ ಲೇಡಿ ಡಾಕ್ಟರ್ ಮನೆಯಲ್ಲಿ ಫೋನ್ ಅವಶ್ಯಕತೆ ಇದೆ ಎಂದು ಹೇಳುತ್ತೇನೆ. ಲೇಡಿ ಡಾಕ್ಟರ್ ಮನೆಯಲ್ಲಿ ಫೋನ್ ಇಲ್ಲದೇ ಇರುವುದರಿಂದ ಅರ್ಜೆಂಟಾಗಿ ಅವರನ್ನು ಆಸ್ಪತ್ರೆಗೆ ಕರೆಯಿಸಬೇಕಾದರೆ ಆಳು ಕೊಟ್ಟು ಕಳಿಸಿ ಅವರನ್ನು ಕರೆಸಬೇಕಾಗುತ್ತದೆ. ಆದುದರಿಂದ ಲೇಡಿ ಡಾಕ್ಟರ್ ಮನೆಯಲ್ಲಿ ಮತ್ತು ಆರ್. ಎಂ. ಓ. ಮನೆಯಲ್ಲಿ ಫೋನ್ ಅವಶ್ಯಕತೆ ಇರುವುದರಿಂದ ಫೋನ್ ಏರ್ಪಾಡು ಮಾಡಬೇಕು ಎಂದು ಹೇಳುತ್ತೇನೆ. ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ದಯಾನಂದ ಆರ್. ಕಲ್ಲೆ (ಕಾರ್ಕಳ).—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ಆರೋಗ್ಯ ಸಚಿವರು ವೈದ್ಯಕೀಯ ಮತ್ತು ಜನಾರೋಗ್ಯ ರಕ್ಷಣೆಯ ಇಲಾಖೆ ಬೇಡಿಕೆಗಳನ್ನು ಮಂಜೂರಾತಿಗಾಗಿ ನಮ್ಮ ಮುಂದೆ ಇಟ್ಟಿದ್ದಾರೆ. ಸಾರ್ವಜನಿಕ ಆರೋಗ್ಯ ಇಲಾಖೆ ವಿಷಯ ಮಾತನಾಡಬೇಕಾ

ದರೆ ಒಂದು ಮಾತು ನೆನಪು ಆಗುತ್ತದೆ. ನಮ್ಮ ದೇಶಕ್ಕೆ ಸಾರ್ವಜನಿಕ ಆರೋಗ್ಯದ ಬಗ್ಗೆ ಒಂದು ನೀತಿ ಇಲ್ಲ ಎಂದು ಕಾಣುತ್ತದೆ. ಏತಕ್ಕೆ ಮತ್ತು ಯಾವ ದೃಷ್ಟಿಯಿಂದ ಸಾರ್ವಜನಿಕ ಆರೋಗ್ಯ ಇಲಾಖೆ ಇರಬೇಕು ಎಂಬುದನ್ನು ಆಲೋಚನೆ ಮಾಡಿದರೆ, ನಮ್ಮ ಮುಂದೆ ಇರುವುದು ಬರೀ ವೈದ್ಯಕೀಯ ಸೌಲಭ್ಯಕ್ಕಾಗಿ ಮಾತ್ರ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಪ್ರಗತಿಪರವಾಗಿರ ಬೇಕಾದ ಈ ಆರೋಗ್ಯ ಇಲಾಖೆಯಲ್ಲಿ ಆಹಾರ, ಸ್ವಚ್ಛತೆ ಆರೋಗ್ಯ, ಇವು ಮೂರನ್ನು ಗಮನದಲ್ಲಿ ಇಟ್ಟಿರುತ್ತಾರೆ. ಬರೀ ವೈದ್ಯಕೀಯ ಸೌಲಭ್ಯ ಕಲ್ಪಿಸಿ ಕೊಟ್ಟರೆ ಸಾಕು ಎಂದು ಈ ಇಲಾಖೆ ಮುಂದುವರಿಸುತ್ತಿದ್ದಾರೆಂದು ಕಾಣುತ್ತದೆ. ಸಾರ್ವಜನಿಕ ಆರೋಗ್ಯ ಇಲಾಖೆಯಲ್ಲಿ ನಡೆಯುತ್ತಿರುವ ಕೆಲವು ಅನಾಚಾರ ನೋಡಿದರೆ ಇಂದು ನಮ್ಮ ಜನತೆಯಲ್ಲಿ ಹಳ್ಳಿಗಾಡಿನಲ್ಲಿರುವ 78 ಪರ್ಸೆಂಟ್ ಜನರಿಗೆ ವೈದ್ಯಕೀಯ ಸೌಲಭ್ಯ ಸಿಕ್ಕುತ್ತಿಲ್ಲ. ಪಟ್ಟಣಗಳಲ್ಲಿ ಕೇಂದ್ರೀಕೃತವಾದ 22 ಪರ್ಸೆಂಟ್ ಜನರಿಗೆ ಮಾತ್ರ ಸೌಲಭ್ಯ ದೊರೆಯುತ್ತಿದೆ. ಎಂದು ಹೇಳಿದರೆ ಅದು ತಪ್ಪಾಗಲಾರದು. ಬಡ ಜನರಿಗೆ ಜನ ಸಾಮಾನ್ಯರಿಗೆ ವೈದ್ಯಕೀಯ ಸೌಲಭ್ಯ ದೊರೆಯುತ್ತಿಲ್ಲ ಎಂಬುದು ತಿಳಿದು ಬಂದ ವಿಚಾರ. ಇನ್ನು ಇರತಕ್ಕ ಆಸ್ಪತ್ರೆಗಳಲ್ಲಿ ಯಾವ ರೀತಿ ಸೌಲಭ್ಯ ಸಿಕ್ಕುತ್ತದೆ ಎಂಬುದು ಎಲ್ಲರಿಗೂ ತಿಳಿದ ವಿಚಾರ. ಇದನ್ನು ಆರೋಗ್ಯ ಮಂತ್ರಿಗಳು ಚಣಾಕ್ಷತನದಿಂದ ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ. ಆಸ್ಪತ್ರೆಯಲ್ಲಿ ಬಡ ಜನರು ಹೋದರೆ ಯಾವ ರೀತಿ ಟ್ರೀಟ್‌ಮೆಂಟ್ ಮಾಡುತ್ತಾರೆ ಯಾವ ರೀತಿ ಸೌಲಭ್ಯ ಸಿಕುತ್ತದೆ ಎಂಬುದನ್ನು ದಿನನಿತ್ಯ ಪ್ರತ್ಯಕ್ಷವಾಗಿ ನೋಡುತ್ತೇವೆ. ರೋಗ ಗುಣ ಪಡಿಸಲು ಆಸ್ಪತ್ರೆಗೆ ಜನ ಹೋಗುತ್ತಾರೆ. ಆದರೆ ಅಂಥಲ್ಲಿ ಆರೋಗ್ಯವಂತನು ಹೋದರೆ ಅಲ್ಲಿಯ ಕೊಳಚಿ ವಾತಾವರಣದಲ್ಲಿಯ ವ್ಯವಹಾರ, ಅನಾಚಾರ ನೋಡಿ ಅವನಿಗೆ ಕಾಯಿಲೆ ಬರುವ ಪ್ರಸಂಗ ಬರುತ್ತದೆ. ಈ ಸಂದರ್ಭದಲ್ಲಿ. ಕಾರ್ಕಳದ ಆಸ್ಪತ್ರೆಯ ಕೆಲವೊಂದು ವಿಷಯ ಈ ಸಭೆಯಲ್ಲಿ ಹೇಳ ಬೇಕೆಂದಿದ್ದೇನೆ. ಆಸ್ಪತ್ರೆಗೆ ಡಾಯೆಟ್, ಮೆಡಿಸನ್ನ ಬಗ್ಗೆ ಏನು ಹಣ ಅಲಾಟ್ ಮಾಡುತ್ತಿದ್ದಾರೆಯೋ ಅದು ನಾಲ್ಕು ವರ್ಷಗಳ ಹಿಂದೆ ಎಷ್ಟು ಅಲಾಟ್ ಮಾಡಿದ್ದರೋ ಅದಕ್ಕೂ ಕಡಿಮೆ ಈಗ ಅಲಾಟ್ ಮಾಡಿದ್ದಾರೆ. ಇಂದು ಆಹಾರದ ಬೆಲೆ ಎಷ್ಟು ಏರಿದೆ. ಮೆಡಿಸಿನ್ನ ಕ್ರಯ ಎಷ್ಟು ಮೇಲೆ ಹೋಗುತ್ತಾ ಇದೆ ಎಂಬುದನ್ನು ಆಲೋಚನೆ ಮಾಡದೇ ಹಿಂದಿನ ದಕ್ಕಿಂತಲೂ ಇಂದು ಕಡಿಮೆ ಅಲಾಟ್ ಮಾಡುವುದು ನಿಜವಾಗಿಯೂ ಶೋಚನೀಯವಾದುದು ಇಂಥ ಸಂದರ್ಭದಲ್ಲಿ ಆಸ್ಪತ್ರೆಗೆ ಸರಬರಾಜು ಮಾಡುವುದನ್ನು ಜಾಸ್ತಿ ಮಾಡಬೇಕು ಎಂದು ಹೇಳುತ್ತೇನೆ. ಶ್ರೀಮಾನ್ ಕೇಶವ ಮೂರ್ತಿಯವರು ಹೇಳಿದ ಹಾಗೆ ವೈದ್ಯಕೀಯ ಸೌಲಭ್ಯ ಹಳ್ಳಿಗಾಡಿಗೆ ಹೋಗಿಲ್ಲ. ಮುಖ್ಯವಾಗಿ ಹಳ್ಳಿಗಾಡಿಗೆ ವೈದ್ಯಕೀಯ ಸೌಲಭ್ಯ ಒದಗಿಸಿ ಕೊಡಬೇಕು. ಆಸ್ಪತ್ರೆ ಕಟ್ಟಡ ಕಟ್ಟಿಸಿದರೆ ಅಲ್ಲಿ ಸರಿಯಾದ ಡಾಕ್ಟರ್ ಇರುವುದಿಲ್ಲ. ಡಾಕ್ಟರ್ ಇದ್ದಲ್ಲಿ ಔಷಧಿ ಇರುವುದಿಲ್ಲ. ಇದು ದಿನ ನಿತ್ಯ ಕೇಳುವ ಆರೋಪಣೆ. ಹಳ್ಳಿಗಾಡಿಗೆ ವೈದ್ಯಕೀಯ ಸೌಲಭ್ಯ ನೀಡಿ ಜನತೆಗೆ ಸೌಲಭ್ಯ ಸಿಕ್ಕುವಂತೆ ಮಾಡಬೇಕು.

ಕಾರ್ಕಳದಲ್ಲಿ ಔಟ್ ಪೇಶಂಟ್ ವಾರ್ಡ್ 1961ನೇ ವರ್ಷದ ಬಜೆಟ್ಟಿನಲ್ಲಿ ಸ್ಯಾಂಕ್ಷನ್ ಆಗಿತ್ತು. ಇದುವರೆಗೆ ಈ ಕೆಲಸ ನಡೆಸಲಿಲ್ಲ. ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್‌ಗಾಗಿ ಬಂದಂಥ ಈ ಪೇಪರ್ಸ್ ಎಲ್ಲಿ ಮಾಯವಾಗಿವೆಯೋ ಗೊತ್ತಿಲ್ಲ. ಈ ಕೆಲಸ ಇದುವರೆಗೆ ತೆಗೆದುಕೊಂಡಿಲ್ಲ ಎಂಬುದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಆರೋಗ್ಯ ಸಚಿವರು ಇದಕ್ಕೆ ಗಮನ ಕೊಟ್ಟು ಮುಂದಿನ ವರ್ಷದಲ್ಲಿ ಕಾರ್ಕಳ ಆಸ್ಪತ್ರೆಯಲ್ಲಿ ಔಟ್ ಪೇಶಂಟ್ ವಾರ್ಡ್ ಕಟ್ಟಡ ಕಟ್ಟಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕಾರ್ಕಳ ಆಸ್ಪತ್ರೆ ವಿಚಾರ ಹೇಳುವುದಾದರೆ ಅಲ್ಲಿಯ ಮೆಡಿಕಲ್ ಆಫೀಸರ್ಸ್ ಕ್ವಾರ್ಟರ್ಸ್ ಇಲ್ಲ. ಒಂದು ಸ್ಥಳ ಪರೀಕ್ಷೆ ಮಾಡಿ ಅಲ್ಲಿ ಕ್ವಾರ್ಟರ್ಸ್ ಕಟ್ಟಿಸುವುದಕ್ಕಾಗಿ ಜಮೀನು ಅಕ್ವಾಯರ್ ಮಾಡಬೇಕೆಂದು ಇದ್ದುದು ಯಾವುದೋ ಕಾಣದ ಕೈ ಕೈವಾಡದಿಂದ ಆಸ್ಥಳವನ್ನು ಗ್ರೋಮೋರ್ ಫುಡ್‌ಕ್ಕಾಗಿ ಬೇಕೆಂದು ಆ ಸ್ಥಳವನ್ನು ವಜಾ ಮಾಡಿರುತ್ತಾರೆ. ಅಲ್ಲಿ ಬೇರೆ ಸ್ಥಳ ಇಲ್ಲ. ಆದುದರಿಂದ ಇದೇ ಸ್ಥಳವನ್ನು ಮೆಡಿಕಲ್ ಆಫೀಸರ್ಸ್ ಕ್ವಾರ್ಟರ್ಸ್ ಸಲುವಾಗಿ ನಿಗದಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅನೇಕ ಸಂದರ್ಭದಲ್ಲಿ ನಮಗೆ ಆರೋಗ್ಯ ಇಲಾಖೆಯಲ್ಲಿ ಅನೇಕ ತೊಂದರೆಗಳು ಆಗುತ್ತಾ ಇವೆ. ದಿನ ನಿತ್ಯ ಬೆಳಿಗ್ಗೆ ಒಂದೊಂದು ಅಡಚಣೆ ಬರುತ್ತದೆ. ಒಂದು ಸಣ್ಣ ಉದಾಹರಣೆ ಕೊಡುವುದಾದರೆ ಸಾಧಾರಣವಾಗಿ ಡಾಯೆಟ್ ಅಲಾಟಮೆಂಟ್ ಬರುವ ಹಣ ಸರಿಯಾಗಿ ಬರುವುದಿಲ್ಲ. ಇದನ್ನು ಆರೋಗ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಕಳೆದ ಸೆಪ್ಟೆಂಬರ್ ಅಕ್ಟೋಬರ್‌ನಲ್ಲಿ ಕೊಡಬೇಕಾದ ಹಣ ಕಾರ್ಕಳಕ್ಕೆ ಇನ್ನೂವರೆಗೆ ಕೊಟ್ಟಿಲ್ಲ. ಅಲ್ಲಿಯ ಕಂಟ್ರಾಕ್ಟರ್ಸ್ ನೋಟೀಸ್ ಕೊಟ್ಟಿದ್ದಾರೆ. ಇಂಥ ಸಂದರ್ಭ ಸರಕಾರಿ ಆಸ್ಪತ್ರೆಯಲ್ಲಿ ನಡೆಯಬಾರದು. ಈ ಬಗ್ಗೆ ಸರಿಯಾದ ಕ್ರಮ ತೆಗೆದುಕೊಂಡು ಸಂಬಂಧಪಟ್ಟವರು ಜಾಗ್ರತೆ ಹಣ ಕಳಿಸಿಕೊಡುವ ವ್ಯವಸ್ಥೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ (ಗಾಂಧೀನಗರ).—ಮಾನ್ಯ ಸಭಾಪತಿಗಳೇ, ಈಗ ನಮ್ಮ ಮುಂದೆ ಇರುವ ಬೇಡಿಕೆಗಳನ್ನು ಅನುಮೋದಿಸುತ್ತಾ ಒಂದೆರಡು ವಿಷಯಗಳನ್ನು ಸರಕಾರದ ಗಮನಕ್ಕೆ ತರಬೇಕೆಂದಿದ್ದೇನೆ. ಮತ್ತು ಕೆಲವು ಸಲಹೆಗಳನ್ನು ಕೊಡಬೇಕೆಂದಿದ್ದೇನೆ. ಎಲ್ಲ ಭಾಗ್ಯಗಳಿಗಿಂತ ಆರೋಗ್ಯ ಭಾಗ್ಯ ಹೆಚ್ಚಿನದಾಗಿರುವುದರಿಂದ ವೈದ್ಯಕೀಯ ಮತ್ತು ಜನಾರೋಗ್ಯ ಇಲಾಖೆಯ ವಿಷಯದಲ್ಲಿ ಕೊಟ್ಟಿರುವ ಹಣ ಸಾಲದು, ಇನ್ನೂ ಹೆಚ್ಚಾಗಿ ಹಣ ಕೊಟ್ಟು ಇದಕ್ಕೆ ಉಪಕಾರ ಮಾಡಬೇಕು ಮತ್ತು ಹೆಚ್ಚಿನ ಪ್ರೋತ್ಸಾಹ ಕೊಡಬೇಕು ಎಂದು ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಅನೇಕ ರಾಷ್ಟ್ರಗಳಲ್ಲಿ ವಿಜ್ಞಾನದ ಆಶ್ರಯದಲ್ಲಿ ವೈದ್ಯ ವೃತ್ತಿಯು ಆಶ್ಚರ್ಯಪಡುವಷ್ಟು ಮುನ್ನಡೆಯುತ್ತಿದೆ. ಪ್ರಗತಿಯೇನೋ ಆಗುತ್ತಿದೆ. ಏನೋ ಎಂತೋ ನಮ್ಮ ಕನ್ನಡ ನಾಡಿನಲ್ಲಿ ಮಾತ್ರ ತುಂಬಾ ಹಿನ್ನಡೆಯಲ್ಲಿ ಹೋಗುತ್ತದೆ. ಇನ್ನೂ ಹಳೇ ಮಾಡಲ್ ಫೋರ್ಡ್ ಗಾಡಿಯಲ್ಲೇ ಪ್ರಯಾಣ ಮಾಡುತ್ತಿದೆ. ಬೊಂಬಾಯಿ, ಡೆಲ್ಲಿ, ವೆಲ್ಲೂರ್ ಮುಂತಾದ ಕಡೆ ಇರುವಂತಹ ಪ್ರಸಿದ್ಧ ಆಸ್ಪತ್ರೆ, ಎರಡು ಕೋಟಿ ಮೇಲ್ಪಟ್ಟು ಜನಸಂಖ್ಯೆ ಇರುವ ನಾಡಿನಲ್ಲಿ ಇಲ್ಲದಿರುವುದು ವಿಷಾದಕರವಾಗಿದೆ. ಇದೇ ಸಭೆಯಲ್ಲಿ ನಮ್ಮ ಆರೋಗ್ಯ ಮಂತ್ರಿಗಳಿಗೆ ವಿನಂತಿಸಿದೆ. ಎಷ್ಟು ಖರ್ಚಾದರೂ ಚಿಂತೆಯಿಲ್ಲ, ಬೆಂಗಳೂರಿನ ಒಂದು ಆಸ್ಪತ್ರೆಯನ್ನು ವೆಲ್ಲೂರ್ ಆಸ್ಪತ್ರೆಯ ಮಾದರಿಯಲ್ಲಿ, ತಜ್ಞ ಡಾಕ್ಟರುಗಳಿಂದ ತಜ್ಞ ಉಪಕರಣಗಳಿಂದ ಕೂಡಿದ ಮಾದರಿ ಆಸ್ಪತ್ರೆಯನ್ನಾಗಿ ಮಾಡಿ ಕೀರ್ತಿ ಗಳಿಸಿ ಎಂದು ವಿನಂತಿಸಿದ್ದೆ. ಹೌದು ಹಾಗಾಗಬೇಕು. ನಿಮ್ಮ ಸಲಹೆ ಯೋಗ್ಯವುಂಟು. ಆ ಬಗ್ಗೆ ಯೋಚಿಸುವೆ ಎಂಬ ಆಶ್ವಾಸನೆಯಲ್ಲೇ ನನ್ನ ಕೋರಿಕೆ ಉಳಿದಿದೆ. ಮುಂದಾದರೂ ನನ್ನ ಕೋರಿಕೆಗೆ ಗಮನಕೊಟ್ಟು ಬೃಹತ್ ಬೆಂಗಳೂರಿಗೆ ತಕ್ಕಂತೆ ಒಂದು ಆಸ್ಪತ್ರೆಯನ್ನು ಮಾದರಿಯಾಗಿರುವಂತೆ ಪರಿವರ್ತಿಸಿ ಎಂದ ಮತ್ತೊಮ್ಮೆ ಆರೋಗ್ಯ ಸಚಿವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ದೇವರ ತರುವಾಯ ಜನರು ನಂಬಿಕೆ ವಿಶ್ವಾಸವನ್ನು ಇಡುವುದು ವೈದ್ಯರಲ್ಲಿ ಮಾತ್ರ. ದೇವಸ್ಥಾನಕ್ಕೆ ಕೊಡುವಷ್ಟೇ ಮಹತ್ವವನ್ನು ಆಸ್ಪತ್ರೆಗಳಿಗೂ ಜನತೆ ಕೊಡುತ್ತಿದ್ದಾರೆ. ಜನರ ನಂಬಿಕೆ, ವಿಶ್ವಾಸಕ್ಕೆ ತಕ್ಕಂತೆ ವೈದ್ಯರುಗಳು ಮತ್ತು ಆಸ್ಪತ್ರೆಗಳು ಇರದಿದ್ದರೆ, ಇದ್ದೂ ಏನು ಉಪಯೋಗ. ವೈಕುಂಠ ಬೇಕಾದರೆ ವಿಕ್ಟೋರಿಯಾ, ಕೈಲಾಸ ಬೇಕಾದರೆ ವಾಣಿವಿಲಾಸ, ತ್ರಿಶಂಕು ಸ್ವರ್ಗಬೇಕಾದರೆ ಬೌರಿಂಗ್ ಆಸ್ಪತ್ರೆಗಳಿಗೆ ಹೋಗಿ ಎಂದು ಜನರು ವ್ಯಂಗ್ಯವಾಗಿ ಮಾತನಾಡುವಂತಾಗಬಾರದು, ಈ ರೀತಿಯಾಗದಂತೆ ಆರೋಗ್ಯ ಮಂತ್ರಿಗಳು ನೋಡಿಕೊಳ್ಳುತ್ತಾರೆಂದು ನಾನು ತಿಳಿದಿದ್ದೇನೆ.

ಪ್ರತಿಯೊಂದು ಆಸ್ಪತ್ರೆಗೂ ಮಂಜೂರಾದ ಹಣ ಸರಿಯಾಗಿ ವಿನಿಯೋಗವಾಗುತ್ತದೆಯೇ ? ಆಸ್ಪತ್ರೆಗಳಿಗೆ ಬೇಕಾದ ಸಲಕರಣೆಗಳು, ಬಟ್ಟೆ, ಬರೆ, ಔಷಧೋಪಚಾರಗಳಿಗೆ ಈ ಹಣ ಸದ್ವಿನಿಯೋಗವಾಗುತ್ತಿದೆಯೇ ? ಲೆಕ್ಕಪತ್ರಗಳು ಸರಿಯಾಗಿದೆಯೇ ? ಹಾಲು ಮೊಸರು, ಬ್ರೆಡ್ ಮುಂತಾದ ಪದಾರ್ಥಗಳು ಹಣಕ್ಕೆ ತಕ್ಕಂಥ ಉತ್ತಮವಾದ ಮಾಲು ಸಿಗುತ್ತಿದೆಯೇ ? ಈ ವಿಚಾರದಲ್ಲಿ ವಂಚನೆ ಎಷ್ಟರಮಟ್ಟಿಗೆ ನಡೆಯುತ್ತಿದೆ, ಇತ್ಯಾದಿಗಳನ್ನು ಆಗಿಂದಾಗ್ಗೆ ಸಚಿವರು ಪರಿಶೀಲಿಸಬೇಕು. ಅಕ್ರಮ ಅನ್ಯಾಯಗಳು ಕಂಡರೆ ನಿರ್ದಾಕ್ಷಿಣ್ಯವಾಗಿ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಲೇಡಿ ಡಾಕ್ಟರ್‌ಗಳ ಅಭಾವ ತುಂಬಾ ಇದೆ. ಕಾರಣವೇನೆಂಬುದನ್ನು ಯೋಚಿಸಿದ್ದೀರಾ ? ಅವರಿಗೆ ಸರಿಯಾದ ಪ್ರೋತ್ಸಾಹ ಕೊಡಬೇಕು. ಪರಿಣಿತರಿಗೆ ಸರಿಯಾದ ಪ್ರಾಶಸ್ತ್ಯ ಕೊಡಬೇಕು. ಮಹಿಳಾ ವಿದ್ಯಾರ್ಥಿನಿಯರಿಗೆ ಮೆಡಿಕಲ್ ಕಾಲೇಜುಗಳಲ್ಲಿ ಹೆಚ್ಚು ಸ್ಥಾನಗಳನ್ನು ಕೊಡಬೇಕು. ಉತ್ತೀರ್ಣರಾದವರಿಗೆ ಜಾಗ್ರತೆ ಕೆಲಸ ಕೊಡಬೇಕು. ಈ ರೀತಿಯಾದರೆ ಮಹಿಳಾ ವೈದ್ಯರುಗಳ ಅಭಾವ ಪರಿಹಾರವಾಗುತ್ತದೆ.

ತಾಲ್ಲೋಕ್‌ಗಳಿಗೆ ಡಾಕ್ಟರ್‌ಗಳನ್ನು ಹಾಕಬೇಕಾದರೆ ಅವರು ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ಕನಿಷ್ಠ ಪಕ್ಷ ಎರಡು ವರ್ಷವಾದರೂ ಅರಿತು ನುರಿತಿರುವರನ್ನೇ ನೋಡಿ ಹಾಕಬೇಕು.

ಆಧುನಿಕ ವೈದ್ಯಕೀಯ ಸಲಕರಣೆಗಳು ಅಂದರೆ ಉಸಿರಾಡಲು ಅಸಾಧ್ಯವಾದಾಗ ನೆರವಾಗುವ (ರೆಸ್ಪಿರೇಟರ್). ಹೃದಯ ಕ್ರಿಯೆ ನಿಂತಾಗ ನೆರವಾಗುವ (ಪಾಸ್‌ಮೇಕರ್). ಟಿ.ವಿ. ಸಿರಮ್ ಅನೇಸ್ತೇಸಿಯಾ ಉಪಕರಣಗಳು, ಇವೆಲ್ಲ ಆಧುನೀಕವಾಗಿರಬೇಕು. ಹೃದಯ ದೌರ್ಬಲ್ಯ, ಕ್ಯಾನ್ಸರ್, ಈ ಖಾಯಿಲೆಗಳಿಗೆ ಅತ್ಯಾಧುನಿಕ ಸಲಕರಣೆಗಳನ್ನು ಒದಗಿಸುವುದಲ್ಲದೆ, ಆ ಖಾಯಿಲೆಗಳ ತಜ್ಞರನ್ನು ಸಹ ನೇಮಿಸಬೇಕು. ಈಗ ತಜ್ಞರಿದ್ದಾರೆ, ಸಲಕರಣೆಗಳೂ ಇವೆಯೆಂದು ಹೇಳಬಹುದು. ಅತ್ಯಾಧುನಿಕ ಸಲಕರಣೆಗಳು, ಅರಿತು ನುರಿತು ಪ್ರಾವೀಣ್ಯತೆ ಪಡೆದಿರುವ ತಜ್ಞವೈದ್ಯರುಗಳನ್ನು ಮಾತ್ರ ಜನತೆ ಅಪೇಕ್ಷಿಸುತ್ತಾರೆ ಎಂಬ ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ.

ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿರುವಂತೆ (ಬ್ಲಡ್‌ಪ್ಲಾಸ್ಮ) ಮಾಡುವ ಒಂದು ವ್ಯವಸ್ಥೆ ಇಲ್ಲಿಯೂ ಆಗಬೇಕು. ಬ್ಲಡ್ ಬ್ಯಾಂಕ್ ಸುವ್ಯವಸ್ಥಿತವಾಗಿ ನಡೆಯುವಂತೆ ಸಂಬಂಧಪಟ್ಟವರು ಗಮನ ಕೊಡಬೇಕು.

ಆಸ್ಪತ್ರೆಯ ನಾಲ್ಕನೆ ದರ್ಜೆಯ ನೌಕರರಿಗೆ ಒಂದೂವರೆ ವರ್ಷಕ್ಕೆ ಒಂದು ಸಾರಿ ಎರಡು ಯೂನಿಫಾರಂ ಡ್ರೆಸ್ ಕೊಡುತ್ತಿದ್ದೀರಾ, ಇದನ್ನು ತಪ್ಪಿಸಿ, ವರ್ಷಕ್ಕೆ ಒಂದು ಸಾರಿ ಎರಡು ಯೂನಿಫಾರಂ ಡ್ರೆಸ್ ಕೊಡುವ ವ್ಯವಸ್ಥೆಯನ್ನು ಜಾರಿಗೆ ತರುವುದು ಸ್ವಚ್ಛತೆಯ ದೃಷ್ಟಿಯಿಂದ ಯೋಗ್ಯವೆಂದು ಕಾಣುತ್ತದೆ.

ಔಟ್ ಪೇಷಂಟ್‌ನಲ್ಲಿ ಹೆಸರು ರಿಜಿಸ್ಟರ್ ಮಾಡಿಸುವ ಪ್ರತಿಯೊಂದು ಹೊಸ ಚೀಟಿಗೂ ಹತ್ತು ಪೈಸಾ ವಸೂಲ್ಮಾಡಿ, ಅದರಿಂದ ಬಂದ ಹಣವನ್ನು ಬಡವರಿಗೆ ಖರ್ಚುಮಾಡಬಹುದು. ಇದರಂತೆ ಸ್ಪೆಷಲ್ ವಾರ್ಡಿಗೆ ಸೇರುವವರಿಂದ ಅಡ್ಮಿಷನ್ ಫೀ ಎಂದು ಒಂದು ರೂಪಾಯಿನಂತೆ ವಸೂಲ್ಮಾಡಿದರೆ ತಿಂಗಳಿಗೆ ಸಾವಿರಾರು ರೂಪಾಯಿಗಳ ಉತ್ಪನ್ನವಾಗುತ್ತದೆ. ಇದನ್ನು ಬಡವರಿಗೆ, ನಿರ್ಗತಿಕರಾದ ರೋಗಿಗಳಿಗೆ ಖರ್ಚುಮಾಡಬಹುದು ಎಂದು ಸಲಹೆ ಮಾಡುತ್ತೇನೆ.

ಆಸ್ಪತ್ರೆಗಳಲ್ಲಿ ಕೆಲಸಮಾಡುವ ನಾಲ್ಕನೇ ವರ್ಗದ ಮಹಿಳಾ ಸಿಬ್ಬಂದಿವರ್ಗದವರ ಮಕ್ಕಳಿಗೆ ವಾಣಿವಿಲಾಸ ಆಸ್ಪತ್ರೆಯಲ್ಲಿರುವಂತೆ ಜಿಲ್ಲಾ ಆಸ್ಪತ್ರೆಗಳಲ್ಲಿಯೂ ಒಂದೊಂದು ನೌಕರ ವರ್ಗದ ಕೆಲಸದವೇಳೆಯ ಶಿಶುಪಾಲನಾ ವ್ಯವಸ್ಥೆ, ಅಂದರೆ, ಕ್ರಷ್ ವ್ಯವಸ್ಥೆ ಕಲ್ಪಿಸಿದರೆ ನೌಕರರು ನೆಮ್ಮದಿಯಿಂದ ಕೆಲಸಮಾಡಲು ಅವಕಾಶಮಾಡಿದಂತಾಗುತ್ತದೆ.

ಬೆಂಗಳೂರಿನಲ್ಲಿ ಆಸ್ಪತ್ರೆಗಳಿಗೆ ಸಂಬಂಧಿಸಿದ ಅಂಬುಲೆನ್ಸ್ ವ್ಯವಸ್ಥೆ ತೃಪ್ತಿಕರವಾಗಿ ಕೆಲಸ ಮಾಡುತ್ತಿಲ್ಲ. ಇತರೆ ದೊಡ್ಡ ಸ್ಥಳಗಳಲ್ಲಿರುವಂತೆ ಸೆಂಟ್ರಲ್ ಅಂಬುಲೆನ್ಸ್ ವ್ಯವಸ್ಥೆ ಏರ್ಪಡಿಸಿ, ಅಲ್ಲಿಂದ ನೇರವಾಗಿ ರೋಗಿಗಳು ಅದರ ಉಪಯೋಗ ಪಡೆಯುವಂತೆ ಮಾಡಿದಲ್ಲಿ ಸಕಾಲಕ್ಕೆ ಅಂಬುಲೆನ್ಸ್ ಸಹಾಯ ಪಡೆಯಲು ಅನುಕೂಲವಾಗುತ್ತದೆ. ಆಸ್ಪತ್ರೆಗಳಲ್ಲಿ ನಿಧನರಾದವರನ್ನು ಸಾಗಿಸಲು ಟ್ಯಾಕ್ಸಿಗಳವರು ಬರುವುದಿಲ್ಲ. ಎಲ್ಲರಿಗೂ ವಾಹನ ಸೌಕರ್ಯ ಈಗ ದೊರೆಯುತ್ತಿಲ್ಲ. ಆಸ್ಪತ್ರೆಗಳಲ್ಲಿರುವ ಅಂಬುಲೆನ್ಸ್‌ಗಳನ್ನು ಇದಕ್ಕಾಗಿ ಉಪಯೋಗಿಸುವ ಹಾಗಿಲ್ಲ. ಆದ್ದರಿಂದ ಇದಕ್ಕಾಗಿಯೇ ಒಂದೆರಡು ವಾಹನಗಳು ಮುಖ್ಯ ಆಸ್ಪತ್ರೆಗಳಲ್ಲಿ ಇರುವಂತೆ ವ್ಯವಸ್ಥೆ ಮಾಡಬೇಕು. ಈ ಬಗ್ಗೆ ವೈದ್ಯ ಇಲಾಖೆಯವರು ತುರ್ತು ಗಮನಿಸಬೇಕೆಂದು ವಿನಂತಿಸುತ್ತೇನೆ.

ಸ್ಟೆರಿಲೈಜ್ ಮಾಡಿಸಿಕೊಂಡವರಿಗೆ 25 ರೂಪಾಯಿಗಳ ಸಹಾಯಧನ ಕೊಡುತ್ತಿದ್ದೀರಿ. ಅದನ್ನು ಪಡೆಯಲು ಕೊಂಕಣ ಸುತ್ತಿ ಮೈಲಾರಕ್ಕೆ ಹೋಗಿ ಬಂದರೂ ಒಮ್ಮೊಮ್ಮೆ ಓಡಾಡಿದ ಖರ್ಚು ಅಷ್ಟಾಗುತ್ತದೆ. ಈ ಪ್ರೋತ್ಸಾಹದ ಹಣವನ್ನು, ಯಾರು ಎಲ್ಲಿ ಸ್ಟೆರಿಲೈಜ್ ಮಾಡಿಸಿಕೊಳ್ಳುತ್ತಾರೋ ಅಲ್ಲಿಯ ಆಸ್ಪತ್ರೆಯ ಮುಖ್ಯಾಧಿಕಾರಿಯವರಿಂದಲೇ ಸಿಗುವಂತಹ ಏರ್ಪಾಡು ಮಾಡಿದರೆ ಒಳ್ಳೆಯದು. ಈಗ ಇದನ್ನೂ ನಿಲ್ಲಿಸಿದ್ದಾರೆಂದು ಕೇಳಿದೆ. ನಿಜವೇ ! ನಿಜವಾಗಿದ್ದರೆ 25 ರೂಪಾಯಿಗಳನ್ನು ಕೊಡುವುದನ್ನು ನಿಲ್ಲಿಸಬೇಡಿ, ಏಕೆಂದರೆ ಈ ಹಣವನ್ನು ಬಡ ಸಂಸಾರಿಗಳಿಗೆ ಕೊಡುವುದರಿಂದ, ಸಂತಾನ ನಿರೋಧ ಯೋಜನೆ ಯಶಸ್ವಿಯಾಗಲು ಅನುಕೂಲವಾಗುತ್ತದೆ. ತೆನ್ನಾಲ ರಾಮಕೃಷ್ಣನ ಸಲಹೆ ಕೊಡಬಯಸುತ್ತೇನೆ. ನಾಲ್ಕನೇ ಮಗುವಾಗಿ, ಐದನೇ ಮಗುವಿಗೆ ಹೆರಿಗೆಗಾಗಿ ಬಂದರೆ, ಇಂತಿಷ್ಟು ಎಂದು ತಲೆಗಂದಾಯ ವಿಧಿಸಿದರೆ ಸಂತಾನ ನಿರೋಧದ ಯಶಸ್ವಿಗೆ ತುಂಬ ನೆರವಾಗುತ್ತದೆಯೆಂದು ಹೇಳುತ್ತೇನೆ.

ತಿಂಗಳಿಗೆ 600 ರೂಪಾಯಿಗಳ ಮೇಲ್ಪಟ್ಟು ವೇತನ ಪಡೆಯುವವರಿಗೆ ಫ್ರೀ ಮೆಡಿಕಲ್ ಏಡ್ ಕೊಡುತ್ತಿದ್ದೀರಿ. ಹಣಕೊಡಲು ಶಕ್ತಿಯಿರುವವರಿಗೆ ಕೊಡುವುದಕ್ಕಿಂತ ಬಡನೌಕರರಿಗೆ ಈ ಸೌಲಭ್ಯ ಕೊಡಿಸಿದರೆ, ನೆನಸಿಕೊಳ್ಳುತ್ತಾರೆ. ಅಲ್ಲದೆ ನಿಮ್ಮನ್ನು ಹಾಡಿ ಹರಸುತ್ತಾರೆ.

ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕ ತರಬಯಸುತ್ತೇನೆ. 1958ರಲ್ಲಿ ಮೂರು ಲಕ್ಷ ರೂಪಾಯಿಗಳನ್ನು ಕೊಟ್ಟು ಬಟ್ಟೆ ಒಗೆಯುವ ಯಂತ್ರವನ್ನು ತಂದು, 7-8 ವರ್ಷಗಳಿಂದ ಹಾಗೆಯೇ ಇಟ್ಟದ್ದೀರಿ. ಅದನ್ನು ಒಡೆದು ಕೂಡ ನೋಡಿಲ್ಲ. ಟ್ರಾನ್ಸ್‌ಫಾರ್ಮರ್ ಇಲ್ಲವೆಂಬ ಕಾರಣದಿಂದ ಆ ಯಂತ್ರ ಮೂಲೆ ಗುಂಪಾಗಿದೆ. 3 ಲಕ್ಷ ರೂಪಾಯಿಗಳಿಗೆ 7-8 ವರ್ಷಗಳಿಗೆ ಬಡ್ಡಿ ಎಷ್ಟಾಗುತ್ತದೆ ಎಂಬುದನ್ನು ರೇವಾದೇವಿಯವರೊಂದಿಗೆ ಸಮಾಲೋಚಿಸಿನೋಡಿ. ಇದರ ನಷ್ಟವನ್ನು ಸರಿಪಡಿಸಲು ಕೂಡಲೆ ಕ್ರಮ ಕೈಕೊಳ್ಳುತ್ತಾರೆಂದು ನಂಬಿದ್ದೇನೆ.

ಪರದೇಶದ ಡಿಗ್ರಿ ಪಡೆದು ಬಂದಿರುವ ಕೆಲವು ಡಾಕ್ಟರ್‌ಗಳಿಗೆ ತುಂಬಾ ಹೆಮ್ಮೆಯಿರುವುದು ಅಲ್ಲಲ್ಲಿ ಕಂಡುಬರುತ್ತಿದೆ. ಇವರು ತಾವೇ ಆಸ್ಪತ್ರೆಯ ದಿಗ್ದರ್ಶಕರು ಎಂದು ಭಾವಿಸಿಕೊಂಡು, ಅರಿತು, ನುರಿತ, ಸ್ವದೇಶ ಪದವೀಧರರ ಕೆಲಸವನ್ನು ಅಲಕ್ಷತೆಯಿಂದ ನೋಡುವುದು ವೈದ್ಯಕೀಯ ವೃತ್ತಿಗೆ ಅಪಮಾನ. (ಹೊಸ ವೈದ್ಯನಿಗಿಂತ ಹಳೇ ರೋಗಿಯೇ ಬುದ್ಧಿವಂತ ಎಂಬಂತೆ,) ಈ ವಿದೇಶೀ ಪದವೀಧರರ ಬಗ್ಗೆ ಹೇಳುವಂತಾಗಬಾರದು ಎಂಬುದಕ್ಕಾಗಿ ಈ ವಿಚಾರವನ್ನು ಹೇಳುತ್ತಿದ್ದೇನೆ. ಸ್ಯಾನಿಟೋರಿಯಮ್ ಮೊದಲಾದ ಆಸ್ಪತ್ರೆಗಳಿಗೆ ಲಿಫ್ಟ್ ಹಾಕುವುದಕ್ಕೆ ಕೇಳಿಕೊಂಡಿದ್ದೆವು. ಇದುವರೆಗೂ ಹಾಕಿಲ್ಲ. ಮೊದಲು 40 ಸಾವಿರಕ್ಕೆ ಒಂದೊಂದು ಲಿಫ್ಟ್ ಸಿಗುತ್ತಿತ್ತು. ಈಗ 80 ಸಾವಿರವಾಗಿವೆ. ರೋಗಿಗಳನ್ನು ಮೇಲಕ್ಕೆ ಕರೆದುಕೊಂಡು ಹೋಗುವುದು ಬಹಳಕಷ್ಟದ

(ಶ್ರೀಮತಿ ನಾಗರತ್ನಮ್ಮ ಹಿರೇಮಠ್)

ಕೆಲಸವಾದ್ದರಿಂದ ಈಗಲಾದರು ಕೂಡ ಬಹಳ ಜಾಗ್ರತೆ ಈ ಕೆಲಸವನ್ನು ಆರೋಗ್ಯ ಮಂತ್ರಿಗಳು ಮಾಡಿಸಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಆರೋಗ್ಯ ಮಂತ್ರಿಗಳು ತುಂಬಾ ಒಳ್ಳೆಯವರು. "Too good is too bad" ತುಂಬಾ ಒಳ್ಳೆಯತನ ತುಂಬಾ ಕೆಟ್ಟದ್ದು. ವೈದ್ಯ ಇಲಾಖೆ ಮಹತ್ವದ ಇಲಾಖೆ. ಆರೋಗ್ಯ ಮಂತ್ರಿಗಳಿಗೆ ಅಂತಃಚಕ್ಷುಗಳು ಬೇಕೇ ಬೇಕು. ಈ ಅಂತಃಚಕ್ಷುಗಳನ್ನು ವರ್ಗಾವರ್ಗಿಗಳ ವಿಷಯದಲ್ಲಿ ಉಪಯೋಗಿಸುತ್ತಿಲ್ಲ. ಇವರಿಗೆ ಗೊತ್ತಾಗದಂತೆ ಅನೇಕ ವರ್ಗಾವರ್ಗಿಗಳು ನಡೆಯುತ್ತಿವೆ. ತಮ್ಮ ಇಲಾಖೆಯಲ್ಲಿ ಇಂಥ ಕೆಲಸಮಾಡುವವರು ಯಾರೇ ಆಗಿರಲಿ, ಅವರ ಮೇಲೆ ತೀವ್ರ ಕ್ರಮಕೈಗೊಳ್ಳಬೇಕು.

ವೈದ್ಯರಾಜ ನಮಸ್ತುಭ್ಯಂ। ಯಮರಾಜ ಸಹೋದರ।।
ಯಮಸ್ಯ ಹರತೇ ಪ್ರಾಣಂ। ವೈದ್ಯರಾಜೋಧನಂ ಸಹ।।

ಎಂಬಂತೆ ಜನತೆಯಲ್ಲಿ ತಪ್ಪು ಭಾವನೆ ಉಂಟಾಗದಂತೆ ವೈದ್ಯ ಇಲಾಖೆ ಕ್ರಿಯಾ, ಧರ್ಮ, ಪ್ರಾಮಾಣಿಕತೆಯಿಂದ ನಡೆಯಲೆಂದು ಹಾರೈಸುತ್ತೇನೆ. ಈ ಒಂದು ಬೇಡಿಕೆಯ ಮೇಲೆ ಅನುಮೋದಿಸಿ ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

4-00 P.M.

ಶ್ರೀಮತಿ ರತ್ನಮ್ಮ ಮಾಧವರಾವ್ (ಶಿವಮೊಗ್ಗ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರತಕ್ಕ ಮೆಡಿಕಲ್ ಮತ್ತು ಪಬ್ಲಿಕ್ ಹೆಲ್ತ್ ಡಿಮ್ಯಾಂಡುಗಳನ್ನು ಅನುಮೋದಿಸುತ್ತಾ ಕೆಲವೇ ಸಲಹೆಗಳನ್ನು ಮಾಡಬಯಸುತ್ತೇನೆ. ಈಗಾಗಲೇ ಮಾನ್ಯ ಸಹೋದರಿಯವರು ಅನೇಕ ಸಲಹೆಗಳನ್ನು ಇಟ್ಟಿದ್ದಾರೆ. ನಾನು ಕೆಲವು ಮಾತುಗಳನ್ನು ಮಾತ್ರ ಆಡಲು ಇಷ್ಟಪಡುತ್ತೇನೆ. ಮಾನವನ ಜೀವನದಲ್ಲಿ ಮುಖ್ಯವಾದುದು ಆರೋಗ್ಯ. ಇಂತಹ ಬೇಡಿಕೆಗೆ ಕೊಟ್ಟಿರುವ ಹಣ ಏನೇನು ಸಾಲದು. ಎರಡರಷ್ಟಾದರೂ ಕೊಟ್ಟಿದ್ದರೆ, ನೀವು ಏನು ಪ್ರೊಗ್ರಾಮ್ ಹಾಕಿಕೊಂಡಿದ್ದೀರಿ, ಅದು ಆಗುತ್ತಾ ಇತ್ತು. ಈಗಲಾದರೂ ಕೂಡ ಅರ್ಥ ಸಚಿವರು ಹೇಗಾದರೂ ಮಾಡಿ ಯಾವುದರಿಂದಲಾದರೂ ಕೊಡಿ, ಅಂತೂ ಹಣ ಹೆಚ್ಚಿಗೆ ಕೊಡಿ ಎಂದು ಹೇಳಬಯಸುತ್ತೇನೆ. ಮೊಟ್ಟಮೊದಲನೆಯದಾಗಿ ನನ್ನ ಸಲಹೆ ಏನು ಎಂದರೆ ಗ್ರಾಮಾಂತರಗಳಲ್ಲಿ ಹಳ್ಳಿಗಳ ಕಡೆ ಅದರಲ್ಲಿಯೂ ಮಲೆನಾಡಿನ ಕಡೆ ಪ್ರತಿಯೊಬ್ಬ ನರ್ಸ್ ಮತ್ತು ಡಾಕ್ಟರುಗಳಿಗೆ ಕ್ವಾರ್ಟರ್ಸ್ ಅವಶ್ಯಕವಾಗಿ ಮಾಡಿಕೊಡಬೇಕು. ಈಗ ಹಳ್ಳಿಗಳ ಕಡೆ ಹಾಕಿದರೆ, ಯಾವ ನರ್ಸೂ, ಡಾಕ್ಟರೂ ಹೋಗುವುದಿಲ್ಲ ಹಿಂಜರಿಯುತ್ತಾರೆ. ವಾಸಕ್ಕೆ ಯೋಗ್ಯ ಮನೆಗಳನ್ನು ಅತ್ಯಾವಶ್ಯಕವಾಗಿ ಮಾಡಿಕೊಡಲೇಬೇಕು. ಅದರಲ್ಲೂ ಹೆಣ್ಣು ಮಕ್ಕಳಂತೂ ಒಬ್ಬೊಬ್ಬರೇ ಇರುತ್ತಾರೆ. ಸರಿಯಾದ ಮನೆ ಸಿಕ್ಕದಿದ್ದರೆ ಹೋಗಿರಲು ಧೈರ್ಯವಿರೋಲ್ಲ. ಈಗಾಗಲೇ ಮಾನ್ಯ ಸಹೋದರಿಯವರು ಇದರ ಬಗ್ಗೆ ಹೇಳಿದ್ದಾರೆ. ನಾನೂ ಕೂಡ ಅದನ್ನು ಒತ್ತಿ ಹೇಳುತ್ತೇನೆ. ತಾವೇನೋ ಯೋಜನೆ ಇಟ್ಟುಕೊಂಡಿದ್ದೀರಿ. ತಾವು ಪ್ರೊಗ್ರಾಂನಲ್ಲಿ ಮನೆಗಳಿಗಾಗಿಯೇ (Quarters) 1961ನೇ ಇಸವಿಗೆ ಎರಡೂವರೆ ಕೋಟಿ ರೂಪಾಯಿ ಕ್ವಾರ್ಟರ್ಸ್‌ಗಾಗಿ ಬೇಕು ಎಂದು ಪ್ರೊಗ್ರಾಂ ಹಾಕಿದ್ದೀರಿ. 1961ನೇ ಇಸವಿ ಇತ್ತೀಚೆಗೆ 80 ಆಸ್ಪತ್ರೆಗಳು ಹೆಚ್ಚಾಗಿವೆ. ಅಂದ ಮೇಲೆ ಡಾಕ್ಟರ್ಸ್, ನರ್ಸ್ ಇವರೂ ಹೆಚ್ಚು ಬೆಳೆದಿದ್ದಾರೆ. ಒಂದು ವರ್ಷಕ್ಕೆ 25 ಲಕ್ಷ ರೂಪಾಯಿ ಕೊಟ್ಟರೆ,10 ವರ್ಷಗಳಲ್ಲಿ ಕಾರ್ಟರ್ಸ್ ಎಲ್ಲ ಕಡೆ ಆಗಬಹುದು. ಅಂಕಿಅಂಶಗಳ ಪ್ರಕಾರ ನೀವು ಕೇವಲ 70 ಕ್ವಾರ್ಟರ್ಸ್ ಮಾತ್ರ ಕಟ್ಟಿದ್ದೀರಿ. ಪ್ರತಿ ವರ್ಷ 50 ಲಕ್ಷ ರೂಪಾಯಿಗಳನ್ನು ಕ್ವಾರ್ಟರ್ಸ್‌ಗಾಗಿಯೇ ಕೊಡಬೇಕು ಎಂದು ನಾನು ಸಲಹೆ ಮಾಡುತ್ತಿದ್ದೇನೆ. ಇನ್ನು ಡಿಸ್ಪೆನ್ಸರಿಗಳಲ್ಲಿ ಡ್ರಗ್ಸ್‌ಗಾಗಿ ಒಂದು ಡಿಸ್ಪೆನ್ಸರಿಗೆ 1000 ರೂಪಾಯಿಯಂತೆ ಕೊಟ್ಟಿದ್ದೀರಿ. ಇದು ಸಾಕೇ? ಇದರಲ್ಲಿ ಎಲ್ಲಾ ಆಗುತ್ತದೆಯೇ? ಖಂಡಿತ ಆಗುವುದಿಲ್ಲ, ಇದನ್ನು ಎರಡು ಸಾವಿರ ರೂಪಾಯಿ ಮಾಡಬೇಕು, ಹಾಗೆ ಸ್ಯಾಂಕ್ಷನ್ ಮಾಡಿ ಎಂದು ಹೇಳಬಯಸುತ್ತೇನೆ. ಉದಾಹರಣೆಗೆ ಶಿವಮೊಗ್ಗ ಡಿಸ್ಟ್ರಿಕ್ಟ್‌ನಲ್ಲಿ ಕುಂಸಿ ಡಿಸ್ಪೆನ್ಸರಿಗೆ 1,200 ರೂಪಾಯಿ ಕೊಟ್ಟಿದ್ದಾರೆ ನಾನು ಅಲ್ಲಿನ ಪರಿಸ್ಥಿತಿ ನೋಡಿದ್ದೇನೆ. ಏನೇನೂ ಸಕಾಗುವುದಿಲ್ಲ. ಎರಡು ಸಾವಿರ ರೂಪಾಯಿ ಆದರೂ ಸ್ಯಾಂಕ್ಷನ್ ಮಾಡಬೇಕು. M.B.B.S. ಮಾಡಿಕೊಂಡು ಎಂ.ಡಿ; ಎಂ.ಎಸ್. ಡಿ. ಪಿ. ಎಚ್. D. P. M. ಪರದೇಶದಲ್ಲಿ ಪಾಸ್‌ಮಾಡಿಕೊಂಡು ಬರುತ್ತಾರೆ. ಅವರಿಗೆ ಹೆಚ್ಚಿಗೆ ಸಂಬಳ ಕೊಡುತ್ತಾ ಇಲ್ಲ. ಕೊನೆಯ ಪಕ್ಷ ನೂರು ರೂಪಾಯಿ ಅಲೋಯನ್ಸ್ ಆದರೂ ಅಂಥವರಿಗೆ

ಕೊಟ್ಟರೆ ಓದಿದ್ದನ್ನು ಸಾರ್ಥಕ ಪಡಿಸಿಕೊಂಡು ಯಶಸ್ವಿಯಾಗಿ ಕೆಲಸ ಮಾಡುತ್ತಾರೆಂದು ನಾನು ಸಲಹೆ ಮಾಡುತ್ತೇನೆ. ಮೆಡಿಕಲ್ ಅಫೀಸರ್ಸ್‌ಗೆ ಸ್ಟಾರ್ಟಿಂಗ್ 250 ರಿಂದ 450 300 ರಿಂದ 700 ರವರೆಗೆ ಇದೆ. ಸ್ಟಾರ್ಟಿಂಗ್ 300 ರೂಪಾಯಿ starting ಎಲ್ಲರಿಗೂ ಕೊಡುವುದು ಈಗಿನ ಅಭಾವ ಪರಿಸ್ಥಿತಿಯಲ್ಲಂತೂ ತುಂಬಾ ಆವಶ್ಯಕ ಎಂದು ನನ್ನ ಸಲಹೆ ಆಂಧ್ರ ಪ್ರದೇಶ ಮತ್ತು ಕೆಲವು ಕಡೆ ಹಾಗೆ ಮಾಡಿದ್ದಾರೆಂದು ತಿಳಿದೆ ಅದರಂತೆ ನೀವು ಕೊಡಬೇಕೆಂದಲ್ಲ. ಆದರೂ ಪರಿಸ್ಥಿಯನ್ನರಿತು ನೀವು ಹೆಚ್ಚಿಗೆ ಮಾಡಬೇಕು ಎಂದು ಹೇಳಬಯಸುತ್ತೇನೆ. ಎಲ್. ಎಂ. ಪಿ. ಮಾಡಿಕೊಂಡವರಿಗೆ 10 ವರ್ಷ ಸರ್ವಿಸ್ ಆಗಿದ್ದರೆ, 300 ರೂಪಾಯಿ ಆದರೂ ಕೊಟ್ಟು, ಗೆಜೆಟೆಡ್ ಆಫೀಸರನ್ನಾಗಿ ಮಾಡಬೇಕು. ಅದರಿಂದ ಅವರಿಗೆ ಉತ್ತೇಜನ ಕೊಟ್ಟಂತಾಗುತ್ತದೆ. ಹೆಲ್ತ್ ಸರ್ವೀಸಸ್, ಮಲೇರಿಯಾ ಮತ್ತು ಪ್ಲೇಗ್ ವ್ಯಾಕ್ಸಿನೇಷನ್ ಕೆಲಸ ಮಾಡುವವರಿಗೆ ಎಕ್ಸ್‌ಟ್ರಾ ಅಲೋಯನ್ಸ್ ಕೊಟ್ಟರೆ ಅವರು ಶ್ರದ್ಧೆಯಿಂದ ದುಡಿಯುತ್ತಾರೆ. ಗ್ರಾಮಾಂತರ ಪ್ರದೇಶದಲ್ಲಿ ಸಿಬ್ಬಂದಿ ವರ್ಗದವರಿಗೆ ಹೆಚ್ಚಿಗೆ ಭತ್ಯ ಕೊಡಬೇಕು. ಆಯುರ್ವೇದ ಇಲಾಖೆ ವಿಚಾರವಾಗಿ ಹೇಳಬೇಕಾದರೆ ಆಯುರ್ವೇದ ಡಾಕ್ಟರಿಗೆ ಸಂಬಳ ತುಂಬಾ ಕಡಿಮೆ. ಯೂನಿಫಾರಂ ಆಗಿ ಇಂಗ್ಲೀಷ್ ಡಾಕ್ಟರ್ಸ್‌ಗಳಿಗೆ ಏನು ಕೊಡುತ್ತೀರೋ, ಅದೇ ಸಂಬಳವನ್ನೇ ಕೊಡಬೇಕೆಂದು ನನ್ನ ಸಲಹೆ. ಮಾನ್ಯ ಸದಸ್ಯರೊಬ್ಬರು, ಒಬ್ಬ ಡಾಕ್ಟರು ಕುಡಿದು ಇಂಜಕ್ಷನ್ ಕೊಟ್ಟರು, ಬಹಳ ನೋವಾಯಿತು ಎಂದು ದೂರು ಕೊಟ್ಟರು. ಇಂಜಕ್ಷನ್ ತೆಗೆದುಕೊಳ್ಳುವವರು ನನ್ನ ಹಾಗೆ ಇದ್ದರೆ ಕಷ್ಟವಾದೀತು. ಸೂಜಿ ಚುಚ್ಚಿದರೆ ನೋವು ಆಗುವುದು ಖಂಡಿತ. ಡಾಕ್ಟರು ಕುಡಿದು ಬಂದು ಇಂಜಕ್ಷನ್ ಕೊಟ್ಟರು. ಅವರು ಕುಡಿದಿದ್ದರು ಎನ್ನುವ ಅಪಾದನೆಯನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಇದನ್ನು ಕೇಳಿ ನನಗೆ ತುಂಬಾ ವ್ಯಸನವಾಯಿತು. ಆ ಯುವಕ ಡಾಕ್ಟರ್ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಆತ ಕೇರಳದವರು ನಾನು ನೋಡಿದ್ದೇನೆ. ನಿರಪರಾಧಿಗಳಿಗೆ ಅನ್ಯಾಯ ಮಾಡಬಾರದು. ಮೈಸೂರು ರಾಜ್ಯದಲ್ಲಿ ವೈದ್ಯಕೀಯ ವೃತ್ತಿಗೆ ಹೆಚ್ಚು ಗೌರವ ಇದೆ. ಡಾಕ್ಟರ್ ಕುಡಿದು ಆಸ್ಪತ್ರೆಗೆ ಬಂದಿದ್ದಾರೆ ಎಂದು ಅಪಾದನೆ ಮಾಡಬಾರದು. ಇದನ್ನು ಹೊರಗಿನವರು ತಿಳಿದರೆ ಏನೆಂದು ತಿಳಿದಾರು ? ಇಷ್ಟು ಹೇಳಿ ಈ ಡಿಮ್ಯಾಂಡನ್ನು ಅನುಮೋದಿಸಿ ಕೆಲವು ಮಾತುಗಳನ್ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಭಾಸ್ಕರಶೆಟ್ಟಿ (ಕಾಪು).—ಮಾನ್ಯ ಸಭೆಯ ಮುಂದೆ ಮಂಡಿಸಿರುವ ಜನಾರೋಗ್ಯ ಮತ್ತು ವೈದ್ಯಕೀಯ ಇಲಾಖೆಗೆ ಬೇಕಾದ 10 ಕೋಟಿ 3 ಲಕ್ಷ 99 ಸಾವಿರ ರೂಪಾಯಿಗಳ ಬೇಡಿಕೆಗಳ ಮೇಲೆ ಒಂದೆರಡು ಮಾತುಗಳನ್ನಾಡಲು ಬಯಸುತ್ತೇನೆ. ನಮ್ಮ ಆರೋಗ್ಯ ಇಲಾಖೆ ಕೈಕೆಳಗಿರುವ ಆಸ್ಪತ್ರೆಗಳು ಅಧ್ವಾನವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದು ದೇವಾಲಯ ಇದ್ದರೆ ದೇವರು ಇಲ್ಲ, ದೇವರು ಇದ್ದರೆ ಪೂಜಾರಿ ಇಲ್ಲ, ಪೂಜಾರಿ ಇದ್ದರೆ, ಪೂಜೆ ಇಲ್ಲ, ಈ ಮೂರು ಇದ್ದರೆ, ತೀರ್ಥಪ್ರಸಾದ ಇಲ್ಲ ಎನ್ನುವ ಹಾಗೆ ಆಸ್ಪತ್ರೆ ಇದ್ದರೆ ಕಟ್ಟಡ ಇಲ್ಲ, ಕಟ್ಟಡ ಇದ್ದರೆ ಡಾಕ್ಟರ್ ಇಲ್ಲ, ಡಾಕ್ಟರ್ ಇದ್ದರೆ ಮದ್ದು ಇಲ್ಲ. ಆಸ್ಪತ್ರೆಗಳ ಪರಿಸ್ಥಿತಿ ಈ ರೀತಿ ಆಗಿದೆ. ಹಳ್ಳಿಗಳಲ್ಲಿ ಆಸ್ಪತ್ರೆಗಳನ್ನು ನೋಡಿದರೆ, ಕಟ್ಟಡ ಇಲ್ಲ. ಡಾಕ್ಟರ್ ಇಲ್ಲ. ಡಾಕ್ಟರ್ ಇದ್ದರೆ ಮದ್ದು ಇಲ್ಲ. ಕೆಲವು ಕಡೆ ಡಾಕ್ಟರು ಮತ್ತು ಇತರ ಸ್ಟಾಫ್ ತುಂಬಾ ಇದ್ದರೆ, 12-13 ಸಾವಿರ ರೂಪಾಯಿವರೆಗೆ ಸಂಬಳ ಆದರೆ ಅಲ್ಲಿಗೆ ಔಷಧಿ ಬರುವುದು ಕೇವಲ ಎರಡು-ಎರಡೂವರೆ ಸಾವಿರ ರೂಪಾಯಿದ್ದು. ಮೂಗಿಗಿಂತ ಭಾರವಾದ ಮೂಗತಿ ಇದ್ದ ಹಾಗೆ ಆಗಿದೆ. ಇನ್ನು ಆಸ್ಪತ್ರೆಗಳ ವಿಚಾರವಾಗಿ ನನ್ನ ಮಿತ್ರರಾದ ಶ್ರೀ ದಯಾನಂದ ಕಲ್ಲೆಯವರು ಆಗಲೇ ಹೇಳಿದ್ದಾರೆ. ಮೇಲ್ಮನೆಯ ಸದಸ್ಯರೊಬ್ಬರು ವಿಕ್ಟೋರಿಯಾ ಆಸ್ಪತ್ರೆಗೆ ಹೋದಾಗ ಆ ಸದಸ್ಯರ ವಿಚಾರದಲ್ಲಿ ನಡೆದುಕೊಂಡ ವರ್ತನೆಯ ಬಗ್ಗೆ ಹೇಳಿದ್ದಾರೆ. ಅವರು ಅಲ್ಲಿನ ಮೇಲಾಧಿಕಾರಿಗಳ ಹತ್ತಿರ ಹೋದಾಗ ಅವರನ್ನು ಅಡ್ಮಿಟ್ ಮಾಡಬೇಕಾದರೆ, ಸ್ಪೆಷಲಿಸ್ಟ್ ಯಾರು ಇದ್ದಾರೋ ಕೇಳಿಕೊಳ್ಳದ ಹೊರತು ಅಡ್ಮಿಟ್ ಮಾಡುವುದಕ್ಕಾಗುವುದಿಲ್ಲ. ಎಂದು ಹೇಳಿದರಂತೆ. ಆ ಸ್ಪೆಷಲಿಸ್ಟ್ ಅಡ್ಮಿಟ್ ಮಾಡಿಕೊಂಡ ಮೇಲೆ ಏತಕ್ಕೆ ನನ್ನ ಹತ್ತಿರ ಕೇಳದೆ ಅವರನ್ನು ಆಸ್ಪತ್ರೆಗೆ ಅಡ್ಮಿಟ್ ಮಾಡಿಸಿದಿರಿ ಎಂದು ಜೋರು ಮಾಡಿದ ಪರಿಸ್ಥಿತಿ ಬಂದಿತಂತೆ. ಒಬ್ಬ ಮಾನ್ಯ ಸದಸ್ಯರಿಗೇ ಹೀಗಾದರೆ, ಬೇರೆಯವರ ಮಾತು ಏನು ಹೇಳಬೇಕು ! ಆಸ್ಪತ್ರೆಗಳಲ್ಲಿ ಬಡ ಜನರಿಗೆ ಸೌಲಭ್ಯ ಸಿಕ್ಕುವುದು ದುರ್ಲಭವಾಗಿದೆ. ಆದುದರಿಂದ ಶ್ರೀಮತಿ ನಾಗರತ್ನಮ್ಮ ಹೀರೇಮಠ್‌ರವರು ಹೇಳಿದ ಹಾಗೆ ತಮ್ಮ ಒಳ್ಳೆಯತನವನ್ನು ದುರುಪಯೋಗ ಮಾಡದಂತೆ ನೋಡಿಕೊಳ್ಳಬೇಕು ಎಂದು ಒತ್ತಿ ಹೇಳುತ್ತೇನೆ. ಸಾಂಕ್ರಾಮಿಕ ರೋಗಗಳ ವಿಷಯವಾಗಿ ತಾವು ಟಾರ್ಗೆಟ್ಟನ್ನು ಮೀರಿ ಹೋಗಿದ್ದೀರಿ ಎಂದು ಹೇಳಿದ್ದಾರೆ. ಸಾಂಕ್ರಾಮಿಕ ರೋಗಗಳಾದ ಪ್ಲೇಗು, ಕಾಲರಾ, ರೋಗಗಳಿಂದ ಜನಗಳು ಸಾಯುತ್ತಾ ಇದ್ದಾರೆ. ಕೋಲಾರ ಮಾತ್ರ ಅಲ್ಲದೆ ಬೆಂಗಳೂರು ಜಿಲ್ಲೆಯಲ್ಲಿ ಸಿಡುಬು ರೋಗದಿಂದ ತುಂಬಾ ಜನ ಸತ್ತು ಹೋದ ಪರಿಸ್ಥಿತಿ ಇದೆ. ಅದಕ್ಕಾಗಿ ತಾವು ಈ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಹೆಚ್ಚಾದ ಮದ್ದನ್ನು ಕೊಡಿಸಿಕೊಡಬೇಕು. ಅದು

(ಶ್ರೀ ಬಿ. ಭಾಸ್ಕರ ಶೆಟ್ಟಿ)

ಮಾತ್ರವಲ್ಲದೆ, ಮುಂಜಾಗರೂಕತೆ ಕ್ರಮಗಳನ್ನು ಅತಿ ಶೀಘ್ರವಾಗಿ ತೆಗೆದುಕೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಆನೆಕಾಲು ರೋಗ ವಿಶೇಷವಾಗಿ ಹರಡುತ್ತಾ ಬರುತ್ತಿದೆ. ಎಷ್ಟು ತಡೆದರೂ ಈ ರೋಗ ಒಂದೇ ಸಮನೆ ಇನ್ನೂ ಇತರ ಪ್ರದೇಶಗಳಿಗೆ ಹರಡುತ್ತಾ ಇದೆ. ಅದು ಹರಡದಂತೆ ನೋಡಬೇಕು.

ಕುಟುಂಬ ಯೋಜನೆಯ ವಿಷಯ ಒಂದೆರಡು ಮಾತು ಹೇಳಬಯಸುತ್ತೇನೆ. ಕುಟುಂಬ ಯೋಜನೆ ಬಂತು ಹೋಯಿತು. ಆಕಾಶ ಬಿರಿಯುವಷ್ಟು ಆರ್ಭಟಿಸಿದರೂ ಕೂಡ ಒಂದು ಅಂಗುಲದಷ್ಟು ಕೂಡ ಅಲುಗಾಡಲಿಲ್ಲ. 1956-57ರಲ್ಲಿ 41.7 ಜನನ ಆಗುತ್ತಾ ಇದ್ದರೆ, 1961-62 ನೇ ಇಸವಿಯಲ್ಲಿ 41.3ಕ್ಕೆ ಬಂದು ನಿಂತಿದೆ. ಅಂದರೆ ಪ್ರತಿ ಸಾವಿರಕ್ಕೆ 0·4 ಮಾತ್ರ ಜನಸಂಖ್ಯೆಯಲ್ಲಿ ಕಡಿಮೆಯಾಗಿದೆ. ಹೀಗೆ ಇದ್ದು, ಕುಟುಂಬ ಯೋಜನೆಗೆ ಎಷ್ಟು ಖರ್ಚು ಮಾಡಿದ್ದಾರೆಯೋ ಅಷ್ಟು ಅದು ಫಲಕಾರಿ ಯಾಗಲಿಲ್ಲ. ಮಾತ್ರವಲ್ಲದೆ ಇನ್ನೊಂದು ವಿಷಯವನ್ನು ಹೇಳಬಯಸುತ್ತೇನೆ. ಇಂದು ಕುಟುಂಬ ಯೋಜನೆಗಾಗಿ ಏನೇನು ಸಲಕರಣೆಗಳನ್ನು ಕೊಡುತ್ತಾ ಇದ್ದೀರೋ, ಆ ಸಲಕರಣೆಗಳು ಕುಟುಂಬ ಇಲ್ಲದವರಿಗೆ ಇವತ್ತಿನ ದಿವಸ ಸೇರುತ್ತಾ ಇವೆ, ಇದಕ್ಕೆ ಬೇಕಾದರೆ ನಿದರ್ಶನಗಳನ್ನು ನಾನು ಕೊಡುತ್ತೇನೆ. ನಿಮ್ಮ ಇವತ್ತಿನ ಹೆಲ್ತ್ ವರ್ಕರ್ಸ್ ಏನಿದ್ದಾರೆ, ಅವರಿಗೆ ತಿರುಗಲಿಕ್ಕೆ ಕಷ್ಟವಾಗಿ, ಇದೆಲ್ಲಾ ಅವರ ಮಿತ್ರರಿಗೋ ಅಥವಾ ಇನ್ನುಳಿದವರಿಗೋ ಹೋಗುತ್ತಾ ಇದೆ. ಲೆಕ್ಕಪತ್ರಗಳನ್ನು ಮಾತ್ರ ಇಂತಿಂಥವರಿಗೆ ಕೊಡಲಾಗಿದೆ ಎಂದು ತೋರಿಸುತ್ತಾರೆ. ಇದು ನಿಜವಾಗಿಯೂ ಎಲ್ಲಿ ಹೋಗಬೇಕೋ ಅಲ್ಲಿ ಹೋಗಿ ಮುಟ್ಟುವುದಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಇನ್ನು ಸೂಲಗಿತ್ತಿಯರ ವಿಷಯದಲ್ಲಿ ನನ್ನ ಮಿತ್ರರೆಲ್ಲಾ ಹೇಳಿದರು. ಹಳ್ಳಿಗಳಲ್ಲಿ ಇವರ ಅಭಾವವಿದೆ ಎಂದು ; ಸರಿ ಅದನ್ನು ನಾನು ಒಪ್ಪುತ್ತೇನೆ. ಆದರೆ, ಅದೇ ರೀತಿ ಅತಿವೃಷ್ಟಿ ಕೂಡ ಇದೆ. ನಮ್ಮ ಕಾಪುವಿನಲ್ಲಿ ನಾನು ಹೇಳುವುದಾದರೆ, ಮಣಿಪಾಲ್ ಮೆಡಿಕಲ್ ಹೆಲ್ತ್ ಸೆಂಟರಿನಲ್ಲಿ ಮೂರು ಜನ ಸೂಲಗಿತ್ತಿಯರು ಇದ್ದಾರೆ. ಮತ್ತೊಂದು ತಾಲ್ಲೂಕ್ ಬೋರ್ಡ್ ನಡೆಸತಕ್ಕ ಡಿಸ್ಪೆನ್ಸರಿಯಲ್ಲಿ ಮೂರು ಮಂದಿ ಇದ್ದಾರೆ. ಅವರ ಕೆಲಸ ಏನೆಂದರೆ, ಇಡೀ ಓಡಾಡುವುದೇ ವಿನಾ, ಬೇರೇನೂ ಇಲ್ಲ. ಕೆಲವರು ಹೇಳುತ್ತಾರೆ, ಬೇಸಿಕ್ ಹೆಲ್ತ್ ವರ್ಕರ್ಸ್ ಎಂದು, ಕೆಲವರು ಹೇಳುತ್ತಾರೆ, ಅಕ್ಸಿಲರಿ ಮಿಡ್‌ವೈಫ್ಸ್ ಎಂದು. ಈ ತರಹ ಇರುವುದಲ್ಲದೆ, ಅವರ ಕರ್ತವ್ಯವೇನು, ಅವರು ಏನು ಮಾಡಬೇಕೆಂಬುದು ಯಾರಿಗೂ ಗೊತ್ತಿಲ್ಲ. ಆದುದರಿಂದ ನಾನು ಹೇಳುವುದೇನೆಂದರೆ, ಈ ರೀತಿಯಲ್ಲಿ ಅನಾವಶ್ಯಕವಾಗಿ ಸೂಲಗಿತ್ತಿಯವರ ರಾಜ್ಯವನ್ನೇ ನಿರ್ಮಾಣ ಮಾಡಬೇಡಿ. ಮತ್ತು ಈ ಮಣಿಪಾಲ್ ಆಸ್ಪತ್ರೆ ಮತ್ತು ನಿಮ್ಮದನ್ನು ಎರಡನ್ನೂ ಒಟ್ಟಿಗೆ ಮಾಡಿದರೆ, ಒಳ್ಳೆಯದಾಗುತ್ತದೆ, ಮತ್ತು ಅದರಿಂದ ಎರಡು ಮೂರು ಜನ ಸೂಲಗಿತ್ತಿಯವರನ್ನು ಉಳಿಸಿದಂತಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಈ ಹುಚ್ಚರ ಆಸ್ಪತ್ರೆಗಳನ್ನು ನೋಡಿದರೆ, ಇವತ್ತು ಕಾಂಗ್ರೆಸಿನವರ ಶಾಪದಿಂದಾಗಿ, ಬೆಂಗಳೂರಿನ ಹುಚ್ಚರ ಆಸ್ಪತ್ರೆಯಲ್ಲಿ 700 ಜನರ ಪೇಶೆಂಟುಗಳ ಪೈಕಿ ಸಾಧಾರಣ 235 ಮಂದಿ ದಕ್ಷಿಣ ಕನ್ನಡ ಜಿಲ್ಲೆಯವರಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯವರು ಇದರಲ್ಲಿ ಜಾಸ್ತಿಯಾಗಲು ಕಾರಣ ಈ ಕಳ್ಳಭಟ್ಟಿ ಸರಾಯಿಯೇ ಇದಕ್ಕೆ ಮೂಲ ಎಂದು ನಾನು ತಿಳಿಯುತ್ತೇನೆ. ಹೀಗೆ ಇದ್ದುದರಿಂದ ನಾನಾದರೂ ಇಲ್ಲಿ ಹೇಳುತ್ತೇನೆ, ಏನೆಂದರೆ, ನಮ್ಮ ಮಂಗಳೂರಿನಲ್ಲಿ ಒಂದು ಹುಚ್ಚರ ಆಸ್ಪತ್ರೆಯನ್ನು ನಿರ್ಮಾಣಮಾಡಬೇಕು. ಇಲ್ಲದಿದ್ದರೆ ಮಂಗಳೂರಿನವರಿಗೆ, ಅದರಲ್ಲೂ ಈ ಹುಚ್ಚರಾಸ್ಪತ್ರೆಗೆ ಬರಲು ತುಂಬಾ ಕಷ್ಟವಾಗುತ್ತದೆ. ಇದರಿಂದ ಅಲ್ಲಿ ಮಾಡಿದರೆ ಬಡ ಜನರಿಗೆ ತುಂಬಾ ಅನುಕೂಲವಾಗುತ್ತದೆ ಎಂದು ನಾನು ಹೇಳುತ್ತೇನೆ. ನಮ್ಮ ಮಂಗಳೂರಿನ ಆಸ್ಪತ್ರೆಯು ಸಾಧಾರಣ 700 ಹಾಸಿಗೆಗಳಿಂದ ಕೂಡಿದ್ದಾಗಿದೆ. ಹಿಂದಿನ ಆರೋಗ್ಯ ಮಂತ್ರಿಗಳೂ ಕೂಡ ಹೇಳುತ್ತಿದ್ದರು. ಇಲ್ಲಿ ಒಂದು ಮೆಡಿಕಲ್ ಕಾಲೇಜ್ ಮಾಡಬೇಕೆಂದು. ಇದರಿಂದ, ತಾವು ಇದನ್ನು ಆದಷ್ಟು ಬೇಗ ಕಾರ್ಯಗತ ಮಾಡಬೇಕೆಂದು ಹೇಳುತ್ತೇನೆ. ನಮ್ಮ ಮೈಸೂರು ರಾಜ್ಯದಲ್ಲಿ ಅತಿ ದೊಡ್ಡದಾದ ಒಂದೆರಡು ಆಸ್ಪತ್ರೆಗಳನ್ನು ಬಿಟ್ಟರೆ, ಅತಿ ದೊಡ್ಡದಾಗಿರುವುದು ಮತ್ತು ಮೂರನೆಯದು ಮಂಗಳೂರಿನ ಆಸ್ಪತ್ರೆ. ಇಲ್ಲಿ ಕೆಲವು ಸಂದರ್ಭಗಳಲ್ಲಿ ಬೇಕಾದ ಸೌಕರ್ಯಗಳಿಲ್ಲದೆ ಬಡ ಜನರಿಗೆ ತುಂಬಾ ತೊಂದರೆಯುಂಟಾಗಿದೆ. ಅದಕ್ಕೋಸ್ಕರ ಅಲ್ಲಿ ಬೇಕಾಗುವಂತ ಎಲ್ಲಾ ಸೌಕರ್ಯಗಳನ್ನು ಒದಗಿಸಿ ಬಡವರಿಗೆ, ಮತ್ತು ಮಕ್ಕಳಿಗೆ ಎಲ್ಲಾ ಅನುಕೂಲವಾಗುವಂತೆ ಮಾಡಬೇಕೆಂದು ನಾನು ಹೇಳಬಯಸುತ್ತೇನೆ.

ಇನ್ನು ಕೆಲವು ಮಾನ್ಯ ಸದಸ್ಯರುಗಳು ನಮ್ಮ ರಾಜ್ಯದಲ್ಲಿ ವೈದ್ಯರುಗಳ ಅಭಾವ ಬಹಳವಾಗಿ ಇದೆ ಎಂದು ಹೇಳಿದರು. ಆದರೆ ಇದಕ್ಕೆ ಕಾರಣವೇನೆಂದರೆ, ಇಲ್ಲಿ ಅವರಿಗೆ ಸಮರ್ಪಕವಾದ ಮತ್ತು

ಆಕರ್ಷಣೀಯವಾದ ಸಂಬಳವನ್ನು ಕೊಡದಿರುವುದೇ ಕಾರಣವೆಂದು ನಾನಾದರೂ ತಿಳಿಯುತ್ತೇನೆ. ಇದರಿಂದಾಗಿ ಹೆಚ್ಚಾಗಿ ವೈದ್ಯರುಗಳು ಆಸ್ಪತ್ರೆಗಳಲ್ಲಿ ಸೇವೆ ಮಾಡುವುದಕ್ಕೆ ಬರುವುದಿಲ್ಲ. ಅದಕ್ಕೋಸ್ಕರ ಈ ವೈದ್ಯರುಗಳು ಏನಿದ್ದಾರೆ, ಅವರಿಗೆ ಬಾಕಿ ಉಳಿದ ರಾಜ್ಯಗಳಲ್ಲಿ ಏನು ಸಂಬಳ ಏನು ಸೌಕರ್ಯಗಳನ್ನು ಕೊಡುತ್ತಿದ್ದಾರೆ, ಅದನ್ನು ಇಲ್ಲಿ ನಮ್ಮ ವೈದ್ಯರಿಗೂ ಕೊಡಬೇಕೆಂದು ನಾನು ಹೇಳುತ್ತೇನೆ. ಮಾತ್ರವಲ್ಲದೆ, ಈಗ 5-6 ವರ್ಷದಿಂದ ಎಲ್.ಎಂ.ಪಿ. ಪಾಸ್ ಮಾಡಿ, ಎಂ.ಬಿ.ಬಿ.ಎಸ್. ಕಂಡೆನ್ಸ್‌ಡ್ ಕೋರ್ಸ್ ಮಾಡಿದವರಿಗೆ ಪ್ರೊಮೋಶನ್ಸ್ ಕೊಡುತ್ತೇವೆಂದು ಈ ಮಾನ್ಯ ಸಭೆಯಲ್ಲಿ ಒಪ್ಪಿಕೊಂಡಿದ್ದಾರೆ. ಅದನ್ನು ಆದಷ್ಟು ಜಾಗ್ರತೆಯಾಗಿ ನೆರವೇರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಮತ್ತೊಂದು, ಈಗ ಉಡುಪಿಯಲ್ಲಿ ಒಂದು ಆಸ್ಪತ್ರೆಯ ಕೆಲಸ ಸಾಧಾರಣ 7 ವರ್ಷದ ಹಿಂದೆ ಪ್ರಾರಂಭವಾಗಿತ್ತು. ಅದು ಇವತ್ತಿನವರೆಗೂ ಪೂರ್ತಿಯಾಗದೆ ಇದೆ, ಅದನ್ನು ಕೂಡ ಆದಷ್ಟು ಬೇಗ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, ಈಗ ಅಲ್ಲಿ ಬೇಕಾದ ಸವಲತ್ತುಗಳು ಇಲ್ಲದೆ, ಬಡವರಿಗೆ ತುಂಬಾ ಕಷ್ಟವಾಗುತ್ತದೆ.

ಇನ್ನೊಂದು ವಿಷಯ. ಉಡುಪಿಯಲ್ಲಿ ಅಲ್ಲೇ ಆಸ್ಪತ್ರೆಯಲ್ಲಿ ಒಬ್ಬ ಮೃತರಾದ ಹೆಂಗಸು ಸಾಧಾರಣ ಮೂರು ಲಕ್ಷ ರೂಪಾಯಿಯಷ್ಟು ದಾನ ಕೊಟ್ಟಿದ್ದಾರೆ. ಈಗ ಆ ಹೆಂಗಸು ಸತ್ತು 5 ತಿಂಗಳಾದರೂ ಅದು ಅಲ್ಲಿಯೇ ಬಿದ್ದುಕೊಂಡಿದೆಯಲ್ಲದೆ, ಅದನ್ನು ಯಾರೂ ಹೇಳುವವರೂ, ಕೇಳುವವರೂ ಇಲ್ಲ. ಇವತ್ತಿನ ದಿವಸ ಅಂಥ ದಾನ ಕೊಡುವವರೇ ಇಲ್ಲದಿರುವಾಗ, ದಾನ ಕೊಟ್ಟದನ್ನು ಆದಷ್ಟು ಜಾಗ್ರತೆಯಾಗಿ ಆಸ್ಪತ್ರೆಯ ಖರ್ಚಿಗಾಗಿ ಉಪಯೋಗಿಸಬೇಕು ಎಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್ (ಸೂಳ್ಯ).—ಸನ್ಮಾನ್ಯ ಅಧ್ಯಕ್ಷರೇ, ಇವತ್ತು ವೈದ್ಯಕೀಯ ಮತ್ತು ಜನಾರೋಗ್ಯ ರಕ್ಷಣೆಯ ಬೇಡಿಕೆಗಳನ್ನು ನಾನು ಸಮರ್ಥಿಸುತ್ತೇನೆ ಆರೋಗ್ಯ ಇಲಾಖೆಯು ಸರ್ಕಾರಿ ಅಥವಾ ಸಾರ್ವಜನಿಕರ ಹಿತದೃಷ್ಟಿಯಿಂದ ಅತಿ ಪ್ರಾಮುಖ್ಯವಾದ ಇಲಾಖೆಯಾಗಿದೆ. ಹೀಗಾಗಲು ಕಾರಣ, ಇದಕ್ಕೆ ಕೊಡತಕ್ಕ ಪ್ರಾಶಸ್ತ್ಯ ಮತ್ತು ಹೆಚ್ಚಿನ ಗಮನವೆಂದೇ ಹೇಳಬೇಕಾಗುತ್ತದೆ. ನನ್ನ ಸ್ನೇಹಿತರಾದ ಶ್ರಿ ದಯಾನಂದ ಕಲ್ಲೆಯವರು ಹೇಳಿದರು, ಈ ಆರೋಗ್ಯ ಇಲಾಖೆಗೆ ಯಾವ ನೀತಿ ನಿಯಮವೇನೂ ಇಲ್ಲ ಎಂದು ಅದು ಯಾವ ದೃಷ್ಟಿಯಿಂದ ಹೇಳಿದರೋ ನನಗೆ ಗೊತ್ತಾಗಲಿಲ್ಲ. ನಾನಾದರೂ ಹೇಳುತ್ತೇನೆ, ಈ ಆರೋಗ್ಯ ಇಲಾಖೆಯ ಶ್ರೇಯಸ್ಕರವಾದ ಕೆಲಸಗಳಿಂದ ಇಂದು ಮಲೆನಾಡುಗಳಲ್ಲಿ ಮಲೇರಿಯಾದಿಂದ ವರ್ಷದ 6—8 ತಿಂಗಳುಗಳು ಕಾಲ ನರಳುತ್ತಿದ್ದ ಜನರು ಈಗ ಒಳ್ಳೇಯ ಆರೋಗ್ಯದಿಂದ ತಮ್ಮ ಕೆಲಸಕಾರ್ಯಗಳನ್ನು ಮಾಡುತ್ತಿದ್ದಾರೆ. ಅಲ್ಲದೆ ಸಿಡುಬು, ವಾಂತಿ ಭೇದಿ, ಪ್ಲೇಗು ಮೋದಲಾದ ಸಾಂಕ್ರಾಮಿಕ ರೋಗಗಳೂ ನಮ್ಮ ಹತೋಟಿಗೆ ಬಂದಿವೆ. ಇದು ಎಲ್ಲಾ ನಮ್ಮ ಆರೋಗ್ಯ ಇಲಾಖೆಯ ಸತತ ಪ್ರಯತ್ನಗಳಿಂದಾಗಿದೆ ಎಂದು ಹೇಳಿದರೆ ಅದೇನೂ ಅತಿಶಯೋಕ್ತಿಯಾಗಲಾರದು. ಅದಲ್ಲದೆ ಈ ಆರೋಗ್ಯ ಇಲಾಖೆಯವರು ಇನ್ನೂ ಅನೇಕ ತರವಾದ ರೋಗಗಳನ್ನು ನಿವಾರಣೆಮಾಡಿದ್ದಾರೆ. ಇದು ಆರೋಗ್ಯ ಇಲಾಖೆಯವರ ಸತತ ಪ್ರಯತ್ನದಿಂದೆಲ್ಲಾ ಆಗಿದೆಯೇ ಹೊರತು ಬೇರೇನಲ್ಲ. ಈ ವರ್ಷದ ಜನಾರೋಗ್ಯ ಇಲಾಖೆಯ ಬೇಡಿಕೆಗಳಲ್ಲಿ ಅಯುರ್ವೇದಕ್ಕೆ ಹೆಚ್ಚಿನ ಗಮನವನ್ನು ಕೊಟ್ಟದ್ದು ನನಗೆ ಬಹಳ ಸಂತೋಷ. ಅದೇ ರೀತಿ ರೋಗಿಗಳ ಆಹಾರಕ್ಕಾಗಿ 65-66 ರಲ್ಲಿ 38,000 ಒದಗಿಸಿದ್ದು, ಈ ವರ್ಷ 50,000 ಒದಗಿಸಿದ್ದಾರೆ. ಮತ್ತು ಆಸ್ಪತ್ರೆಗಳ ಇತರ ಆವಶ್ಯಕತೆಗಳಿಗೆ 65-66 ರಲ್ಲಿ 50,000 ಒದಗಿಸಿ, ಈ ವರ್ಷದ ಬಜೆಟಿನಲ್ಲಿ ಇದಕ್ಕೆ ಒಂದು ಲಕ್ಷದ 50 ಸಾವಿರ ರೂಪಾಯಿಯನ್ನು ಒದಗಿಸಿದ್ದಾರೆ. ಇದು ಬಹಳ ಸಂತೋಷದ ವಿಚಾರ. ಈ ಅಯುರ್ವೇದದ ವಿಚಾರ ಮಾತನಾಡುವಾಗ ಒಂದು ಮಾತನ್ನು ಹೇಳಬೇಕಾಗುತ್ತದೆ. ಈಗ ಈ ಆಯುರ್ವೇದಕ್ಕೋಸ್ಕರ ಒಂದು ಗಿಡಮೂಲಿಕೆಗಳ ತೋಟವನ್ನು ಅಥವಾ ಉದ್ಯಾನವನ್ನು ಮಾಡುವುದು ಅತ್ಯಗತ್ಯ ಎಂದು ಹೇಳುತ್ತೇನೆ. ಅದರಲ್ಲಿ ನಾರು, ಬೇರು, ಸೊಪ್ಪು, ತೊಗಟು, ಸಿಪ್ಪೆ ಕಾಯಿ, ಹಣ್ಣು ಇತ್ಯಾದಿಗಳಿರುವಂತೆ ಒಂದು ಗಿಡಮೂಲಿಕೆಗಳ ತೋಟ ಇರುವುದು ಅಗತ್ಯ; ಇದಕ್ಕೆ ಒಂದು ಯೋಗ್ಯ ಸ್ಥಳ ಕಂಡು ಅದನ್ನು ಸ್ಥಾಪಿಸಬೇಕು. ನನ್ನ ಅಭಿಪ್ರಾಯದ ಮಟ್ಟಿಗೆ ಹೇಳುವುದಾದರೆ, ಕರಾವಳಿ ಪ್ರದೇಶದಲ್ಲಿ ಈ ಮೂಲಿಕೆಗಳಲ್ಲಿ ಅಗ್ರಗಣ್ಯರಾದವರು ಕೇರಳದವರು ಎಂದು ತಿಳಿದಿದ್ದೇವೆ. ನಮಗೆ ಇವರೊಡನೆ ಹೆಚ್ಚಿಗೆ ಸಂಪರ್ಕ ಇರುವಂತಹ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ತೋಟವನ್ನು ಸ್ಥಾಪಿಸುವುದು ಸೂಕ್ತವೆಂದು ನಾನು ತಿಳಿಸಲಚ್ಛಿಸುತ್ತೇನೆ.

ಮತ್ತು ಈಗ ಆಸ್ಪತ್ರೆಗಳಲ್ಲಿ ಕಂಪೌಂಡರುಗಳ ಅಭಾವವಿದೆ ಎಂದು ನನಗೆ ತಿಳಿದು ಬಂದಿದೆ. ಈಗ ಒಬ್ಬ ಹೆಲ್ತ್ ಟೈಪ್ ಯುನಿಟ್ ಡಿಸ್ಪೆನ್ಸರಿಯಲ್ಲಿ ಕೆಲಸ ಮಾಡುತ್ತಿದ್ದವರನ್ನು ನೀವು ಸರ್ಕಾರೀ ಸಿವಿಲ್ ಆಸ್ಪತ್ರೆಯಲ್ಲಿ ಕೆಲಸಮಾಡಬೇಕು, ಇಲ್ಲದಿದ್ದರೆ ಸ್ಟೈಫೆಂಡ್‌ನ್ನು ಹಿಂದಕ್ಕೆ ಕೊಡಬೇಕೆಂದು ಬಲವಂತ ಮಾಡುವುದರಿಂದ ಬಹಳ ತೊಂದರೆಯಾಗಿದೆ. ಅದಕ್ಕೋಸ್ಕರ ಸರ್ಕಾರಿ ಆಸ್ಪತ್ರೆಯಲ್ಲಿ ಹೆಚ್ಚು ಹೆಚ್ಚು

(ಶ್ರೀ ಎಸ್. ಸುಬ್ಬಯ್ಯನಾಯಕ್)

ಕಾಂಪೌಂಡರುಗಳನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಈ ಅಭಾವವನ್ನು ತಪ್ಪಿಸುವುದಕ್ಕೋಸ್ಕರ ಹೆಚ್ಚು ಹೆಚ್ಚು ಜನರಿಗೆ ಕಂಪೌಂಡರ್ ತರಬೇತಿಯನ್ನು ಕೊಡಬೇಕೆಂದು ನಾನು ಹೇಳುತ್ತೇನೆ. ಅದಕ್ಕಾಗಿ ಹೆಚ್ಚು ಹೆಚ್ಚು ಕಾಂಪೌಂಡರುಗಳಿಗೆ ತರಬೇತಿಯನ್ನು ಕೊಡಬೇಕು.

ಇನ್ನು ನಮ್ಮ ಮಂಗಳೂರು ಭಾಗದಲ್ಲಿ ಆನೆಕಾಲು ರೋಗ ಇದೆ ಎಂದು ಅಲ್ಲಿಗೆ ಜನ ಬರಲು ಹೆದರುತ್ತಾರೆ. ಕರಾವಳಿಯಲ್ಲಿ ಆನೆಕಾಲು ರೋಗ ಮೊದಲು ಹಬ್ಬಿತ್ತು ಇತ್ತೀಚೆಗೆ ಅದು ಒಳನಾಡಿಗೆ ಬಂದಿದೆ. ಈಚೆಗೆ ನಮ್ಮ ಸೂಳ್ಯ ತಾಲ್ಲೂಕಾ ವಠಾರದಲ್ಲೂ ಆನೆಕಾಲು ರೋಗ ತಗಲಿರುವ ವ್ಯಕ್ತಿಗಳನ್ನೂ ನಾವು ನೋಡುತ್ತಿದ್ದೇವೆ. ಇಂತಹ ಆನೆಕಾಲು ರೋಗ ಇನ್ನೂ ಹೆಚ್ಚು ಹರಡಲಿಕ್ಕೆ ಅವಕಾಶ ಕೊಡದಂತೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ. ಇದರ ಬಗ್ಗೆ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ರೀಸರ್ಚ್ ಮಾಡುತ್ತಿದ್ದಾರೆಂದು ತಿಳಿಯಬರುತ್ತದೆ. ಇದು ಕಾರ್ಯರೂಪಕ್ಕೆ ಬರಲು ತೀವ್ರತೆಯಿಂದ ಹೆಚ್ಚು ಪ್ರಯತ್ನ ಮಾಡಬೇಕೆಂದು ಇಲ್ಲಿ ಹೇಳುತ್ತೇನೆ.

ಈಗಾಗಲೇ ಇಲ್ಲಿ ಕೆಲವು ಸ್ನೇಹಿತರು ಹೇಳಿದ ಹಾಗೆ ಹಳ್ಳಿಗಳಲ್ಲಿ ವೈದ್ಯಕೀಯ ಸವಲತ್ತುಗಳು ಸಿಗುವುದು ಬಹು ಕಡಿಮೆಯಾಗಿದೆ. ನಾನೂ ಕೂಡ ಅದೇ ರೀತಿ ಇಲ್ಲಿ ಹೇಳಬೇಕಾಗಿದೆ. ಈಗ ಹಳ್ಳಿಗಳಲ್ಲಿ ಪ್ರೈಮರಿ ಹೆಲ್ತ್ ಸೆಂಟರುಗಳು ಇತರ ಕಡೆಗಳಲ್ಲಿ ಎಲ್. ಎಫ್. ಡಿಸ್‌ಪೆನ್‌ಸರಿ, ರೂರಲ್ ಡಿಸ್‌ಪೆನ್‌ಸರಿ ಹೀಗೆ ಬೇರೆ ಬೇರೆ ನಮೂನೆಯ ಆಸ್ಪತ್ರೆಗಳು ಎಂದು ಮಾಡಿದ್ದಾರೆ. ಆದರೆ ಇಲ್ಲಿಗೆ ಹೆಚ್ಚು ಹೆಚ್ಚಾಗಿ ಔಷಧಿಗಳನ್ನು ಕೊಟ್ಟರೆ ನಗರಗಳ ಕಡೆಗೆ ಹಳ್ಳಿಗಳಿಂದ ಜನ ಬರುವುದು ಕಡಿಮೆಯಾಗುತ್ತದೆ ಮತ್ತು ಜನರ ಆರೋಗ್ಯಕ್ಕೆ ಅನುಕೂಲಗಳನ್ನು ಕೊಡುವ ತಾಲ್ಲೂಕಾ ಆಸ್ಪತ್ರೆಗಳಿಗೆ ಔಷಧಗಳನ್ನು ಇನ್ನೂ ಹೆಚ್ಚು ಒದಗಿಸಬೇಕು.

ಸೂಳ್ಯದಲ್ಲಿರುವ ಆಸ್ಪತ್ರೆಯಲ್ಲಿ ಒಂದು ಎಕ್ಸ್‌ರೇ ಯಂತ್ರ ಬಂದು ಸುಮಾರು ನಾಲ್ಕು ವರ್ಷಗಳಾದವು. ಆದರೆ ಇದನ್ನು ಇನ್ನೂ ಓಪನ್ ಮಾಡದೆ ಹಾಗೇ ಇದು ಸ್ಟೋರಿನಲ್ಲಿದೆ. ಇದಕ್ಕೆ ಕಾರಣ ಕೇಳಿದರೆ ಸರಕಾರದವರು ಸರಿಯಾದ ತಾಂತ್ರಿಕರು ಇದಕ್ಕೆ ಇಲ್ಲ ಎಂದು ಹೇಳುತ್ತಾರೆ. ಆದರೆ ಇಂತಹ ಒಳ್ಳೆಯ ಯಂತ್ರವನ್ನು ತಂದು ತಜ್ಞರಿಲ್ಲ ಎಂದು ಹೇಳಿದರೆ ಏನು ಪ್ರಯೋಜನವಾಯಿತು ? ಇದನ್ನು ಸರಕಾರ ಈಗಲಾದರೂ ಯೋಚನೆ ಮಾಡಿ ಒಬ್ಬ ತಜ್ಞರನ್ನು ಇಲ್ಲಿಗೆ ಕಳುಹಿಸಿ ಎಕ್ಸ್‌ರೇ ಕಾರ್ಯ ಶುರುಮಾಡಬೇಕೆಂದು ವಿನಯಪೂರ್ವಕವಾಗಿ ನಾನು ಇಲ್ಲಿ ಕೇಳುತ್ತೇನೆ. ಇನ್ನು ಸೂಳ್ಯ ಪ್ರೈಮರಿ ಹೆಲ್ತ್ ಸೆಂಟರು ತಾಲ್ಲೂಕಾ ಹೆಡ್‌ಕ್ವಾರ್ಟರಿನಲ್ಲಿ ಪ್ರತಿಯೊಬ್ಬ ರೋಗಿಗಳಿಗೂ ಸಾಕಷ್ಟು ಬೆಡ್ಡುಗಳು ಹಾಗೂ ಆಹಾರವನ್ನು ಸರಿಯಾಗಿ ಕೊಡುವ ವ್ಯವಸ್ಥೆ ಮಾಡಬೇಕು.

ಇನ್ನು ನಾಲ್ಕನೇ ವರ್ಗದ ಹಾಗೂ ಮೂರನೇ ವರ್ಗದ ನೌಕರರುಗಳನ್ನು ಆದಷ್ಟು ಮಟ್ಟಿಗೆ ಸ್ಥಳೀಯ ಜಿಲ್ಲೆಯಲ್ಲೇ ಇರುವಂತೆ ಮಾಡಬೇಕು. ಸುಳ್ಯದ ಮೊಬೈಲ್ ಹೆಲ್ತ್ ಯೂನಿಟ್ಟಿನಲ್ಲಿ ಒಬ್ಬ ಜವಾನರು ಕೆಲಸ ಮಾಡುತ್ತ ನಾಲ್ಕಾರು ವರ್ಷಗಳಿಂದ ಇದ್ದಾನೆ ಇವರು ಬೆಂಗಳೂರು ಜಿಲ್ಲೆಯವರಂತೆ. ಇದೇ ರೀತಿ ನಮ್ಮ ಭಾಗದ ಕಡೆಯಿಂದ ಒಬ್ಬರು ಅದೇ ರೀತಿ ಆ ಕಡೆಯ ನಾಲ್ಕನೆ ವರ್ಗದ ನೌಕರ ಆನೇಕಲ್ಲು ಆಸ್ಪತ್ರೆಯಲ್ಲಿದ್ದಾನೆಂದು ಕೇಳುತ್ತೇನೆ. ಇಂತಹವರನ್ನು ಅವರವರ ಜಿಲ್ಲೆಗೆ ಹೋಗಲು ಅನುಕೂಲವಾಗುವಂತೆ ಮಾಡಿದರೆ ಅವರಿಗೆ ಚೆನ್ನಾಗಿ ಕೆಲಸ ಮಾಡಲು ಅನುಕೂಲವಾಗುತ್ತದೆ. ಇದರ ಕಡೆಗೆ ಗಮನ ಕೊಡಬೇಕು.

ಒಂದು ಮಾತನ್ನು ಇಲ್ಲಿ ಮಾನ್ಯ ಸದಸ್ಯರಾದ ಶ್ರೀ ಭಾಸ್ಕರ ಶೆಟ್ಟರು ಹಾಗೂ ಶ್ರೀ ದಯಾನಂದ ಕಲ್ಲೆಯವರು ಇತ್ತೀಚೆಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮೇಲ್ಮನೆಯ ಸದಸ್ಯರ ಬಗ್ಗೆ ಹೇಳಿದರು. ಇದು ಬರೀ ಒಂದು ಕಟ್ಟುಕತೆಯ ಮಾತಿನಂತೆ ಹೇಳಿದ್ದಾರೆ. ಇಂತಹ ಕಟ್ಟುಕತೆಗಳನ್ನು ಇಲ್ಲಿ ಹೇಳಬಾರದಿತ್ತು.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್ (ಮೈಸೂರು ಸಿಟಿ).—ಇದರ ವಿವರಗಳನ್ನು ಸರಕಾರ ಕೊಡಬಲ್ಲವರಾಗಿದ್ದಾರೆ, ತಾವಲ್ಲ...

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಇದರ ವಿಚಾರದಲ್ಲಿ ಸರಕಾರವೇ ಹೇಳಲಿ ಎಂದು ಇದನ್ನು ಇಲ್ಲೇ ಬಿಡುತ್ತೇನೆ. ಇಂತಹ ಕಟ್ಟು ಕತೆಗಳನ್ನು ಪ್ರಚಾರ ಮಾಡಿದರೆ ಇದರಿಂದೇನೂ ಪ್ರಯೋಜನವಾಗಲಾರದು. ಇಂತಹ ಆರೋಪಣೆಗಳನ್ನು ಮಾಡಿದರೆ ಅಧಿಕಾರಿಗಳಲ್ಲಿ ಕೆಲಸ ಮಾಡುವ ಆಸಕ್ತಿಯೂ ಕಡಮೆಯಾಗುತ್ತದೆ. ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri K. S. SURYANARAYANA RAO (Mysore City).—Mr. Speaker Sir, I am only sorry for the last speaker who perhaps made these allegations without proper enquiry. It is most unfair on the part of the Member to attribute motives to an Hon'ble member who has been subject to

indignities. Atleast he deserves the utmost courtesy whether he is a member of this House or the other House. We must know what are the circumstances that led to such a thing.

MR. SPEAKER.—The Hon'ble Member is spending his time on unnecessary matters. I do not know whether there is any privilege motion in the other House. Without knowing the merits of the case, it is not proper to discuss on this matter.

SRI K. S. SURYANARAYANA RAO.—I will leave it at that. I do not wish to take much time, and I will refer to a few points only. The Hon'ble Minister in his opening remarks mentioned about the mal-nutrition in so many words-like prevention or preventive side is more important than curative. He said preventive measures have been taken in regard to the major epidemic diseases and there is proper check and control of these diseases. But something more has to be done because most of the people who are affected by these dreadful diseases are suffering from mal-nutrition. The people could not be strong physically because this has arisen out of mal-nutrition. Public Health is to be given, as the Hon'ble Minister has put it, priority over every other thing. Sir, one aspect of it I wish to emphasise is that proper curative measures have to be taken. There are few Post-Graduate Institutions started. These Institutions are not tackling the research problem in addition to the training. I wish a Research Wing may be attached to these Institutions to do research in this direction. Without this research work, Post Graduate students will not have completed their studies, but it may be the extension of Degree Courses. It should not happen like that and I suggest a Research Wing being started in all these Institutions. There is a large intake of patients in the Hospitals and there are Doctors to meet this intake. Most of the time of the Doctors is spent in attending to usual routine 'Cases that come every day to the Hospital. Of course a number of doctors are required to attend to this work. Most of the time of the doctors who are trained in Research and laboratory work is spent on routine patients. I suggest that such of these doctors should concentrate on advance cases and dreadful type of diseases and make use of their knowledge gained. The benefit of the research knowledge should be made available to public at large.

4-30 P.M.

Therefore, I Suggest that a research wing may kindly be added to this institution.

One little problem about which I am talking is about technicians. I have talked about them to the Minister himself. About three or four years ago, Class III servants were asked to undergo training, and they were trained. There was an interim order that their services would be regularised as and when occasions arise. Although it is nearly four years, nothing has come out in spite of assurance by the Minister. If nothing has been done so far to them, I only wish, at least it should be done immediately.

(SRI K. S. SURYANARAYANA RAO)

One point about which I would say is about Family Planning. Family Planning is gaining momentum; that should be conceded. It is proper that it should gain strength also. But I am only sorry that the facilities that are available in the Clinics are not being properly used. I would suggest that these Family Planning Clinics should be located in the General Hospital itself or in the Health Centres. Otherwise, there are cases and cases where these facilities are being misused. I only suggest that such misuses should be avoided to the extent possible.

One thing about which the other Hon'ble Members have already mentioned is regarding the Reception Centres in the General Hospitals. There is no space for this reception in these Hospitals, whether it is in Bangalore or in Mysore. Some exclusive premises should be provided for the Out-patients with clear directions. The patients for lack of proper guidance and indication, will be non-plussed when they come to the Out-Patient block; they cannot get timely information as to who should be approached for their ailment and where that expert or doctor will be available and when he will be available. They will be tossed from place to place. Therefore, I suggest that proper facilities be created to receive the patients at the Genera Hospitals.

The sanitary conditions of the Hospitals and the linen conditions are far from satisfactory. I am afraid whether the Hon'ble Health Minister has paid any surprise visits to the Hospitals and acquainted himself with the conditions there. If the Hon'ble Minister pays surprise visits, he will come across appalling conditions in the general wards. With great regret, it has to be stressed that the conditions in the General Wards are not quite satisfactory. The linen condition also are not quite satisfactory. I do not wish to draw any comparison between the General Hospital and the other hospitals. The diet condition is also equally bad. I only suggest that the linen condition may be improved. Instead of the present unwholesome atmosphere, the patient deserves better atmosphere, better facilities and better conditions in the hospital. Perhaps, the Hon'ble Minister and the Members will agree with me when I say that 50 per cent of the disease will be cured by the atmosphere in which the patient is placed rather than the medicine. Medicine plays only 50 per cent of the part. It is psychology that does the other 50 per cent in restoring a patient to health. I only wish the doctors pay a little more attention to this aspect.

The other last point, I would like to mention is about the E. S. I. S. Hospitals. I have mentioned once before about these hospitals. I am afraid these hospitals are not catering to the needs of the employees or the labour class. They have just become centres where these medical certificates are asked by the employees and issued by the doctors there. When the employees in factories go to those hospitals for medicine or for guidance or for diagnosis, or even for smaller treatment, they will be

directed to go to the general hospitals. It would sound reasonable if the patients are asked to go to bigger hospitals for chronic or serious diseases; but the pity of it is even for small ailments, they are sent to the other hospitals as a matter of course; so much so, the employees and labourers pay for all medicines they want but these Hospitals have not gained popularity. Therefore, I suggest that the Hon. Minister makes some arrangement for inspection of these Hospitals periodically.

The only other point I would like to mention on this occasion is about the Serum Institute; there a machinery was bought as early as 1961, and even in 1964, it had not been installed. Likewise, in the Victoria Hospital, the air-condition equipment which was got in 1962, had not been installed even in October 1964; it had not been put into operation for two years. Similarly, even though the machinery or equipment is fixed, there are instances in hospitals where, for want of electricity, the equipment is kept idle. We do not get sufficient equipment nowadays because of the paucity of funds. So, I only wish to say that whatever equipment is got for any hospital, kindly see that it is installed immediately or that it reaches its destination instead of keeping it idle. Sometimes, these equipments are kept outside the regular hospital precincts, and by the time they are installed, they get deteriorated. Such things should not happen.

About the Ayurvedic and Unani Hospitals, I would like to say a word and finish my speech. The conditions in these hospitals are not again very satisfactory. I only wish that the huge sums of money that are spent on medicines in these hospitals are precisely spent and better conditions are created so that the patients may be attaracted to these institutions and to indigenous medicines and treatment.

Mr. SPEAKER.—The Hon. Minister for Health wanted one hour for his reply. The Debate will go on till 5 o'clock, when I will call upon the Minister to reply. These eight minutes lost will be utilised for clarification if possible.

† ಶ್ರೀಮತಿ ಸುಶೀಲಬಾಯಿ ಹೀರಾಚಂದ್ ಷಾ (ಬಾಗೇವಾಡಿ).—ಮಾನ್ಯ ಸಭಾಪತಿಯವರೇ, ಈ ಮೆಡಿಕಲ್ ಬೇಡಿಕೆಯನ್ನು ನಾನು ಸ್ವಾಗತ ಮಾಡುತ್ತಾ ಕೆಲವು ಸಲಹೆಗಳನ್ನು ಕೊಡುತ್ತೇನೆ. ನಮ್ಮ ಬಿಜಾಪುರ ಮತ್ತು ಶಿವಮೊಗ್ಗಾ ಜಿಲ್ಲೆಯೊಳಗೆ ಮೆಡಿಕಲ್ ಸ್ಕೂಲನ್ನು ಕೊಡಿಸುತ್ತೇವೆಂದು ಹೇಳಿದರು. ಕೆಲವು ಹುಡುಗರನ್ನು ಇಂಟರ್‌ವ್ಯೂ ಸಹ ಮಾಡಿದರು. ಆದರೂ ಅಲ್ಲಿ ಒಂದು ಮೆಡಿಕಲ್ ಸ್ಕೂಲ್ ಪ್ರಾರಂಭ ಮಾಡುತ್ತೇವೆಂದು ಮಂತ್ರಿಗಳು ಕೊಟ್ಟ ಭರವಸೆ ಇನ್ನೂ ಈಡೇರಲಿಲ್ಲ. ನಮ್ಮ ಜಿಲ್ಲೆಯಲ್ಲಿರತಕ್ಕ ಆಸ್ಪತ್ರೆಯನ್ನೂ ಸಹ ದೊಡ್ಡದಾಗಿ ಮಾಡುತ್ತೇವೆಂದು ಭರವಸೆ ಕೊಟ್ಟಿದ್ದರು. ಊರ ಹೊರಗಿನಲ್ಲಿರತಕ್ಕ ಒಂದು ಜಾಗವನ್ನೂ ಸಹ ನಾವು ತೋರಿಸಿಕೊಟ್ಟಿದ್ದೇವೆ. ಅಲ್ಲಿ ಒಂದು ಮೆಡಿಕಲ್ ಸ್ಕೂಲನ್ನು ಪ್ರಾರಂಭಮಾಡಲು 20 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡುತ್ತೇವೆಂದು ಹೇಳಿದರು. ಬಿಜಾಪುರ ಜಿಲ್ಲೆಗೆ ಮಂತ್ರಿಗಳು ಬಂದಾಗ ಇಂತಹ ಭರವಸೆಯನ್ನು ಕೊಟ್ಟಿದ್ದರು. ಆ ಭರವಸೆಗಳಲ್ಲಿ ಯಾವುದೂ ಕಾರ್ಯಗತವಾಗಲಿಲ್ಲ. ಬಿಜಾಪುರ ಜಿಲ್ಲೆಯೊಳಗೆ ಇರತಕ್ಕ ಜನರಲ್ ಆಸ್ಪತ್ರೆಯನ್ನು ಭೇಟಿಮಾಡಿ ಅಲ್ಲಿ ಹೆಚ್ಚಿಗೆ ರೋಗಿಗಳಿಗೆ ಬೇಕಾದ ಸೌಲತ್ತುಗಳನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ.

ಇನ್ನು ಬಿಜಾಪುರ ಜಿಲ್ಲೆಯೊಳಗೆ ಕೈದಿಗಳಿಗಾಗಿ ಒಂದು ಸೆಂಟ್ರಲ್ ಜೈಲ್ ಇದೆ. ಅದು ಕೇಂದ್ರವಾಗಿದೆ. ಸುಮಾರು 1 ಲಕ್ಷ ರೂಪಾಯಿಗಳಲ್ಲಿ ಅದು ನಿರ್ಮಾಣವಾಗಿದೆ. ಅದು ಊರ ಹೊರಗೆ ಇದೆ. ಅದನ್ನು ತೆಗೆದುಹಾಕಿ ಹೆಚ್ಚು ಹಣವನ್ನು ಖರ್ಚುಮಾಡಿ ಅಲ್ಲಿ ಒಂದು ಟಿ. ಬಿ. ಆಸ್ಪತ್ರೆಯನ್ನು ಮಾಡಿದರೆ ಬಹಳ ಅನುಕೂಲವಾಗುತ್ತದೆ. ಜನಗಳ ಆರೋಗ್ಯದ ಬಗ್ಗೆ ಉಪಕಾರ ಮಾಡಿದಂತಾಗುತ್ತದೆ.

(ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ)

ಇನ್ನು ಬಿಜಾಪುರದಲ್ಲಿ ಎರಡು-ಮೂರು ಹೆರಿಗೆ ಆಸ್ಪತ್ರೆಗಳಿವೆ. ಅವು ಅಲ್ಲಿನ ಮುನಿಸಿಪಾಲಿಟಿಯಿಂದ ನಡೆಯುತ್ತಿವೆ. ಆ ಹೆರಿಗೆ ಆಸ್ಪತ್ರೆಗಳಿಗೆ ವಿದ್ಯುಚ್ಛಕ್ತಿ ವ್ಯವಸ್ಥೆಯೇ ಇಲ್ಲ. ನಾನೇ ಖುದ್ದಾಗಿ ಹೋಗಿ ಎಷ್ಟೋ ಸಾರಿ ನೋಡಿದ್ದೇನೆ. ದೀಪದ ಬತ್ತಿಗಳು ಮೂರು ಇದ್ದುವು. ಇದರಿಂದ ಬಹಳ ಕಷ್ಟವನ್ನು ರೋಗಿಗಳು ಅಲ್ಲಿ ಅನುಭವಿಸುತ್ತಿದ್ದಾರೆ. ಒಳಗೆ ಗಾಳಿ, ಬೆಳಕು ಸಾಕಷ್ಟಿಲ್ಲ. ಈಗ ಬಿಜಾಪುರದಲ್ಲಿ ಸೆಕೆ ಜಾಸ್ತಿ. ಬಿಸಿಲೂ ಸಹ ಜಾಸ್ತಿ. ಇನ್ನು 6-7 ತಿಂಗಳು ಕಾಲ ತುಂಬಾ ಕಷ್ಟ. ಅಲ್ಲಿ ಒಂದು ಪಂಕವೂ ಇಲ್ಲ. ಗಾಳಿ ಬೇಕಾದವರೆ ಖಾಲಿ ರಟ್ಟು ತೆಗೆದುಕೊಂಡು ಗಾಳಿ ಹಾಕಬೇಕಾಗಿದೆ. ದಯಮಾಡಿ ಚಿಕ್ಕ ಚಿಕ್ಕ ಏರ್‌ಕಂಡೀಷನ್ ಮೆಷಿನ್ನುಗಳನ್ನಾದರೂ ಅಲ್ಲಿಗೆ ಒದಗಿಸುವ ವ್ಯವಸ್ಥೆಯನ್ನು ಮಾಡಿಕೊಟ್ಟರೆ ತುಂಬಾ ಅನುಕೂಲವಾಗುತ್ತದೆ.

ಇನ್ನು ಶ್ರೀಮಾನ್ ಕೇಶವಮೂರ್ತಿಯವರು ಹೇಳಿದ ಹಾಗೆ ಈಗಿರತಕ್ಕ ಎಂ.ಬಿ.ಬಿ.ಎಸ್. ಕೋರ್ಸನ್ನು ಚಿಕ್ಕದಾಗಿ ಮಾಡಬೇಕು. ಈ ಕೋರ್ಸನ್ನು 5-6 ವರ್ಷಗಳು ಮಾಡಿದರೆ, ಕಲಿಯುವವರಿಗೂ, ಕಲಿಸುವವರಿಗೂ ತುಂಬಾ ಬೇಜಾರು ಆಗುತ್ತದೆ. ಎಲ್ಲಕ್ಕಿಂತಲೂ ದೊಡ್ಡ ಕೋರ್ಸ್ ಈ ಎಂ.ಬಿ.ಬಿ.ಎಸ್. ಕೋರ್ಸ್. ಆದ್ದರಿಂದ ಈ ಕೋರ್ಸನ್ನು ದೊಡ್ಡದು ಮಾಡುವ ಅವಶ್ಯಕವಿಲ್ಲ. ಹುಡುಗರಿಗೆ ಈ ಕೋರ್ಸ್ ಸಣ್ಣದಾಗಿದ್ದರೆ ಪಾಠಗಳನ್ನು ಕಲಿಯುವುದು, ಕಲಿಸುವುದು ಸುಲಭವಾಗುತ್ತದೆ. ಅಷ್ಟಾಗಿ ಬೇಜಾರು ಸಹ ಆಗುವುದಿಲ್ಲ. ಏಕೆಂದರೆ, ಅನೇಕರಿಗೆ ಅಷ್ಟು ವರ್ಷಗಳವರೆಗೆ ಆ ಕೋರ್ಸ್‌ನ್ನು ಓದಿ ಡಾಕ್ಟರ್ ಆಗುವುದಕ್ಕೆ ಶಕ್ಯವಿರುವುದಿಲ್ಲ. ಆದ್ದರಿಂದ ಈ ಕೋರ್ಸ್‌ನ್ನು ದಯಮಾಡಿ ಚಿಕ್ಕದಾಗಿ ಮಾಡಬೇಕು.

ಇನ್ನು ನರ್ಸುಗಳ ವಿಷಯದಲ್ಲಿ ಹೇಳುವುದಾದರೆ ಈಗಾಗಲೇ ಆಸ್ಪತ್ರೆಗಳಲ್ಲಿ ಸಾಕಷ್ಟು ನರ್ಸುಗಳು ಇಲ್ಲ ಎಂದು ಹೇಳುತ್ತಾರೆ. ಬಿಜಾಪುರದಲ್ಲಿ ಈಗ ಹೊಸದಾಗಿ ಒಂದು ನರ್ಸಿಂಗ್ ಕೋರ್ಸ್ ಸ್ಕೂಲನ್ನು ತೆರೆದಿತ್ತು. ಅಲ್ಲಿ ಈಗ ಹೆಣ್ಣುಮಕ್ಕಳನ್ನು ನರ್ಸಿಂಗ್ ಕೋರ್ಸಿಗೆ ತೆಗೆದುಕೊಳ್ಳುವುದನ್ನು ಬಂದ್ ಮಾಡಿದ್ದಾರೆಂದು ತಿಳಿದುಬಂದಿದೆ. ಇದರ ದೆಸೆಯಿಂದ ಬಿಜಾಪುರ ನರ್ಸಿಂಗ್ ಕೋರ್ಸ್ ಸ್ಕೂಲಿಗೆ ಮೆಟ್ರಿಕ್ ಪಾಸಾಗಿರತಕ್ಕ ಹೆಣ್ಣು ಮಕ್ಕಳು ಎಷ್ಟು ಅರ್ಜಿಗಳನ್ನು ಹಾಕಿದ್ದಾರೋ ಅಷ್ಟು ಜನಗಳನ್ನು ನರ್ಸಿಂಗ್ ಕೋರ್ಸಿಗೆ ತೆಗೆದುಕೊಳ್ಳಬೇಕು ಎಂದು ಹೇಳಿ ಈ ಬೇಡಿಕೆಯ ಮೇಲೆ ಮಾತನಾಡುವುದಕ್ಕೆ ಮಾನ್ಯ ಅಧ್ಯಕ್ಷರು ನನಗೆ 5 ನಿಮಿಷ ವೇಳೆಯನ್ನು ಕೊಟ್ಟದ್ದರ ದೆಸೆಯಿಂದ ಅವರಿಗೆ ಅಭಿನಂದಿಸಿ ನಾನು ನನ್ನ ಮಾತ್ನ ಮುಗಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಸ್ವಾಮಿ, ಜನಾರೋಗ್ಯ ಇಲಾಖೆ ಮತ್ತು ಮೆಡಿಕಲ್ ಡಿಪಾರ್ಟ್‌ಮೆಂಟಿನ ಬೇಡಿಕೆಗಳ ಬಗ್ಗೆ ನಾನು ಒಂದೆರಡು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಈ ಎರಡು ಇಲಾಖೆಗಳಿಗೂ ಈ ವರ್ಷ 11 ಕೋಟಿ ರೂಪಾಯಿಗಳ ಮೊತ್ತವನ್ನು ಒದಗಿಸಿದ್ದಾರೆ. ಇದರಲ್ಲಿ ಹಳ್ಳಿಗಾಡಿನಲ್ಲಿರತಕ್ಕ ಆಸ್ಪತ್ರೆಗಳಿಗೆ 15 ಲಕ್ಷ 73 ಸಾವಿರದ 600 ರೂಪಾಯಿಗಳನ್ನು ಮಾತ್ರ ಒದಗಿಸಿದ್ದಾರೆ. ಉಳಿದ ಎಲ್ಲಾ ಹಣವನ್ನು ಅರ್ಬನ್ ಏರಿಯಾದಲ್ಲಿರತಕ್ಕ ಆಸ್ಪತ್ರೆಗಳಿಗೆ ಖರ್ಚು ಮಾಡುವುದಕ್ಕೋಸ್ಕರ ಇಟ್ಟಿರುವುದನ್ನು ನೋಡಿದರೆ ಎಷ್ಟು ತಾರತಮ್ಯ ಮನೋಭಾವನೆಯನ್ನು ಸರ್ಕಾರದವರು ಹೊಂದಿದ್ದಾರೆ ಎಂಬುದು ಗೊತ್ತಾಗುತ್ತದೆ. ರ‍್ಯಾಷನಲ್ ಬೇಸಿಸ್ ಮೇಲೆ ಹಣವನ್ನು ಖರ್ಚು ಮಾಡತಕ್ಕ ವ್ಯವಸ್ಥೆಯನ್ನು ಮಾಡಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ಜನತೆಗೆ ಏನೊಂದು ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದಾರೆಯೋ ಆ ಸೌಲಭ್ಯಗಳು ಹಳ್ಳಿಗಾಡಿನಲ್ಲಿ ಇರತಕ್ಕ ಆಸ್ಪತ್ರೆಗಳಲ್ಲಿ ಇಲ್ಲ. ಹಳ್ಳಿಗಾಡಿನ ಆಸ್ಪತ್ರೆಗಳಿಗೆ ಔಷಧಿಯ ಖರ್ಚನ್ನು ಸಾಕಷ್ಟು ಪ್ರಮಾಣದಲ್ಲಿ ಕೊಡುತ್ತಿಲ್ಲ ಎಂದು ನಾನು ಸರ್ಕಾರದವರಿಗೆ ತಿಳಿಸುವುದಕ್ಕೆ ಇಚ್ಛಿಸುತ್ತೇನೆ. ಹಳ್ಳಿಗಾಡುಗಳಲ್ಲಿ ರೈತರಿಂದ ಸರ್ಕಾರದವರು 70,50,000 ರೂಪಾಯಿಗಳ ಹೆಲ್ತ್ ಸೆಸ್ಸನ್ನು ಕಲೆಕ್ಟ್ ಮಾಡುತ್ತಾರೆ. ಈಗ ನಮ್ಮ ಸಂಸ್ಥಾನದಲ್ಲಿ 3 ಕೋಟಿ 32 ಲಕ್ಷ ಪ್ರಜಾ ಸಂಖ್ಯೆ ಇದೆ. ಈ ಪೈಕಿ 82 ಪರ್ಸೆಂಟ್ ಜನ ಹೆಲ್ತ್ ಸೆಸ್ಸನ್ನ ಕೊಡುತ್ತಿದ್ದಾರೆ. ಆದರೆ ಅವರಿಗೆ ಸಾಕಷ್ಟು ಸೌಲಭ್ಯವನ್ನು ಕೊಡತಕ್ಕ ಬಗ್ಗೆ ಹೆಚ್ಚು ಹಣವನ್ನು ಖರ್ಚು ಮಾಡುತ್ತಿಲ್ಲ. ಇದರಲ್ಲಿ ಏನಾದರೂ ಪಾಲಸಿ ಇದೆಯೋ, ನೀತಿ ನಿಯಮಗಳು ಇವೆಯೋ? ಇದರ ಬಗ್ಗೆ ಸರ್ಕಾರದವರು ಸ್ವಲ್ಪ ಬದಲಾವಣೆ ಮಾಡದೇ ಹೋದರೆ ಹಳ್ಳಿಗಾಡಿನ ಜನತೆಗೆ ಸಾಕಷ್ಟು ಪ್ರಮಾಣದಲ್ಲಿ ಔಷಧೋಪಚಾರ ದೊರೆಯುವುದಿಲ್ಲ ಎಂದು ನನ್ನ ಸ್ವಂತ ಅಭಿಪ್ರಾಯ.

ಇನ್ನು ತಾಲ್ಲೂಕು ಬೋರ್ಡು ಮತ್ತು ಮುನಿಸಿಪಾಲಿಟಿಗಳಿಗೆ ರೆಕರಿಂಗ್ ಎಕ್ಸ್‌ಪೆಂಡಿಚರ್ ಮತ್ತು ನಾನ್ ರೆಕರಿಂಗ್ ಎಕ್ಸ್‌ಪೆಂಡಿಚರ್‌ಅನ್ನು ಕೊಡತಕ್ಕ ನಿಯಮದಲ್ಲಿ ಎಲ್. ಎಚ್. ಡಿಸ್‌ಪೆನ್ಸರಿಗಳಿಗೆ ರೆಕರಿಂಗ್ ಎಕ್ಸ್‌ಪೆಂಡಿಚರ್‌ನಲ್ಲಿ ಮೂರನೆಯ ಒಂದು ಭಾಗವನ್ನು ಮಾತ್ರ ಕೊಡಬೇಕೆಂದ

ಸರ್ಕಾರದ ನೀತಿ ಇದೆ. ಪ್ರಾಯಶಃ ತಾಲ್ಲೂಕು ಬೋರ್ಡುಗಳು ಮತ್ತು ಮುನಿಸಿಪಾಲಿಟಿಗಳು ತಮ್ಮ ಕರ್ತವ್ಯವನ್ನು ಸರಿಯಾಗಿ ಪರಿಪಾಲನೆ ಮಾಡದೇ ಇದ್ದಾಗ, ಅವರಿಗೆ ಆ ಶಕ್ತಿ ಇಲ್ಲದೆ ಇರುವ ಕಾಲದಲ್ಲಿ ಜನತೆಗೆ ಮೆಡಿಕಲ್ ಫೆಸಿಲಿಟೀಸನ್ನ ಒದಗಿಸುವುದು ಬಹಳ ಕಷ್ಟವಾಗಬಹುದು. ಇದರ ಬಗ್ಗೆ ಸರ್ಕಾರದವರು ಯೋಚನೆ ಮಾಡಬೇಕು. ಮತ್ತು ಹಾಗೇನೇ ತಾಲ್ಲೂಕಿನಲ್ಲಿ ಇರತಕ್ಕ ಹೆಲ್ತ್ ಯೂನಿಟ್‌ಗಳಿಗೆ ಮತ್ತು ಆಸ್ಪತ್ರೆಗಳಿಗೆ ಸರ್ಕಾರದವರು ಸಾಕಷ್ಟು ಹಣವನ್ನು ಒದಗಿಸದೆ ಹೋದರೆ ಸರ್ಕಾರದವರು ಅವುಗಳಿಂದ ಜನತೆಗೆ ಏನೊಂದು ಸೌಲಭ್ಯ ಸಿಕ್ಕುತ್ತದೆಂದು ನಿರೀಕ್ಷಣೆ ಮಾಡಿದ್ದಾರೆಯೋ ಅದು ಸರಿಯಾಗಿ ಕಾರ್ಯಗತವಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಮತ್ತು ಮೆಡಿಕಲ್ ಇಲಾಖೆಯಿಂದ ಜನತೆಗೆ ಸರಿಯಾದ ಮತ್ತು ಸಾಕಷ್ಟು ಸವಲತ್ತುಗಳು ಸಿಕ್ಕುವುದಿಲ್ಲ ಎಂದು ಸರ್ಕಾರಕ್ಕೆ ನಾನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ತಾಲ್ಲೂಕಿನಲ್ಲಿರತಕ್ಕ ಇಂಡಿಯನ್ ಟ್ರೈಪ್ ಡಿಸ್‌ಪೆನ್ಸರಿಗಳಿಗೆ 1,500 ರೂಪಾಯಿಗಳನ್ನು ಸ್ಟೇಟ್ ಟ್ರೈಪ್ ಡಿಸ್‌ಫೆನ್ಸರಿಗಳಿಗೆ 1,000 ರೂಪಾಯಿಗಳನ್ನು ಒದಗಿಸಿದ್ದಾರೆ. ಇದರಿಂದ ಅವುಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಔಷಧಿಯು ದೊರೆಯುವುದಿಲ್ಲ.

ಇನ್ನು ಸರ್ಕಾರದವರು ಈ ಮೆಡಿಕಲ್ ಇಲಾಖೆಯಲ್ಲಿ ಸಿಬ್ಬಂದಿ ವರ್ಗದವರಿಗೆ ಖರ್ಚುಮಾಡತಕ್ಕಂಥ ಹಣವನ್ನೂ, ಔಷಧಿಗಳಿಗೆ ಖರ್ಚು ಮಾಡತಕ್ಕಂಥ ಹಣವನ್ನು ತೂಕ ಮಾಡಿ ನೋಡಿದರೆ ಸಿಬ್ಬಂದಿ ವರ್ಗದವರಿಗೇ ಹೆಚ್ಚಿನ ಹಣ ಖರ್ಚಾಗುತ್ತದೆ. ಔಷಧಿಗಾಗಿ ಸಾಕಷ್ಟು ಹಣ ದೊರೆಯುವುದಿಲ್ಲ ಎನ್ನುವುದು ನಿರ್ವಿವಾದವಾದ ವಿಷಯ. ಈ ಬಗ್ಗೆ ಸರ್ಕಾರ ತನ್ನ ನಿಯಮಗಳನ್ನು ಬದಲಾಯಿಸದೇ ಹೋದರೆ ಸಾಧ್ಯವಾಗುವುದಿಲ್ಲ. ಲೋಕಲ್ ಫಂಡ್ ಆಸ್ಪತ್ರೆಗಳ ಖರ್ಚನ್ನು ತಾಲ್ಲೂಕು ಬೋರ್ಡು ಮತ್ತು ಮುನಿಸಿಪಾಲಿಟಿಗೆ ವಹಿಸಿ ಅವುಗಳ ಮೇಲೆ ಹೆಚ್ಚಿನ ಹೊರೆಯನ್ನು ಹಾಕುವುದು ಬೇಡಿ. ಸರ್ಕಾರದವರೇ ಅವುಗಳಿಗೆ ನೇರವಾಗಿ ಸಹಾಯ ಮಾಡಬೇಕೆಂದು ನಾನು ಹೇಳ ಬಯಸುತ್ತೇವೆ. ಇವೊತ್ತು ಸರ್ಕಾರದವರು ಜನಾರೋಗ್ಯ ಮತ್ತು ಮೆಡಿಕಲ್ ಇಲಾಖೆಗಳಿಗೆ 11 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಾಗ ಇದರಿಂದ ಬಡಜನತೆಗೆ ಎಷ್ಟರ ಮಟ್ಟಿನ ಸೌಕರ್ಯ ದೊರೆಯುತ್ತದೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಬೆಂಗಳೂರಿನಲ್ಲಿರುವ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೂಡ ಬಡವನಿಗೆ ಎಷ್ಟರ ಮಟ್ಟಿನ ಒಂದು ಔಷಧೋಪಚಾರ, ಟ್ರೀಟ್‌ಮೆಂಟ್ ದೊರೆಯುತ್ತದೆ ಎನ್ನುವ ಬಗ್ಗೆ ಬಹಳ ಕಠಿಣವಾಗಿ ಟೀಕೆ ಮಾಡಬೇಕಾಗುತ್ತದೆ. ಒಬ್ಬರು ಶಾಸನ ಸಭಾಸದಸ್ಯರಿಗೆ ಟ್ರೀಟಮೆಂಟ್ ಕೊಡುವುದರಲ್ಲಿಯೂ ಸಹ ಈ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಅಶ್ರದ್ಧೆಯನ್ನು ತೋರಿಸಿದ್ದಾರೆ. ಈ ಬಗ್ಗೆ ಅಧ್ಯಕ್ಷರು ಈಗಾಗಲೇ ಹೇಳಿದ್ದಾರೆ. ಆದ್ದರಿಂದ ಆ ವಿಷಯದಲ್ಲಿ ನಾವು ಚರ್ಚೆ ಮಾಡತಕ್ಕ ಗೋಜಿಗೆ ಹೋಗುವುದಿಲ್ಲ. ಇವೊತ್ತು ಸಾಮಾನ್ಯವಾದ ಒಬ್ಬ ಮನುಷ್ಯ ಆಸ್ಪತ್ರೆಗೆ ಹೋದರೆ ಅವನಿಗೆ ಯಾವರೀತಿಯ ಒಂದು ಚಿಕಿತ್ಸೆಯನ್ನು ಕೊಟ್ಟಿದ್ದಾರೆ ಎನ್ನುವ ವಿಷಯದಲ್ಲಿ ನಾನು ಮನನೊಂದು ಹೇಳಬೇಕಾಗುತ್ತದೆ. ದುಡ್ಡು ಮತ್ತು ಇನ್‌ಫ್ಲೂಯೆನ್ಸ್ ಇಲ್ಲದೇ ಹೋದರ ಯಾವ ಆಸ್ಪತ್ರೆಯಲ್ಲಿಯೂ ಸಹ ಮಾತನಾಡುವುದಿಲ್ಲ ಎಂದು ನಾನು ಹೇಳುತ್ತೇನೆ.

ಇವೊತ್ತು ಅಸ್ಪತ್ರೆಗಳಲ್ಲಿ ತಿಂಗಳಿಗೆ 100 ರೂಪಾಯಿ ಆದಾಯ ಇರತಕ್ಕವರಿಗೆ ಉಚಿತವಾಗಿ ಔಷಧಿಯನ್ನು ಕೊಡತಕ್ಕ ಒಂದು ನಿಯಮವನ್ನು ಇಟ್ಟಿದ್ದಾರೆ. ಇವರಿಗೆ ಇಷ್ಟೋ ಆದಾಯ ಬರುತ್ತದೆ ಎಂದು ಅದನ್ನು ಅಳತೆ ಮಾಡತಕ್ಕವರು ಯಾರು? ನಿರ್ದಿಷ್ಟವಾಗಿ ನಿಖರವಾಗಿ ಯಾರು ಯಾರಿಗೆ ಎಷ್ಟೆಷ್ಟು ಆದಾಯ ಬರುತ್ತದೆ ಎಂಬುದನ್ನು ಕಂಡು ಹಿಡಿಯ ತಕ್ಕವರು ಯಾರು? ಪ್ರತಿಯೊಬ್ಬ 100 ರೂಪಾಯಿ ಆದಾಯ ಬರುತ್ತದೆ ಎಂದು ಹೇಳುತ್ತಾರೆ. ಅದರಂತೆ ಪುಸ್ತಕದಲ್ಲಿ ಬರೆದು ಕೊಳ್ಳುತ್ತಾರೆ. ಇದರಿಂದ ಏನಾಗಿದೆ ಎಂದರೆ, ಬಡವನಿಗೆ ನಿಜವಾಗಿ ಸೌಲಭ್ಯ ದೊರೆಯುವುದಿಲ್ಲ. ತಮ್ಮ ಒಂದು ನಿಯಮದ ತಳಹದಿಯಲ್ಲಿ ಶ್ರೀಮಂತರು ಸರ್ಕಾರದ ಸವಲತ್ತನ್ನು ಪಡೆದು ಕೊಳ್ಳುತ್ತಿದ್ದಾರೆ. ಆದ್ದರಿಂದ ಆದಷ್ಟು ಮಟ್ಟಿಗೆ ಅದರ ಬಗ್ಗೆ ಸರ್ಕಾರದವರು ಎಚ್ಚರಿಕೆಯನ್ನು ವಹಿಸಬೇಕು. ಬಡವರಿಗೆ ಉತ್ತಮವಾದ ಔಷಧಿಯ ಸೌಲಭ್ಯ ದೊರೆಯುವ ಬಗ್ಗೆ ವ್ಯವಸ್ಥೆ ಮಾಡಬೇಕು ಎಂದು ನಾನು ಹೇಳಬಯಸುತ್ತೇನೆ.

ಇನ್ನು ಆಸ್ಪತ್ರೆಗಳಲ್ಲಿ ವಿಜಿಟರ್ಸ್ ಬೋರ್ಡ್ ಎಂದು ಮಾಡತಕ್ಕ ಒಂದು ನಿಯಮವನ್ನು ಸರ್ಕಾರದವರು ಇಟ್ಟು ಕೊಂಡಿದ್ದಾರೆ. ಯಾವ ಯಾವ ಆಸ್ಪತ್ರೆಯಲ್ಲಿ ಈ ವಿಜಿಟಿಂಗ್ ಬೋರ್ಡನ್ನು ರೀಕಾನ್ಸ್ಟಿಟ್ಯೂಟ್ ಮಾಡಿದ್ದಾರೆ, ಅಲ್ಲಿ ಆ ಬೋರ್ಡುಗಳು ಇವೆಯೋ, ಇದ್ದರೆ ಅವು ಎಷ್ಟರ ಮಟ್ಟಿಗೆ ಕೆಲಸಮಾಡುತ್ತಿವೆ ಎಂಬುದನ್ನು ತಿಳಿಸಬೇಕು. ಮಾನ್ಯ ಆರೋಗ್ಯ ಮಂತ್ರಿಗಳು ಸ್ವತಃ ತಜ್ಞರು ಆಗಿರುವುದರಿಂದ ಈ ಇಲಾಖೆಯಲ್ಲಿ ಸಾಕಷ್ಟು ಸುಧಾರಣೆಯನ್ನು ಮಾಡುತ್ತಾರೆ ಎಂದು ನಾವು

(ಶ್ರೀ ಎಚ್. ಡಿ. ದೇವೇಗೌಡ)

ನಂಬಿಕೊಂಡಿದ್ದೆವು. ಆದರೆ ಮೆಡಿಕಲ್ ಮತ್ತು ಪಬ್ಲಿಕ್ ಹೆಲ್ತ್ ಇಲಾಖೆಗಳ ಒಕ್ಕೂಟ ಮಾಡತಕ್ಕ ಒಂದು ಸುಧಾರಣೆಯನ್ನು ಮಾಡಿದ್ದಾರೆಯೇ ಹೊರತು ಇನ್ನಾವ ಸುಧಾರಣೆಯನ್ನೂ ಸಾಕಷ್ಟು ಮಾಡಿಲ್ಲ. ನೌಕರರ ಸೀನಿಯಾರಿಟಿಯ ಬಗ್ಗೆ ಇದ್ದಂತಹ ತೊಂದರೆಗಳನ್ನು ನಿವಾರಣೆ ಮಾಡುವುದಾಗಲೀ ಅಥವಾ ಇನ್ನು ಯಾವುದೇ ಸುಧಾರಣೆಯಾಗಲೀ ಆಗಿದೆ ಎಂದು ತಿಳಿದುಕೊಂಡಿದ್ದರೆ ಅದು ತಪ್ಪಾಗುತ್ತದೆ. ಹೆಚ್ಚಿನ ತಜ್ಞತೆಯನ್ನ ಹೊಂದಿರತಕ್ಕವರು ಈ ಇಲಾಖೆಯಲ್ಲಿ ಮಾಡತಕ್ಕ ಅನೇಕ ಲೋಪದೋಷಗಳನ್ನು ಆದಷ್ಟು ಮಟ್ಟಿಗೆ ಮಾರ್ಪಾಡು ಮಾಡಬೇಕು. ಸರ್ಕಾರದ ಋಣವನ್ನು ತಿನ್ನತಿಕ್ಕವರು ಅದನ್ನು ತೀರಿಸತಕ್ಕ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕು ಎನ್ನುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು. ಈ ಇಲಾಖೆಯಲ್ಲಿ ಸರಿಯಾದಂತಹ ವ್ಯವಸ್ಥೆಯನ್ನ ಮಾಡದೇ ಹೋದರೆ ಏನೂ ಪ್ರಯೋಜನವಾಗುವುದಿಲ್ಲ. ಈ ಹಣವನ್ನು ಖರ್ಚು ಮಾಡತಕ್ಕ ಬಗ್ಗೆ ಡಾಕ್ಟರು ಮತ್ತು ಮೆಡಿಕಲ್ ಗ್ರಾಜುಯೇಟ್ಸ್ ಅರ್ಥ ಮಾಡಿಕೊಳ್ಳಬೇಕು. ಸಮಾಜದ ಋಣವನ್ನು ತೀರಿಸುವ ಬಗ್ಗೆ ವಿಫಲರಾಗಬಾರದು. ಅವರು ತಮ್ಮ ಕರ್ತವ್ಯವನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸುವಂತಹ ಮನೋಭಾವ ಬೆಳೆಯುವುದಕ್ಕೆ ಅವಕಾಶವನ್ನು ಕಲ್ಪಿಸಬೇಕು ಎಂದು ನಾನು ಸರ್ಕಾರದವರನ್ನ ಕೇಳಿಕೊಳ್ಳುತ್ತೇನೆ.

